ಸಂಪಾದಕೀಯ

ಕನ್ನಡಿಗರ ಪುಸ್ತಕಪ್ರೇಮ

ಜಾನಪದ ಸಾಹಿತ್ಯ ಹೇಗೆ ಮೌಖಿಕವೋ, ವೈದಿಕ ಸಾಹಿತ್ಯವೂ ಕರ್ಣಾನುಕರ್ಣಿ ಸಾಹಿತ್ಯವೆ. ಬುಡಕಟ್ಟು ಜನಾಂಗದವರಂತೆ ಆರ್ಯರು ಕೂಡ ಅನಿಕೇತನರೆ. ಆದರೆ ಹರಪ್ಪ, ಮೊಹೆಂಜೊದಾರೊ, ಸಿಂಧು ನಾಗರಿಕತೆಯ (ಬಹುಶಃ ದ್ರಾವಿಡರು) ನಾಗರಿಕರು, ಪಟ್ಟಣವಾಸಿಗಳು, ನಿಕೇತನರು ಹಾಗೂ ಬಹು ಮುಖ್ಯವಾಗಿ ಲಿಪಿಬಲ್ಲ ಗ್ರಾಂಥಿಕರು. ಅಗ್ನಿ, ವರುಣ, ರುದ್ರ, ಸೂರ್ಯ ಮುಂತಾದ ಪ್ರಕೃತಿ ದೇವತೆಗಳ – ಭೂತಗಳ ಆರಾಧನೆಯಲ್ಲಿಯೇ ಇದ್ದ, ಪುರುಷಶಕ್ತಿ ಸಮಾಜದ ಆರ್ಯರು; ವಿಷ್ಣು, ಶಿವ, ಬ್ರಹ್ಮ ಹಾಗೂ ಮುಖ್ಯವಾಗಿ ಸ್ತ್ರೀ-ಶಕ್ತಿ ಸಮಾಜದ ಎಷ್ಟೋ ಸಂಗತಿಗಳನ್ನೂ ದಿನ ಕ್ರಮೇಣ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡವರು. ಹೀಗಾಗಿಯೇ ಲಿಪಿ-ಗ್ರಂಥ ಶಾಸನಗಳನ್ನೂ ಕೆಲವೊಮ್ಮೆ ಒಪ್ಪಿ ಕೆಲವೊಮ್ಮೆ ತಳ್ಳಿಹಾಕಿ, ವೈದಿಕ ಸಾಹಿತ್ಯದಲ್ಲಿ ಸಂಸ್ಕೃತೀಕರಣಗೊಳಿಸಿಕೊಂಡವರು ಆರ್ಯರೆ. ಹೀಗೆ ಬೆಳೆಯುತ್ತ ಬಂದ ಆರ್ಯಶಕ್ತಿಯ ವಿರುದ್ಧ, ಮೊದಲು ಹೋರಾಟ ನಡೆಸಿದವನು ಪ್ರಾಕೃತ ಬುದ್ಧ ಎಂಬುದು ಮುಖ್ಯ ಸಂಗತಿ. ದೇಸೀಯ ಭಾಷೆ, ಸಂಸ್ಕೃತಿ, ಜನಾಂಗಕ್ಕೆ ಈ ಮೂಲಕ ಬೌದ್ಧಶಕ್ತಿಯನ್ನು ತಂದು ಕೊಟ್ಟವನು ಆ ಕ್ಷತ್ರಿಯ ಗೌತಮಬುದ್ಧನೇ. ಆರ್ಯರ ಸಂಸ್ಕೃತೀಕರಣದ ಬೆಡಗಿನಲ್ಲಿ ಪ್ರಾಕೃತ ಬೌದ್ಧಶಕ್ತಿ ಮತ್ತೆ ಮತ್ತೆ ಗುದ್ದಾಡಿ ಎದ್ದು ಬಿದ್ದು ಇವತ್ತಿಗೂ ಉಸಿರಾಡುತ್ತಿದೆ ಎಂಬುದಕ್ಕೆ ಅನೇಕ ಸಾಕ್ಷಿಗಳಿವೆ. ಅದಕ್ಕೆ ಭಾಷಿಕವಾಗಿ ಕನ್ನಡವನ್ನು, ಸಾಮಾಜಿಕವಾಗಿ ಅಂಬೇಡ್ಕರ್ ಮತ್ತು ಜಗಜೀವನರಾಮ್ ಅವರ ಸಂತತಿಯ ಬದುಕನ್ನು ಕಣ್ಣಾರೆ ಕಾಣಬಹುದು.

ಇಂತಹ ಆರ್ಯ ಸಂಸ್ಕೃತೀಕರಣದ ವಿರುದ್ಧ, ಕನ್ನಡದ ಶಕ್ತಿಯಾಗಿ ಮೊದಲು ದನಿ ಎತ್ತಿದವನು ಪೂರ್ವಕ್ಕೆ ಬ್ರಾಹ್ಮಣರಾಗಿದ್ದು ಜೈನರಾಗಿ ಪರಿವರ್ತನೆಗೊಂಡ ಆದಿಕವಿ ಪಂಪ. ವ್ಯಾಸ, ವಾಲ್ಮೀಕಿ, ಭಾಸ, ಕಾಳಿದಾಸ, ಭವಭೂತಿ ಸಂಸ್ಕೃತಕ್ಕೆ ಸರಿಮಿಗಿಲಾಗಿ ಕನ್ನಡವನ್ನು ಹುರಿಗೊಳಿಸಿ, ಸಾವಿರಾರು ವರ್ಷಗಳ ಪರಂಪರೆಯ ಕನ್ನಡ ಚಳವಳಿಗೆ, ಹೋರಾಟಕ್ಕೆ, ಕ್ರಾಂತಿಗೆ ಸುಭದ್ರ ಬುನಾದಿ ಹಾಕಿದವನು ಕನ್ನಡ ಶಕ್ತಿಯ ಪಂಪನೇ. ಯಜ್ಞ ಯಾಗ ರಾಜ ಮಹಾರಾಜ ಪಂಡಿತ ಗುರುಕುಲ ಮಂಡಿತರ ಸೊತ್ತಾಗಿದ್ದ ಸಾಹಿತ್ಯ, ಓದು, ಪುಸ್ತಕಪ್ರೇಮವನ್ನು; ನಾಡಾಡಿಗಳಿಗೆ ತಂದು ಉಣ ಬಡಿಸಿದ ಕನ್ನಡಶಕ್ತಿ ಪಂಪನಿಂದಲೇ ಆರಂಭಗೊಂಡಿದ್ದು ವಿಶೇಷ:

> "ಪುದಿದಿರೆ ರಾಗಮುರ್ಕೆ ಪೊಸವೇಟದಲಂಪುಗಳೆಲ್ಲಮೋದಿದ
> ರ್ಗಿದರನುಯಾಯಿಗಳ್ಗೆಸೆವುದಾರ ಗುಣಂ ಸಕಳಾವನೀಶ್ವರ
> ರ್ದದಟನಲುರ್ಕೆ ಭೃತ್ಯನಿವಹಕ್ಕೆ ಚದುರ್ ಗಣಿಕಾ ಜನಕ್ಕೆ ಕುಂ
> ದದೆ ನೆಲಸಿರ್ಕೆಯಿೂ ಮಹಿತಳಕ್ಕೆ ಮದೀಯ ಕೃತಿಪ್ರಬಂಧದಿಂ"
>
> ವಿಕ್ರಮಾರ್ಜುನ ವಿಜಯಂ, ಆಶ್ವಾಸ ೧೪, ಪದ್ಯ ೬೩

ಆಳುವ ವರ್ಗ, ದುಡಿಯುವ ವರ್ಗಗಳಿಗೆ ಮಾತ್ರವೇ ಅಲ್ಲ, ಪುರುಷ ಸಮಾಜದಿಂದ ಶೋಷಿತರಾದ ಸೂಳೆಯರ ವರ್ಗಕ್ಕೂ ಕನ್ನಡ ಕಾವ್ಯ-ಸಾಹಿತ್ಯ-ಓದು-ಪುಸ್ತಕಪ್ರೇಮ ಮುಟ್ಟುವಂತೆ ಮಾಡಿದ ಪರಿಕಲ್ಪನೆಯೇ ವಿಶಿಷ್ಟವಾದದ್ದು.

ಬುದ್ಧ, ಪಂಪರಿಂದ ಪ್ರಾರಂಭಗೊಂಡ ದೇಸೀಶಕ್ತಿಗೆ ಇನ್ನೊಂದು ಪುಟ ಬಂಗಾರವಿಕ್ಕಿದ ಸ್ತ್ರೀಶಕ್ತಿ ಅತ್ತಿಮಬ್ಬೆ, ಆಗತಾನೇ ಶಿಲಾಶಾಸನ, ತಾಮ್ರಶಾಸನಗಳ ನೆಲದಲ್ಲಿ ಅರಳುತ್ತಿದ್ದ ಕನ್ಯೆ ತಾಳೆಗರಿ ಸಾಹಿತ್ಯಕ್ಕೆ ಜೀವಧಾರೆ ಎರೆದ ದಾನಚಿಂತಾಮಣಿ. ಪೊನ್ನ, ರನ್ನರ ಕಾವ್ಯಗಳನ್ನು ಸಾವಿರಾರು ಪ್ರತಿಮಾಡಿಸಿ, ಮನೆಮನೆಯ ಕನ್ನಡದ ನಂದಾದೀಪ ಬೆಳಗಿಸಿದ ಕಣ್ಮಣಿ.

ಈ ಮೂಲಕ ಪ್ರಾದೇಶಿಕ ಭಾಷೆಯಲ್ಲಿ ಸಾಹಿತ್ಯ ರಚನೆ, ಪ್ರತಿಮಾಡಿಸಿ ಹಂಚುವ ಸಾಮಾಜಿಕ ಕಾರ್ಯಕ್ರಮಗಳು, ವೈದಿಕರ ವಿರುದ್ಧವೋ ಎನ್ನುವಂತೆ, ಕನ್ನಡ ಭಾಗ್ಯ ಎನ್ನುವಂತೆ ಜೈನಧರ್ಮದವರು

ಸತತವಾಗಿ ಮಾಡಿಕೊಂಡು ಬರಲುತೊಡಗಿದರು. ಧರ್ಮದ ಒಂದು ಭಾಗ, ಕ್ರಿಯಾವಿಧಿಯೇ ಪುಸ್ತಕ, ಓದು ಆದವು.

ಮೂರನೆಯ ಮೆಟ್ಟಿಲಾಗಿ, ತ್ರಿವಿಧ ದಾಸೋಹದಲ್ಲಿ ಕಾಯಕವೇ ಕೈಲಾಸ ಎಂಬ ಪರಮಾಧಿಕ್ಯವನ್ನು ಈ ನೆಲದ ಒಡಲಾಳದಿಂದಲೇ ದೃಢೀಕರಿಸಿ ತೋರಿಸಿದ ಇನ್ನೊಂದು ಕನ್ನಡಶಕ್ತಿ ಶಿವಶರಣರು. ವರ್ಣಭೇದ, ಲಿಂಗಭೇದ, ವರ್ಗಭೇದ, ನೆಲ ಮುಗಿಲ ಕರ್ಮ ಮೋಕ್ಷ ಭೇದಗಳಲ್ಲಿ ಬದುಕು ಚೆಲ್ಲಾಪಿಲ್ಲಿಯಾದ–ಅಂತಹ ಪಟ್ಟಭದ್ರ ಮೇಲುವರ್ಗದ ವ್ಯವಸ್ಥೆಯಲ್ಲಿ, ಗುರು ಲಿಂಗ ಜಂಗಮ ಒಂದೇ ಎಂಬ ವೀರಶೈವ ತತ್ತ್ವನಿಷ್ಠೆಯಲ್ಲಿ ಕಲ್ಯಾಣ ಕ್ರಾಂತಿಗೆ ತೊಡಗಿದವರು ಬಸವ, ಅಲ್ಲಮ, ಅಕ್ಕಮಹಾದೇವಿ ಮುಂತಾದ ಕನ್ನಡ ಶರಣರು. ಹೀಗಾಗಿ ಭಂಡಾರ ಕಾಯುವುದು, ಜ್ಞಾನ ಬೋಧಿಸುವುದು, ಎಕ್ಕಡ ಹೊಲೆಯುವುದು, ಆಯ್ದು ಕಾಳು ತರುವುದು, ಬಟ್ಟೆ ಒಗೆಯುವುದು – ಯಾವುದೂ ಮೇಲಲ್ಲ ಕೀಳಲ್ಲ. ವಿಶ್ವದ ಸಮಾಜವಾದದ ನೆಲೆ ಚಿಗುರಿದ್ದು ಕನ್ನಡ ಕಲ್ಯಾಣದಲ್ಲಿ. ಈ ಸಾಲಿನಲ್ಲಿಯೇ ಓಲೆಭಂಡಾರ ಕಾಯುವುದು, ಓಲೆಗರಿ ಪ್ರತಿಮಾಡುವುದು ಕೂಡ ಶಿವಶರಣರ ಸಮಗ್ರ ದೃಷ್ಟಿಯ ಅವಿಭಾಜ್ಯ ಅಂಗವಾಗಿತ್ತು ಎಂಬುದು ವಿಶೇಷ. ಹೀಗಾಗಿ ಓಲೆಯ ಶಾಂತರಸ, ಓಲೆಯ ರಾಮಯ್ಯ ತಮ್ಮ ಪ್ರೀತಿಯ ಪುಸ್ತಕ ಪ್ರೇಮವನ್ನು ಈ ಮೂಲಕ ಉಳಿಸಿಕೊಂಡು ಬಂದರು ಎಂಬುದೇ ಕನ್ನಡಿಗರ ಪುಣ್ಯವೇ ಸರಿ.

ಭಾರತಕ್ಕೆ ಕಾಲಿಟ್ಟ ಇಸ್ಲಾಂ ಧರ್ಮೀಯರು, ದಕ್ಷಿಣ ಭಾರತದ ಕಡೆಗೂ ಕ್ರಮೇಣ ಮನಸ್ಸಿಟ್ಟುಕೊಂಡದ್ದು ಅಸಹಜವೇನಲ್ಲ. ಒಂದು ಕಡೆ ಸಂಪತ್ತಿನ ಲೂಟಿ, ರಕ್ತಕ್ರಾಂತಿಯ ಜೊತೆಗೆ, ಧರ್ಮ ಹಾಗೂ ಸಂಸ್ಕೃತಿಯಲ್ಲೂ ಬದಲಾವಣೆಗೆ ಕಾರಣರಾದರು. ಅದರಲ್ಲೂ ಒಂದು ಕೈಯಲ್ಲಿ ಕತ್ತಿ, ಇನ್ನೊಂದು ಕೈಯಲ್ಲಿ ದಿವ್ಯಕುರಾನ್ ಹೇಗೋ ಹಾಗೆಯೇ, ಕಣ್ಣುಗಳಲ್ಲಿ ಸೌಂದರ್ಯ – ಶ್ರೀಮಂತಿಕೆಯನ್ನು ಸದಾ ತುಂಬಿಕೊಂಡವರು. ಘಜನಿ ಅಂತಹ ರಾಕ್ಷಸರು ಬಂದರೂ ಬಾಬರ್‌ನಂತಹ ಕವಿ, ಅಬ್ದುಲ್ ರಜಾಕನಂತಹ ಕಲಾವಿದ, ಅಕ್ಬರ್‌ನಂತಹ ಸರ್ವಧರ್ಮ ಸಹಿಷ್ಣು ಕೂಡ ಅಲ್ಲಿಂದಲೇ ಅವತರಿಸಿದವರು. ಹಾಗೆಯೇ ಸೂಫೀ ತತ್ತ್ವ ಸಿದ್ಧಾಂತಗಳು, ಮನಮೋಹಕ ವಾಸ್ತು ಶಿಲ್ಪ ಚಿತ್ರ ಕಲೆಗಳು, ಹಿಂದೂಸ್ತಾನಿಯಂತಹ ಸಂಗೀತ ಸುಧೆ, ಈ ನೆಲದಲ್ಲಿಯೂ ಹೂ, ಕಾಯಿ, ಹಣ್ಣಾಗಿ ಫಲ ನೀಡಿದ್ದು ಕೂಡ ಸುಳ್ಳಲ್ಲ. ಇವುಗಳ ಸಾಲಿಗೆ ಸೇರಿದ ಇನ್ನೊಂದು ಮಹತ್ತ್ವದ ಕ್ರಾಂತಿ, ಭಾರತಕ್ಕೆ ಕಾಗದವನ್ನು ಆ ಮೂಲಕ ಪುಸ್ತಕವನ್ನು ಸಾಂಸ್ಕೃತಿಕ ಲೋಕಕ್ಕೆ ವರವಾಗಿ ನೀಡಿದ್ದು, ಇಸ್ಲಾಂ ಧರ್ಮೀಯರೇ ಎಂಬುದನ್ನು ಯಾರೂ ಮರೆಯಬಾರದು.

ಬಹಮನೀ ಸುಲ್ತಾನನ ಮಂತ್ರಿ ಮಹಮದ್‌ಗವಾನ್, ಕನ್ನಡ ಶಕ್ತಿ ಪಡೆದ ನಾಲ್ಕನೆಯ ಮೆಟ್ಟಿಲ ಸೌಂದರ್ಯ ತತ್ತ್ವದ ಪ್ರಬಲ ಸಂಕೇತ. ಆಳುವ ಮಾನವನ ಶಾಶ್ವತ ದೌರ್ಬಲ್ಯ : ಸಂಶಯ ಪಿಶಾಚಿ ಹಾಗೂ ಹಿತ್ತಾಳೆ ಕಿವಿ. ಸರಳ ಸಜ್ಜನ ನಿಷ್ಠಾವಂತ ಸಂತ ರಾಜಕಾರಣಿ ಗವಾನನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿದ ಸುಲ್ತಾನ, ಕೊಲ್ಲಿಸಿದ. ಪರೀಕ್ಷಿಸಲಾಗಿ ಗವಾನನ ಮನೆಯಲ್ಲಿದ್ದದ್ದು ಚಾಪೆ, ಮಡಿಕೆ ಕುಡಿಕೆ, ಮುಖ್ಯವಾಗಿ ಪುಸ್ತಕಗಳು. ಗವಾನನ ಬದುಕು ಜೀವಂತಿಕೆಗೆ ಪುಸ್ತಕಗಳೇ ಕಾರಣ. ಅಂತಹ ಪುಸ್ತಕಪ್ರೇಮ ಕನ್ನಡ ನೆಲದ ಗವಾನರದ್ದು.

ಬಂದದ್ದು ನೆಲ ಅಳೆಯುವ, ಭೂಪಟ ನಿರ್ಮಿಸುವ ಉನ್ನತ ಅಧಿಕಾರಿಯಾಗಿ. ಎಳೆತನದಿಂದ ಗಣಿತಶಾಸ್ತ್ರದ ಹುಚ್ಚು. ಜಗತ್ತಿನ ಎಲ್ಲ ಧರ್ಮೀಯರ, ಜನಾಂಗದ ಗಣಿತದ ನೆಲೆ ತಿಳಿಯುವ ಮಹತ್ತ್ವಾಕಾಂಕ್ಷೆ, ಜ್ಞಾನದ ಹಸಿವು. ಇದೇ ಸಾವಿರಾರು ಹಸ್ತಪ್ರತಿ ಸಂಗ್ರಹಕ್ಕೆ ಕಾರಣವಾಯಿತು. ಅಲ್ಲಿಯವರೆಗೆ ಆ ಜಾತಿಯ ಮಠ, ಈ ಧರ್ಮದ ಗುಡಿ, ಆ ಅರಮನೆಯ ಭಂಡಾರವಾಗಿದ್ದ ಜ್ಞಾನ ಸಂಪತ್ತು, ಮೊಟ್ಟ ಮೊದಲಿಗೆ ಸಾರ್ವಜನಿಕ ಗ್ರಂಥಾಲಯವಾಗಿ ಬೆಳೆಯಲು ಕಾರಣವಾಯಿತು. ಇದೇ ಅಯಿದನೇ ಕನ್ನಡಶಕ್ತಿ ಕರ್ನಲ್ ಕೊಲಿನ್ ಮೆಕೆಂಜಿ. ಮುಂದೆ ಮೊಗ್ಲಿಂಗ್, ರೈಸ್, ಫ್ಲೀಟ್ ಕಿಟ್ಟಲ್–ಹೀಗೆ ಕನ್ನಡ ಸಾರಸ್ವತ ಲೋಕಕ್ಕೆ ಜ್ಞಾನದ ಧ್ರುವತಾರೆಗಳಾದ ನಿಶುದ್ಧ ಕನ್ನಡಿಗರು ಇವರು.

ಆರನೆಯ ಮೆಟ್ಟಿಲು ಅವತರಿಸುವ ಹೊತ್ತಿಗೆ ರಾಷ್ಟ್ರದಲ್ಲಿ ಸ್ವಾತಂತ್ರ್ಯದ, ನ್ನಾಡಿನಲ್ಲಿ ಏಕೀಕರಣದ ಹೋರಾಟದಲ್ಲಿ ಧರ್ಮ, ಶಿಕ್ಷಣ, ಸಂಸ್ಕೃತಿ, ಸಮಾಜ ತನ್ನ ನೆಲೆ ಕಂಡುಕೊಳ್ಳುವ ಪ್ರಯತ್ನದಲ್ಲಿ ತೊಡಗಿತ್ತು. ಅದರ ಸಂಕೇತವಾಗಿ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಹಾಗೂ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಮುಂತಾದವರ ಪ್ರಜಾಪ್ರೀತಿಯ ಫಲವಾಗಿ ವಿಶ್ವವಿದ್ಯಾಲಯ, ಸಾಹಿತ್ಯ ಪರಿಷತ್ತು, ಗ್ರಂಥ ಪ್ರಕಟಣೆಗಳು, ಅರ್ಥ ಸಾಧಕ ಪತ್ರಿಕೆ, ಬ್ಯಾಂಕು ಮುಂತಾದುವು ಶುರುವಾದವು. ಈ ಸುಮಾರಿಗೇ ಉತ್ತರ ಕರ್ನಾಟಕದಲ್ಲಿ ಪ್ರಜಾಪ್ರತಿನಿಧಿಗಳೇ ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ಕನ್ನಡ, ಕರ್ನಾಟಕ, ಕನ್ನಡಿಗರ ಸಮಗ್ರ ಏಳಿಗೆಗಾಗಿ ಕಾರ್ಯಕ್ರಮ ಹಾಕಿಕೊಟ್ಟರು. ಇವುಗಳ ಸಂಕೇತವೇ ಜಿ. ಹನುಮಂತರಾವ್ ಅಂತಹವರು ಪ್ರಾರಂಭಿಸಿದ ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆ. ಜಗತ್ತಿನಲ್ಲಿಯೇ ಮೈಸೂರು ಪ್ರಯೋಗ ಎಂಬ ಕೀರ್ತಿಗೆ ಪಾತ್ರವಾದದ್ದು. ಇನ್ನೊಂದು ಬದಿಗೆ, ಕರ್ಮಠ ಬ್ರಾಹ್ಮಣರಾದರೂ ವೈಚಾರಿಕ ಸಾಹಿತ್ಯಕ್ಕಾಗಿಯೇ ಮಿಂಚಿನಬಳ್ಳಿ ಪ್ರಕಾಶನ ಪ್ರಾರಂಭಿಸಿದ ಬುರ್ಲಿಬಿಂದು ಮಾಧವರಂಥವರಿಂದ ಕನ್ನಡಿಗರ ಪುಸ್ತಕಪ್ರೇಮ ವಿಸ್ತಾರಗೊಳ್ಳಲು ಸಾಧ್ಯವಾಯಿತು. ಅಷ್ಟೇ ಮಟ್ಟಿಗೆ ಪುಸ್ತಕದ ವಿನ್ಯಾಸಕ್ಕೆ ಲಂಡನ್‌ನಲ್ಲಿ ಕಲಾಕೃತಿ ಮುದ್ರಿಸಿ ತರಿಸುವ ಮಟ್ಟಿಗೆ, ದೇಶವಿದೇಶದಿಂದ ನಾನಾ ಜ್ಞಾನ ಶಾಖೆಯ ಪತ್ರಿಕೆಗಳು, ಪುಸ್ತಕಗಳನ್ನು ಕೊಳ್ಳುವ ಮಟ್ಟಿಗೆ ಬಹುಮುಖೀ ಆಸಕ್ತಿಯ ವಿ. ಸೀತಾರಾಮಯ್ಯ ಅವರಿಂದ ಕನ್ನಡ ಓದು, ಪುಸ್ತಕ ಪ್ರೇಮದ ಹಿರಿಮೆ ಬೆಳೆಯಿತು.

ಬಾಲಪ್ರಪಂಚ, ವಿಜ್ಞಾನಪ್ರಪಂಚ, ಕಲಾಪ್ರಪಂಚ, ಪ್ರಾಣಿಪ್ರಪಂಚಗಳಂತಹ ಕೋಶರಚನೆಗಾಗಿ ಪವಾಡ ಸದೃಶವಾಗಿ ದುಡಿದ ಕೋಟ ಶಿವರಾಮ ಕಾರಂತರು, ಸ್ವತಃ ಮುದ್ರಣಶಾಲೆ ಇಟ್ಟವರು. ಜಿ.ಪಿ. ರಾಜರತ್ನಂ ಅಂತಹ ವಿದ್ವಾಂಸರೇ ಒಂದು ಕಡೆ ಬರೆಯುತ್ತ, ನಮ್ಮ ವಿಶ್ವವಿದ್ಯಾನಿಲಯದ ಗುರುಗಳು ಇನ್ನೂ ಕಂಡು – ಕೇಳಿರದ ಪುಸ್ತಕಗಳನ್ನು ಕೊಂಡು – ಓದಿ – ನೀವೂ ಓದಿದ್ದೀರಾ ಎನ್ನುತ್ತಿದ್ದರಂತೆ ಅನ.ಕೃಷ್ಣರಾಯರು.

ಹೀಗೆ ಪಂಪ, ಅತ್ತಿಮಬ್ಬೆ, ಓಲೆಯ ಶಾಂತರಸ, ಓಲೆಯ ರಾಮಯ್ಯ, ಮಹಮದ್ ಗವಾನ್, ಕರ್ನಲ್ ಕೊಲಿನ್ ಮೆಕೆಂಜಿ, ಜಿ. ಹನುಮಂತರಾವ್, ಬುರ್ಲಿಬಿಂದು ಮಾಧವ, ವಿ. ಸೀತಾರಾಮಯ್ಯ, ಕೋಟ ಶಿವರಾಮ ಕಾರಂತ, ಅ.ನ.ಕೃಷ್ಣರಾಯ – ಅಂತಹ ಕನ್ನಡ ಪುಸ್ತಕ ಪ್ರೇಮಿಗಳ ಅಂತಃಸತ್ತ್ವ, ಅಂತಃಕರಣ, ಅನುರಾಗ ಇಲ್ಲದೇ ಇರುವುದರಿಂದ; ಕನ್ನಡಕ್ಕಾಗಿ ಕನ್ನಡ ಪುಸ್ತಕಪ್ರೇಮಕ್ಕಾಗಿ ಈಗ ಮತ್ತೊಮ್ಮೆ ಚಳವಳಿ, ಹೋರಾಟ, ಕ್ರಾಂತಿ ಮಾಡಬೇಕಾಗಿದೆ. ಜಗತ್ತಿನ ಯಾವ ಭಾಷೆಗೂ ಯಾವ ಸಾಹಿತ್ಯಕ್ಕೂ ಯಾವ ಪುಸ್ತಕ ಪ್ರೇಮಿಗಳಿಗೂ ಕಡಿಮೆ ಇಲ್ಲದ ಶಕ್ತಿ, ಸಾಮರ್ಥ್ಯ, ಯೋಗ್ಯತೆ ಇದ್ದೂ; ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಶಕ್ತಿಯ ಕೊರತೆಯಿಂದಾಗಿ ಮೂಲೆಪಾಲಾಗಿದ್ದೇವೆ. ಇಂದಲ್ಲ ನಾಳೆ, ಕನ್ನಡಕ್ಕೆ ಕನ್ನಡಿಗರಿಗೆ ಕರ್ನಾಟಕಕ್ಕೆ ನ್ಯಾಯ ದೊರಕಿ ತಲೆಎತ್ತಿ ಬಾಳುವಂತೆ ಆದೀತೆಂದು ನಿರೀಕ್ಷಿಸುತ್ತೇನೆ. ❑

ಪ್ರಿಯ ಶ್ರೀ ಹರಿಹರಪ್ರಿಯ ಅವರಲ್ಲಿ,

ನೀವು ಸಂಪಾದಕರಾಗಿ ಪ್ರಕಟಿಸಿರುವ 'ಪ್ರಜಾಸಾಹಿತ್ಯ' ಎಂಬ ಪತ್ರಿಕೆ ಇದೀಗ ತಲುಪಿತು. ನಿಮ್ಮ ಹೊಸ ಸಾಹಸಕ್ಕೆ ಅಭಿನಂದನೆಗಳು. ಪತ್ರಿಕೆಯನ್ನು ನೋಡಿದೆ. ಅದು ಅತ್ಯಂತ ಸಕಾಲಿಕವಾಗಿದೆ. ನಿಮ್ಮ ಈ ಪ್ರಯತ್ನ ಯಶಸ್ವಿಯಾಗಲಿ.

ನನ್ನ ವಾರ್ಷಿಕ ಚಂದಾ ೧೫೦ ರೂಪಾಯಿಗಳಿಗೆ ಒಂದು ಚೆಕ್ಕನ್ನು ಲಗತ್ತಿಸಿದ್ದೇನೆ. ವಂದನೆಗಳು.

ನಿಮ್ಮ ವಿಶ್ವಾಸಿ
ಜಿ.ಎಸ್. ಶಿವರುದ್ರಪ್ಪ

ಡಾ॥ ಚೂಡಾಮಣಿ ನಂದಗೋಪಾಲ್

ದೇವಾಲಯ ಮತ್ತು ಮಹಿಳೆ

ಇಂದು ಕಲೆಯನ್ನು ಅಭಿವ್ಯಕ್ತಗೊಳಿಸಲು ಮತ್ತು ಕಲಾನುಭವ ಪಡೆಯಲು ವಿವಿಧ ಕಲಾಮಾಧ್ಯಮಗಳಿವೆ. ಆ ಮಾಧ್ಯಮಗಳ ಸಾಧಕ ಬಾಧಕಗಳು ತಾಂತ್ರಿಕ ಅಗತ್ಯತೆಗೆ ತಕ್ಕಂತೆ ನಮ್ಮ ಕಲಾಪ್ರಕಾರಗಳನ್ನು ತಾತ್ವಿಕವಾಗಿ ತಾಂತ್ರಿಕವಾಗಿ ಅನ್ವಯಗೊಳಿಸಿಕೊಂಡು ಪ್ರತಿಪಾದಿಸಲಾಗುತ್ತದೆ. ಶಿಲ್ಪ, ಚಿತ್ರ, ನೃತ್ಯ ಸಂಗೀತ ಮತ್ತು ನಾಟಕ ಕಲೆಗಳು ದೃಶ್ಯ ಮತ್ತು ಶ್ರವ್ಯಕಲೆಗಳಾಗಿದ್ದು ಕಲಾವಿದನಿಂದಲೇ ಕ್ರಿಯಾತ್ಮಕವಾಗಿ ಅಭಿವ್ಯಕ್ತಗೊಂಡರೂ ಇಂದು ಅವು ಸಿನಿಮಾ, ಟಿವಿ ಮತ್ತು ಪತ್ರಿಕಾ ಮಾಧ್ಯಮಗಳನ್ನು ಬಹಳಷ್ಟು ಅವಲಂಬಿಸಿವೆ. ಕಲಾಪ್ರದರ್ಶನಗಳು ಹೆಚ್ಚಾಗಿ ಗ್ಯಾಲರಿಯಲ್ಲಿ ನಿಯೋಜಿಸಲ್ಪಡುತ್ತವೆ, ನೃತ್ಯ ಸಂಗೀತ ಮತ್ತು ನಾಟಕ ರಂಗಮಂದಿರಗಳಲ್ಲಿ ನಿಯೋಜಿಸಲ್ಪಡುತ್ತವೆ. ಇಂದು ಕಲಾವಿದರಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಹಲವು ಕಲಾ ಪ್ರತಿಪಾದನೆಗಳಲ್ಲಿ ಸ್ತ್ರೀ ಪ್ರಧಾನ ಮತ್ತು ಪುರುಷ ಪ್ರಧಾನ ಅಭಿವ್ಯಕ್ತತೆಯನ್ನು ಕಾಣುತ್ತೇವೆ. ಉದಾಹರಣೆಗೆ ನೃತ್ಯರಂಗದಲ್ಲಿ ಹೆಚ್ಚಿನ ಸಂಖ್ಯೆಯ ನರ್ತಕಿಯರೂ, ಸಂಗೀತ ವಾದ್ಯವಾದಕರಲ್ಲಿ ಹೆಚ್ಚಿನ ಪುರುಷರನ್ನೂ ಸಾಮಾನ್ಯವಾಗಿ ಗಮನಿಸಬಹುದು.

ಐತಿಹಾಸಿಕ ಕಾಲದಲ್ಲಿ ಕಲಾಪ್ರಕಾರಗಳನ್ನು ಎಲ್ಲಿ ಯಾವ ರೀತಿ ಪ್ರತಿಪಾದಿಸಲಾಗುತ್ತಿತ್ತು ಎನ್ನುವ ಪ್ರಶ್ನೆ ಬಂದಾಗ ದೇವಾಲಯ ರಚನೆ ಮತ್ತು ಸಂಪ್ರದಾಯಗಳು ನಮಗೆ ಎಲ್ಲ ರೀತಿಯ ಉತ್ತರವನ್ನೂ ನೀಡುತ್ತವೆ. ದೇವಾಲಯ ಮತ್ತು ರಾಜಾಲಯಗಳೆರಡೂ ಕಲೆಯ ಅಭಿವ್ಯಕ್ತತೆಯ ಕೇಂದ್ರಗಳಾಗಿ ಮೆರೆದವು. ದೈವಿಕ ಮತ್ತು ಮಾನುಷೀ ವಿಭಿನ್ನ ಪರಿಸರಗಳಲ್ಲಿ ಬೆಳೆದುಬಂದ ಕಲಾಪ್ರಕಾರಗಳು, ಕಲಾವಿದರು, ಕಲಾತತ್ವ, ಪೋಷಕ, ರಸಿಕ ಮುಂತಾದ ಪರಿಕಲ್ಪನೆಗಳನ್ನು ವಸ್ತು ವಿಷಯವಾಗಿರಿಸಿಕೊಂಡು ಅಧ್ಯಯನ ಕ್ಷೇತ್ರವಾಗಿ ಪರಿಭಾವಿಸಿಕೊಂಡಿರುವುದು ಕಲಾ ಇತಿಹಾಸ. ಈ ಕ್ಷೇತ್ರದಲ್ಲಿಯೂ ಸ್ತ್ರೀವಾದಿ ಅಧ್ಯಯನವು ಇತ್ತೀಚೆಗಷ್ಟೇ ಪರಿಚಯವಾದ ಒಂದು ಉಪಭಾಗ. ಈ ನಿಟ್ಟಿನಲ್ಲಿ ಪ್ರಾರಂಭದ ದಿಶೆಯಲ್ಲಿ ನಮ್ಮವರು ಪಾಶ್ಚಾತ್ಯ ಮಾದರಿಯ ಅಧ್ಯಯನ ಕ್ರಮವನ್ನೇ ಅನುಸರಿಸಿದರೂ ಏನೋ ಒಂದು ರೀತಿಯ ಕೊರತೆ ತಲೆದೋರುತ್ತಿತ್ತು. ಕಲಾ ಇತಿಹಾಸದ ಮಾಧ್ಯಮಗಳಲ್ಲಿ ಸ್ತ್ರೀತ್ವಕ್ಕೆ ದೊರೆತ ಪ್ರಾಶಸ್ತ್ಯ, ನಮ್ಮ ಕಲೆಯಲ್ಲಿ ಸ್ತ್ರೀತ್ವದ ಪರಿಕಲ್ಪನೆ, ಸತ್ವವು ಸ್ತ್ರೀವಾದಿ ಸಾಂಸ್ಕೃತಿಕ ಅಧ್ಯಯನಕ್ಕೆ ಒಂದು ಹೊಸ ಅರ್ಥವನ್ನು ಕಲ್ಪಿಸಿಕೊಟ್ಟಿದೆ. ಈ ಅಂತಃಸತ್ವವನ್ನು ಅನುಭವಿಸಿ ತಿಳಿದು ಕಲಾಪ್ರಕಾರಗಳಲ್ಲಿ ಮಹಿಳಾ ಕಲಾವಿದರು ತಮ್ಮತನವನ್ನು ಅಭಿವ್ಯಕ್ತಗೊಳಿಸುತ್ತಿರುವುದರಿಂದ ದೇವಾಲಯಗಳಲ್ಲಿ ಅರಳಿದ ಕಲಾಪ್ರಕಾರಗಳು ಮತ್ತು ಸಂಪ್ರದಾಯಗಳ ಬಗ್ಗೆ ಒಂದು ರೀತಿಯ ಆಸಕ್ತಿ ತಲೆದೋರಲಾರಂಭಿಸಿದೆ. ಇದರ ಹಿನ್ನೆಲೆಯಲ್ಲಿ ವಿವೇಚಿಸಿದಾಗ ದೇವಾಲಯಗಳಲ್ಲಿ ಶಿಲ್ಪ ಮತ್ತು ಚಿತ್ರಗಳಲ್ಲಿ ಸ್ತ್ರೀಯ ಚಿತ್ರಣವು ಭೋಗಲಾಲಸೆಯ ರೂಪದ್ದೆಂಬ ವಾದವು ಅರ್ಥ ಕಳೆದುಕೊಳ್ಳುತ್ತದೆ.

ಭಾರತೀಯ ಕಲೆಯು ಭಾರತೀಯ ಸ್ತ್ರೀತ್ವದ ಕೈಗನ್ನಡಿ. ಯಾವುದೇ ಪುರಾತನ ಅಥವಾ ಮಧ್ಯ ಯುಗೀನ ದೇವಾಲಯ ವಾಸ್ತು ರಚನೆಯನ್ನು ಒಂದು ಸಾಮಾನ್ಯ ಸಮೀಕ್ಷೆಗೆ ಒಳಪಡಿಸಿದರೆ ಈ ಒಂದು ವಾಕ್ಯದ ಸತ್ಯತೆಯ ಅರಿವಾಗುತ್ತದೆ. ವೀಕ್ಷಕನಾಗಿ ಬಂದವನು ಅಲ್ಲಿ ಕಂಡರಿಸಿರುವ ಸ್ತ್ರೀಯರ ವಿವಿಧ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಸುಂದರ ಶಿಲ್ಪಗಳನ್ನು ನೋಡುತ್ತಾ ಒಬ್ಬ ಕಲಾರಸಿಕನಾಗಿ ಮಾರ್ಪಡುತ್ತಾನೆ, ಇದು ಸ್ತ್ರೀ ವೀಕ್ಷಕರಿಗೂ ಅನ್ವಯಿಸುತ್ತದೆ. ಹೀನ್ಜ್‌ಮೋದೆ ಅಭಿಪ್ರಾಯ ಪಡುವಂತೆ "ಭಾರತೀಯ ನಾಗರಿಕತೆಯ ಒಂದು ಅವಿಭಾಜ್ಯ ಅಂಗ ಮತ್ತು ಸಾಧನೆಯೆಂದರೆ ಕಲೆಯಲ್ಲಿ ಸ್ತ್ರೀತ್ವವನ್ನು ಸಹಜ ಹಾವಭಾವಗಳ ಸೌಂದರ್ಯ ತತ್ವಗಳಿಂದ ಅಭಿವ್ಯಕ್ತಗೊಳಿಸಿರುವುದು. ಭಾರತೀಯ ಸ್ತ್ರೀಯರು ಭಾರತೀಯ ಜೀವನ ದರ್ಶನ ಸಂಕೇತಗಳಂತೆ ಬೆಳಗುತ್ತಾರೆ." ಈ ಹೇಳಿಕೆಯ ಹಿನ್ನೆಲೆಯಲ್ಲಿ

ಂಧೂ ನಾಗರಿಕತೆಯ ಮಾತೃದೇವತಾ ವಿಗ್ರಹಗಳಾಗಲಿ, ಚಾರಿತ್ರಿಕ ಯುಗದ ದೇವತೆಗಳ ವಿಗ್ರಹ ಳಾಗಲೀ, ಸಾಲಭಂಜಿಕೆಯರಾಗಲೀ ಸುರಸುಂದರಿಯರಾಗಲೀ, ರಾಣಿ, ರಾಜನರ್ತಕಿ ಹಾಗೂ ೇವದಾಸಿಯರಾಗಲೀ ಅಥವಾ ಸಮಕಾಲೀನ ಕಲೆಯಲ್ಲಿ ಸ್ಪಂದಿಸುವ ಸ್ತ್ರಿ ಮೌಲ್ಯಗಳು ಆಶೋತ್ತರಗಳು ಾರತೀಯ ಸಾಂಸ್ಕೃತಿಕ ಅಧ್ಯಯನದ ಅನನ್ಯ ಸಾರ್ವಕಾಲಿಕ ನಿರೂಪಗಳಾಗುತ್ತವೆ. ಸೌಂದರ್ಯದ ವ್ಯ ಅನುಭವವನ್ನು ಪ್ರಕೃತಿಯ ಮಡಿಲಿನಲ್ಲಿ ಪಡೆಯಬಹುದು. ಅವ್ಯಕ್ತವಾಗಿರುವ ಎಲ್ಲ ಸ್ವರೂಪದ ಚಾರಗಳು, ಭಾವನೆಗಳು ಪ್ರಕೃತಿಯ ಸಿಂಚನದಿಂದ ಸ್ಪಷ್ಟವಾಗಿ ಕಲಾರೂಪ ಪಡೆಯುತ್ತವೆ. ಹೀಗಾಗಿ ಲಾವಿದ ಪ್ರಕೃತಿಯನ್ನು ಅಷ್ಟೇ ಸಹಜತೆಯಿಂದ ಸ್ತ್ರೀರೂಪದಲ್ಲಿ ಕಾಣುತ್ತಾನೆ. ಪ್ರಕೃತಿಯಲ್ಲಿ ಎಲ್ಲಾ ುಣಗಳು, ಸವಾಲುಗಳು ಸತ್ವಗಳನ್ನು ತಾದಾತ್ಮ್ಯವಾಗಿ ಸ್ತ್ರೀಯ ರೂಪದಲ್ಲಿ ಅನುಭವಿಸಿ ವ್ಯಕ್ತಪಡಿಸುತ್ತಾನೆ. ಇದರಿಂದ ಸೌಂದರ್ಯದ ಇನ್ನೊಂದು ಮುಖ ಸ್ತ್ರೀತತ್ವವಾಗಿರುತ್ತದೆ.

ಶಿಲ್ಪ ಮತ್ತು ಚಿತ್ರಗಳಲ್ಲಿ ಕಂಡುಬರುವ ಸ್ತ್ರೀ ಆಕಾರವು ಸಾಮಾನ್ಯವಾಗಿ ಪೂರ್ಣ ಪ್ರಮಾಣದ ಅವಯವಗಳನ್ನು ಹೊಂದಿರುತ್ತದೆ. ಭಂಗಿ, ಭಾವ, ಅಲಂಕರಣ ಸಹಜ ಸಿದ್ಧಾಂತದ ಮೇಲೆ ಆಧರಿಸಿದ್ದರೂ ಅದನ್ನು ಅಭಿವ್ಯಕ್ತಗೊಳಿಸುವಲ್ಲಿ ನಾಗರಿಕತೆಯ ವಿವಿಧ ಘಟ್ಟಗಳ ಪ್ರಭಾವ ಮತ್ತು ಪರಿಸ್ಥಿತಿಗಳು ಪ್ರಮುಖ ಪಾತ್ರ ವಹಿಸುತ್ತವೆ. ವೀಕ್ಷಕನು ರಸಿಕನೂ ಆಗಿರುವುದರಿಂದ ನೋಡುವ ಒಂದು ದೃಷ್ಟಿಯಲ್ಲಿ ರಸಾಪೇಕ್ಷೆಯು ಸಾಮಾನ್ಯವಾಗಿರುತ್ತದೆ. ಹೀಗಾಗಿ ನಮ್ಮ ಬೌದ್ಧ ಶಿಲ್ಪಗಳಲ್ಲಿಯ ಯಕ್ಷಿಯರು, ಹೊಯ್ಸಳ ಶಿಲ್ಪದ ಸಾಲಭಂಜಿಕೆಯರು, ಜಂತೆಯ ರಾಣಿವಾಸದವರು, ನರ್ತಕಿಯರೂ, ಕಲ್ಯಾಣ ಚಾಲುಕ್ಯರ ಕಾಲದ ಸರಸ್ವತೀ (ಗದಗಿನ ಸರಸ್ವತೀ ದೇವಾಲಯ) ಐಹೊಳೆಯ ಮಹಿಷಾಸುರಮರ್ದಿನಿ ಶಿಲ್ಪಗಳು, ವಿಜಯನಗರ ಕಾಲದ ವಸಂತೋತ್ಸವವನ್ನು ಸೂಚಿಸುವ ನರ್ತಕಿಯರು, ಹುಮ್ಮಚ, ಶ್ರವಣಬೆಳಗೊಳದ (ಜೈನ) ಯಕ್ಷಿಯರು ಮುಂತಾದ ರಚನೆಗಳಲ್ಲಿ ತುಂಬು ಅಂಗಸೌಷ್ಠವ ಸೂಚಿಸುವ ಸ್ತ್ರೀಯನ್ನು ನೋಡುವಾಗ ಕಲಾರಸಿಕತೆ ಒಂದು ಮಟ್ಟದಲ್ಲಿರುವುದರಿಂದ ಯಾವುದೇ ರೀತಿಯ ಅಶ್ಲೀಲ ಭಾವನೆಗಳು ತಲೆದೋರಲಾರವು. ದೇವಾಲಯ ಪರಿಸರಗಳಲ್ಲಿ ದೈವಿಕ ಭಾವನೆ ಮೇಲಾಗಿರುತ್ತದೆ. ನಿಜ ಜೀವನ ದಂತೆಯೇ ಕಲಾಮಾಧ್ಯಮಗಳಲ್ಲೂ ಪ್ರತಿಪಾದಿಸುವಂತಾದರೆ ಕಲಾತತ್ವಗಳ ಬೆಳವಣಿಗೆಯೇ ಆಗುತ್ತಿರಲಿಲ್ಲ. ಕಲೆಯಲ್ಲಿ ನಿಜಜೀವನಕ್ಕಿಂತ ಸ್ವಲ್ಪ ದೂರವಾದ ಕಲ್ಪನೆಗಳು ಸಾಕಾರಗೊಳ್ಳುತ್ತವೆ. ಅರೆನಗ್ನ ಅಥವಾ ಪೂರ್ಣನಗ್ನ ಸ್ತ್ರೀ ಮತ್ತು ಪುರುಷ ಶಿಲ್ಪಗಳು ಕಲಾತ್ಮಕವಾಗಿ ಭಿತ್ತಿಗಳಲ್ಲಿ ರೂಪುಗೊಂಡಿರುತ್ತವೆ. ಹಾಗೆಂದ ಮಾತ್ರಕ್ಕೆ ಅಂದಿನ ಸಮಾಜದಲ್ಲಿ ಸ್ತ್ರಿ ಪುರುಷರು ವಸ್ತ್ರವಿಹೀನರಾಗಿ ಇರುತ್ತಿದ್ದರು ಎಂದು ಭಾವಿಸಬಾರದು. ಇಂದಿಗೂ ಸಿನಿಮಾದಲ್ಲಿ ತೋರುವ ಅಥವಾ ರೂಪದರ್ಶಿಗಳು ತೊಡುವ ಪೋಷಾಕನ್ನು ನಮ್ಮ ಯುವತಿಯರು ದಿನ ನಿತ್ಯ ಜೀವನದಲ್ಲಿ ತೊಡುತ್ತಾರೆಯೇ? ಯಾವುದೋ ಪಾರ್ಟಿ ಅಥವಾ ವಿಶೇಷ ಸಂದರ್ಭಗಳಲ್ಲಿ ಆ ರೀತಿ ವೇಷ ಭೂಷಣ ಧರಿಸಬಹುದು. ಹವಾಗುಣಕ್ಕೆ ತಕ್ಕಂತೆ ದೇಹವನ್ನು ವಸ್ತ್ರಗಳಿಂದ ಮುಚ್ಚಿಕೊಳ್ಳದಿದ್ದರೆ ಆರೋಗ್ಯ ಕೆಡಿಸಿಕೊಳ್ಳಬೇಕಷ್ಟೇ. ಇಂತಹ ಸುಲಭ ಸತ್ಯವಿಚಾರಗಳನ್ನು ನಾವು ಆಲೋಚಿಸಿದಾಗ ಕಲಾಪ್ರತಿಪಾದನೆಗೂ ನಿಜಜೀವನದ ಪ್ರತಿಪಾದನೆಗೂ ಅಂತರ ಇದ್ದೇ ಇರುತ್ತದೆ. ದಿನನಿತ್ಯ ನಡೆಯುವ ಪ್ರಸಂಗಗಳೇ ನಾಟಕವಾಗುವುದಿಲ್ಲ ಮತ್ತು ಅದನ್ನು ನಾಕಟವೆಂದು ಯಾರೂ ವೀಕ್ಷಿಸುವುದೂ ಇಲ್ಲ. ಅದೇ ಪ್ರಸಂಗವನ್ನು ವೇಷಭೂಷಣಗಳನ್ನು ಧರಿಸಿ ನಟಿ ನಟರು ರಸಭಾವಗಳನ್ನು ತುಂಬಿ ರಂಗದಲ್ಲಿ ಅಭಿನಯಿಸಿದಾಗ ಅದು ನಾಟಕವಾಗುತ್ತದೆ. ಹಾಗೆ ಅಭಿನಯಿಸುವ ನಾಟಕವನ್ನು ನೋಡುವ ವೀಕ್ಷಕರು ರಸಾನಂದ ಪಡೆಯುತ್ತಾರೆ. ಇಲ್ಲಿ ಸಾಧಾರಣ ಭಾವನೆಗಳೆಲ್ಲವೂ ಕಲಾತ್ಮಕವಾಗಿ ಮಾರ್ಪಟ್ಟು ರಂಜನೆಯನ್ನು ನೀಡುತ್ತವೆ. ದೃಶ್ಯಕಲೆಗಳಲ್ಲಿಯೂ ಇದೇ ರೀತಿಯ ಪ್ರಕ್ರಿಯೆ ನಡೆಯುತ್ತದೆ.

ದೇವಾಲಯ ಸಂಸ್ಕೃತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀ ಶಿಲ್ಪಗಳು ಕಂಡುಬರಲು ಇನ್ನೊಂದು ಮುಖ್ಯ ಕಾರಣ ನೃತ್ಯಕಲೆಯನ್ನು ಶಿಲ್ಪದಲ್ಲಿ ವ್ಯಕ್ತಪಡಿಸಿರುವುದು. ದೇವಾಲಯ ವಾಸ್ತುರಚನೆಯಲ್ಲಿ

ಮೂರ್ತಿಶಿಲ್ಪಗಳಿಗಿಂತ ನಾಟ್ಯಶಿಲ್ಪಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಈ ಪರಿಸರದಲ್ಲಿ ನೃತ್ಯಕಲೆಯು ಪಾವಿತ್ರ್ಯತೆಯ ಪರಿಮಿತಿಯನ್ನು ಹೊಂದಿದ್ದು ನರ್ತನ ಸೇವೆ ದೇವಾಲಯ ರಂಗಭೋಗದ ಒಂದು ಪ್ರಮುಖ ಅಂಗವಾಯಿತು. ಮಧ್ಯಕಾಲೀನ ದೇವಾಲಯ ಸಂಪ್ರದಾಯದ ಪೂಜಾವಿಧಿಯಲ್ಲಿ ಮೂಲತಃ ಅಂಗಭೋಗ ಮತ್ತು ರಂಗಭೋಗ ಎಂಬ ಪ್ರಕಾರಗಳಿದ್ದು ಅನೇಕ ಶಾಸನಗಳಲ್ಲಿ ಇವು ಧ್ವನಿತವಾಗಿವೆ. ಈ ಪೂಜಾವಿಧಿಗಳ ಕಾರ್ಯಾಚರಣೆಗಾಗಿ ದಾನ ದತ್ತಿ ನೀಡಿದ ಸಾವಿರಾರು ಶಾಸನಗಳನ್ನು ಗಮನಿಸ ಬಹುದು. ಅಲ್ಲದೇ ಈ ಶಾಸನಗಳಲ್ಲಿ ನಮ್ಮ ಸಮಗ್ರ ಸಂಸ್ಕೃತಿಯ ಶಾಶ್ವತ ಮೌಲ್ಯಗಳ ಮತ್ತು ಅವು ನಡೆದು ಬಂದಿರುವ ಪರಿಯ ಸೂಕ್ಷ್ಮ ಪರಿಚಯವೂ ಆಗುವುದು. ಅಂಗಭೋಗವು ಉಪಚಾರ, ನೈವೇದ್ಯ ವಿಧಿಗಳನ್ನು ಮೂಲತಃ ಒಳಗೊಂಡಿದ್ದರೆ ರಂಗಭೋಗವು ಷೋಡಶೋಪಚಾರಗಳಲ್ಲಿ ಮುಖ್ಯ ವಾದ ನೃತ್ಯ ಸಂಗೀತ ಸೇವೆಗಳನ್ನು ಒಳಗೊಂಡಿರುತ್ತಿದ್ದವು. ಈ ಒಂದು ಸಂಪ್ರದಾಯದ ಹಿನ್ನೆಲೆಯಲ್ಲಿ ದೇವಾಲಯಗಳನ್ನು ನೋಡಿದಾಗ ಅವು ದೃಶ್ಯ ಮತ್ತು ರಂಗಕಲೆಗಳ ಕೇಂದ್ರಗಳಾಗಿ ಪೂಜಾವಿಧಿಯೊಂದಿಗೆ ಭಕ್ತರು ಕಲಾರಾಧನೆಯ ಸುಯೋಗವನ್ನು ಅನುಭವಿಸುವಂತೆ ಬೆಳೆದು ಬಂದಿರುವುದು ಭಾರತೀಯ ದೇವಾಲಯ ಪರಂಪರೆಯ ವೈಶಿಷ್ಟ್ಯ.

ರಂಗಭೋಗದ ವಿಷಯದಲ್ಲಿ ಕೆಲವು ಉಲ್ಲೇಖಗಳನ್ನು ಇಲ್ಲಿ ನೀಡುವುದು ಪ್ರಸ್ತುತವಾಗಿದೆ. ಶಾರೀರಿಕ ಚಲನೆಯ ಒಂದು ಮೇರು ಕಲ್ಪನೆಯೇ ನೃತ್ಯಶಿಲ್ಪ. ರಂಗಮಂಟಪದಲ್ಲಿ ನರ್ತನ ಸೇವೆ ಸಲ್ಲಿಸುವ ನರ್ತಕಿಯ ಹಾವಭಾವಗಳು ಶಿಲ್ಪಿಗೆ ಸ್ಫೂರ್ತಿಯಾಗಿ ಪರಿಕಲ್ಪನೆಯ ರೂಪದಲ್ಲಿ ನಾಟ್ಯಶಿಲ್ಪಗಳು ಕಲಾತ್ಮಕವಾಗಿ ಮೂಡಿಬಂದಿರುತ್ತದೆ. ಹೀಗೆ ನೃತ್ಯ, ಸಂಗೀತ ಮತ್ತು ಶಿಲ್ಪಕಲೆಗಳು ದೇವಾಲಯ ಪರಿಸರದಲ್ಲಿ ಒಂದಕ್ಕೊಂದು ಪೂರಕವಾಗಿ ಬೆಳೆದುಕೊಂಡು ಬಂದು ಭಾರತೀಯ ಶಿಲ್ಪರಂಗದಲ್ಲಿ ನೃತ್ಯ ಶಿಲ್ಪ ಅಗ್ರಸ್ಥಾನ ಗಳಿಸಿಕೊಂಡಿತು. ಕರ್ನಾಟಕದ ದೇವಾಲಯಗಳ ರಂಗಮಂಟಪದ ಮಧ್ಯದ ಭುವನೇಶ್ವರಿಯ ಅಡಿಯಲ್ಲಿ ನಾಲ್ಕು ಕಂಭಗಳ ಮಧ್ಯೆ ಚೌಕಾಕಾರದ ಹಾಗೂ ವರ್ತುಲಾಕಾರದ ಸ್ಥಳವು ನೃತ್ಯ ಸಂಗೀತ ಸೇವೆಗೆಂದೇ ಸಂಯೋಜಿತವಾದವು. ಹಲವು ದೇವಾಲಯಗಳಲ್ಲಿ ನೃತ್ಯ ಮಂಟಪಗಳನ್ನೇ ಪ್ರತ್ಯೇಕವಾಗಿಯೂ ನಿರ್ಮಿಸಲಾಗುತ್ತಿತ್ತು. ಇಲ್ಲಿ ಕಂಭಗಳಲ್ಲಿ ಆಕರ್ಷಕ ಭಂಗಿಗಳಲ್ಲಿ ನೃತ್ಯಶಿಲ್ಪಗಳು ಕಂಗೊಳಿಸುತ್ತವೆ. ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ದೇವಾರ್ಣವಡಗಿ ಎಂಬ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಶಾಸನಲೇಖ ಈ ರೀತಿ ತಿಳಿಸುತ್ತದೆ. ೪೩ನೇ ಸಾಲಿನಲ್ಲಿ "....ದಿಂ ಬಳಸಿದ ಪರಿಸೂತ್ರ ನ್ರಿತ್ಯ ಮಂಟಪದಿಂದಂ....." ೪೫ನೇ ಸಾಲಿನಲ್ಲಿ "....ವಿಚಿತ್ರಮಾಗೆ ಮಾಡಿಸಿದನಾ.... ಭವನಂ ಶ್ರೈ ಮಲ್ಲಿಕಾರ್ಜುನ ದೇವಗ್ರ್ಗವಾಸ್ತಾನದ ದೇವಗ್ರ್ಗ... ನಿತಕ್ಕ ವಂಗಭೋಗರಂಗಭೋಗ ತ್ರಿಕಾಲಾ...." ಈ ಶಾಸನವನ್ನು ೧೧೪೦ನೇ ವರ್ಷದಲ್ಲಿ ಕಲ್ಯಾಣ ಚಾಲುಕ್ಯ ಜಗದೇಕ ಮಲ್ಲನ ಕಾಲದಲ್ಲಿ ನೀಡಲಾಗಿದೆ. (ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್ ೨೦, ಶಾಸನ ಸಂಖ್ಯೆ ೧೧೧) ಎಷ್ಟೋ ಶಾಸನಗಳನ್ನು ಆಳರಸರು, ಅಧಿಕಾರಿಗಳೇ ಅಲ್ಲದೆ ಮಹಾಜನರೂ ನೀಡಿರುತ್ತಾರೆ. ರಂಗಭೋಗಕ್ಕೆ ದಾನವನ್ನು ನೀಡುವಾಗ ಪಾತ್ರದವರ್ಗೆ, ಪಾಡುವರ್ಗೆ, ವಾದಕರಿಗೆ ಸಕಲಮರ್ಯಾದೆ ತೋರುವಂತೆಯೂ ಆದೇಶವಿರುತ್ತದೆ. ಶಾಸನಗಳಲ್ಲಿ ನರ್ತಕಿಯರನ್ನು ಪಾತ್ರಕ್ಕಂ, ಸೂಳೆ, ಬೊಡ್ಡಿ ಎಂಬ ಶಬ್ದಗಳಿಂದ ಸಂಬೋಧಿಸಲಾಗಿದೆ. ಬಾಗುಳಿಯ ಶಾಸನದಲ್ಲಿ 'ದೇವಡಿತಿ'ಯೆಂದು ಉಪಯೋಗಿಸ ಲಾಗಿದೆ. ಉಜ್ಜಯಿನಿಯ ಮಹಾಕಾಲ ದೇವಾಲಯ, ಗುಜರಾತಿನ ಸೋಮನಾಥ ದೇವಾಲಯ, ತಮಿಳುನಾಡಿನ ತಂಜಾವೂರು ದೇವಾಲಯಗಳಲ್ಲೂ ನೂರಾರು ನರ್ತಕಿಯರು ಸೇವೆಗಾಗಿ ನಿಯೋಜಿತ ರಾಗಿದ್ದರ ಬಗ್ಗೆ ಸ್ಪಷ್ಟ ದಾಖಲೆಗಳಿವೆ.

ಕೆಲವು ಶಾಸನಗಳ ಪ್ರಕಾರ ದೇವಾಲಯಗಳಿಗೆ ಶಿಕ್ಷಣ ಪ್ರಸಾರಕ್ಕಾಗಿ ಬ್ರಹ್ಮಪುರಿಗಳನ್ನು ದಾನರೂಪದಲ್ಲಿ ಸೇರಿಸುತ್ತಿದ್ದಂತೆ ಸೂಳೆಗೇರಿಗಳನ್ನೂ ಸೇರಿಸಿರುವ ಉಲ್ಲೇಖವಿದೆ. ಇಟ್ಟಗಿಯ ಮಹಾದೇವ ದೇವಾಲಯ ಮತ್ತು ಪುಲಿಗೇರಿಯ (ಲಕ್ಷ್ಮೇಶ್ವರ) ದೇವಾಲಯಗಳ ಬಳಿ ದೇವಾಲಯ ಸೂಳೆಯರಿಗೆ ನಿವೇಶನವನ್ನು

ಕಟ್ಟಿರುವ ವಿಷಯವನ್ನು ಇಲ್ಲಿಯ ಶಾಸನಗಳು ಪ್ರಸ್ತಾಪಿಸುತ್ತವೆ. ಕೌಲೂರಿನ ಒಂದು ಶಾಸನವು ಊರ ಹಿರಿಯರು ರಂಗಭೋಗಕ್ಕೆಂದು ೨೮ ಮನೆಗಳನ್ನು ದತ್ತಿ ನೀಡಿರುವುದಾಗಿ ದಾಖಲಿಸಿದೆ. (ಶಾಸನ ಪರಿಚಯ ನಂ. ೨೨, ಕ್ರಿ.ಶ. ೧೧೮೮) ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ದೇವಾಲಯ ಸೇವಾವರ್ಗದಲ್ಲಿ ಅನೇಕ ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಂಡು ಬಂದಿರುವುದು ಸ್ಪಷ್ಟವಾಗುತ್ತವೆ. ರಾಣಿ ಶಾಂತಲೆಯ ಉದಾಹರಣೆಯನ್ನು ತೆಗೆದುಕೊಂಡಾಗ ಅವಳೂ 'ಪಾತ್ರ'ವಾಗಿರುವುದನ್ನು ಶಾಸನವು "....ವಿಚಿತ್ರ ನರ್ತನ ಪ್ರವರ್ತನ ಪಾತ್ರ ಸಿಖಾಮಣಿಯುಂ..... ಸಂಗೀತ ಸಂಗತ ಸರಸ್ವತಿಯುಂ....." ಎಂದು ಪರಿಗಣಿಸುತ್ತದೆ. ಮುಂದೆ ಅದೇ ಶಾಸನವು ರಾಣಿಯು ತನ್ನ ಪತಿ ವಿಷ್ಣುವರ್ಧನನ ಜೊತೆಗೂಡಿ ಬೇಲೂರಿನ ದೇವರಿಗೆ 'ನಿತ್ಯ ನೈಮಿತ್ತಿಕ ದಿವ್ಯಾಂಗಭೋಗ ತ್ರಿಕಾಲ ನೈವೇದ್ಯ ಶ್ರೀವೈಷ್ಣವ ಬ್ರಾಹ್ಮಣರ ಪಾತ್ರ ಪಾಗುಡದ ವಿದ್ಯಾವಂತರ ಮಾಲೆಗಾರರು' ಮುಂತಾದ ಊಳಿಗ ವರ್ಗಕ್ಕೆ ಜೀವನ ನಡೆಸುವ ಅನುಕೂಲಕ್ಕಾಗಿ ದಾನ ನೀಡಿದ್ದಾಳೆ. (ಎಪಿಗ್ರಾಫಿಯಾ ಕರ್ನಾಟಿಕಾ V, ಬೇಲೂರು. ಸಂ. ೫೮. ಕ್ರಿ.ಶ. ೧೧೧೭).

ದೇವಾಲಯಗಳಲ್ಲಿ ಧರ್ಮಕಾರ್ಯಕ್ಕೆ ದಾನ ನೀಡುವ ಅನೇಕ ಸಂದರ್ಭಗಳಲ್ಲಿ ಮಹಿಳೆ ಮುಂದೆ ಬಂದಿರುವ ಅನೇಕ ಶಾಸನಗಳು ಅವರ ಹೆಸರು, ಸ್ಥಾನ, ದಾನದ ಮೊತ್ತ ಮುಂತಾದ ವಿಷಯಗಳನ್ನು ಪಟ್ಟಿಮಾಡುತ್ತವೆ. ಸಾಮಾನ್ಯವಾಗಿ ರಾಣಿಯರು ಧರ್ಮಕಾರ್ಯಗಳಲ್ಲಿ, ತನ್ನ ಪತಿಗೆ ಜಯವಾದಲ್ಲಿ ಅಥವಾ ಪತಿ ಅಳಿದ ಮೇಲೆ ಪರೋಕ್ಷ ವಿನಯದಾನ ರೂಪದಲ್ಲಿ ನೀಡಿರುವ ದಾಖಲೆಗಳು ಮಹತ್ವವಾಗಿವೆ. ಚಾಲುಕ್ಯ ಲೋಕಮಹಾದೇವಿಯು ನೀಡಿರುವ ದಾನಗಳನ್ನು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ಕಾಣಬಹುದು. ಕಲ್ಯಾಣ ಚಾಲುಕ್ಯರ ಕಾಲದ ರಾಣಿಯರು ತಮ್ಮ ಹೆಸರಿನಲ್ಲಿ ರಾಜ್ಯದ ಪ್ರದೇಶಗಳನ್ನು ಪಡೆದು ರಾಜ್ಯಭಾರವನ್ನೂ ನಿರ್ವಹಿಸುತ್ತಿದ್ದುದರಿಂದ ಅವರಿಗೆ ತಮಗೆ ಬೇಕಾದ ರೀತಿಯಲ್ಲಿ ದಾನ ನೀಡುವ ಸ್ವಾತಂತ್ರ್ಯವು ಇತ್ತೆಂಬುದನ್ನು ಅವರು ನೀಡಿರುವ ಶಾಸನಗಳಲ್ಲಿ ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆಯನ್ನೂ ಇಲ್ಲಿ ಸ್ಮರಿಸಬಹುದು. ಅದರಂತೇ ಹಾಡುವ ಕಾಮವ್ವೆ ನಾಗವ್ವೆಯ ಮಗಳು ಬಾಗುಳಿಯ ಕಲಿದೇವರ ತೊತ್ತು ಪಾತ್ರದ ಸಿರಿಯವ್ವೆಯು ತನ್ನ ಮನೆಯನ್ನು ದೇವರಿಗೆ ಕೊಟ್ಟು ತಾನಾಗಲಿ ತನ್ನ ವಂಶಜರಾಗಲೀ ಆ ಮನೆಯಲ್ಲಿ ವಾಸವಿದ್ದರೆ ಎರಡು ಪಣವನ್ನು ಕೊಡುವ ಕರಾರು ಮಾಡಿಕೊಂಡಿದ್ದಾಳೆ (ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್ IX – I, ೮೯ ಕ್ರಿ.ಶ. ೧೦೩೫).

ಇಂತಹ ಅನೇಕ ದೃಷ್ಟಾಂತಗಳು ಸ್ತ್ರೀಯರ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯದೆಡೆಗೆ ಬೆಳಕು ಚೆಲ್ಲುತ್ತವೆ. ಸಾಹಿತ್ಯದಲ್ಲಿ ಸ್ತ್ರೀತ್ವದ ಪರಿಕಲ್ಪನೆ, ಕಲೆಯಲ್ಲಿ ಸ್ತ್ರೀತ್ವದ ಪ್ರತಿಪಾದನೆ, ಶಾಸನದಲ್ಲಿ ಸ್ತ್ರೀತ್ವದ ಪ್ರತಿಬಿಂಬ, ತತ್ವಜ್ಞಾನದಲ್ಲಿ ಸ್ತ್ರೀತತ್ವದ ಅಲೆಗಳು ನಮ್ಮ ನಾಡಿನ ಮಹಿಳಾ ಪ್ರಪಂಚದ ವಿವಿಧ ಮುಖಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಈ ವಿಷಯಗಳನ್ನು ಚರ್ಚಿಸಿದಷ್ಟೂ ಹೊಸ ವಿಚಾರಗಳ ತರಂಗಗಳು ಏಳುತ್ತವೆ. ಹೊಸ ದೃಷ್ಟಿಯು ಹೊಸ ವಿಚಾರಗಳನ್ನೂ ಹೊಸ ಸೃಷ್ಟಿಯು ಹೊಸ ದೃಷ್ಟಿಯನ್ನೂ ಕಾಲದಿಂದ ಕಾಲಕ್ಕೆ ನೀಡುತ್ತಾ ಬಂದಿರುವುದರಿಂದಲೇ ಅಗೋಚರವಾದ ಅನೇಕ ಮಹಿಳಾಪರ ಚಿಂತನೆಗಳು ಆಗಿಂದಾಗ್ಗೆ ವಿಶ್ಲೇಷಣೆಗೊಳ್ಳುತ್ತಿರುತ್ತವೆ. ಈ ನಿಟ್ಟಿನಲ್ಲಿ ಕಲಾಐತಿಹಾಸಿಕ ಸೃಷ್ಟಿಯು ಮಹಿಳಾಪರವಾದ ಸರಣಿಗೆ ಸಾಕಷ್ಟು ಸವಾಲುಗಳನ್ನು ನೀಡಬಲ್ಲದು. ಅಂತಹ ಸವಾಲುಗಳನ್ನು ಎದುರಿಸುವಾಗ ಅಗೋಚರವಾದ ಅನೇಕ ವಿಚಾರತಂತುಗಳು ಪ್ರತ್ಯಕ್ಷಗೊಳ್ಳುವ ಸಾಧ್ಯತೆಯಿದೆ. ಈಗಾಗಲೇ ಸಾಕಷ್ಟು ಚರ್ಚೆಗೊಂಡಿರುವ ಮಹಿಳಾ ಪೋಷಣೆಯ ವಿಷಯಗಳನ್ನು ಹೊಸ ದೃಷ್ಟಿಯಿಂದ ಸಮೀಕರಿಸುವ ಸಾಧ್ಯತೆಯೂ ಉಂಟಾಗಬಹುದು. ಮಾನವೀಯತೆಯನ್ನು ಸೈದ್ಧಾಂತಗೊಳಿಸುವ ದಿಶೆಯಲ್ಲಿ ಮಹಿಳಾಪರ ಚಿಂತನೆಗಳು ಮತ್ತು ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯು ಶಾಶ್ವತ ಮೌಲ್ಯಗಳನ್ನು ನಮ್ಮ ಸಮಾಜದಲ್ಲಿ ನೆಲೆನಿಲ್ಲುವಂತೆ ಮಾಡುವ ಸಾಧ್ಯತೆಗಳೂ ಇಂತಹ ಅಧ್ಯಯನಗಳಲ್ಲಿ ಅಡಗಿವೆ.

❑

ಅತ್ತಿಮಬ್ಬೆಯ ಬಗ್ಗೆ ಇನ್ನಷ್ಟು ಸಂಗತಿಗಳು

ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ ಅತ್ತಿಮಬ್ಬೆಯದು ಬಹಳ ದೊಡ್ಡ ಹೆಸರು. ಬಹುಶಃ ಈಕೆ ಜೈನ 'ಜಾತಿ'ಯವಳಲ್ಲ – ಜೈನ 'ಧರ್ಮ'ಕ್ಕೆ ಒಕ್ಕಲಾಗಿದ್ದವಳೆಂದೂ, ತಾನು ಈ ಹಿಂದೆ ಲಕ್ಕುಂಡಿಯಲ್ಲಿ ಕಟ್ಟಿಸಿದ್ದ ಬಸದಿಯ ಹೆಸರನ್ನು 'ಬ್ರಹ್ಮಜಿನಾಲಯ'ವೆಂದು ಬದಲಿಸಿಕೊಳ್ಳುವ ಮೂಲಕ ಅಲ್ಲಿಯ 'ವೈಷ್ಣವ ಗೀತ ಮನೋಹರರ' ಯೆನಿಸಿದ ಬ್ರಾಹ್ಮಣರೊಂದಿಗೆ ಒಪ್ಪಂದಮಾಡಿಕೊಂಡವಳೆಂದೂ ನಾನು ಬೇರೆಡೆ (ಮಾರ್ಗ–III-೩೧ ಮತ್ತು ಮಾರ್ಗ IV-೧೦೮) ಚರ್ಚಿಸಿದ್ದೇನೆ. ಅದರ ಮುಂದುವರಿಕೆಯಾಗಿ ಇನ್ನಷ್ಟು ಸಂಗತಿಗಳನ್ನು ಇಲ್ಲಿ ಮಂಡಿಸುತ್ತೇನೆ.

ಭಾರತೀಯ ಪರಂಪರೆಯಲ್ಲಿ ಪುರುಷನು ತಾನು ಹುಟ್ಟಿದ ಮನೆಯಲ್ಲಿಯೇ ಮುಂದುವರಿಯುವುದರಿಂದ ಅವನಿಗೆ ಧಾರ್ಮಿಕ ತೊಡಕು ಉದ್ಭವಿಸುವುದಿಲ್ಲ. ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆಯಲ್ಲಿ ಬೆಳೆಯುವುದರಿಂದ ಮಹಿಳೆಗೆ ಮಾತ್ರ ಕೆಲವೊಮ್ಮೆ ಅಂಥ ತೊಡಕು ಸೃಷ್ಟಿಯಾಗಬಹುದಾಗಿದೆ. ಬ್ರಹ್ಮಶಿವ ಹೇಳುವಂತೆ, "ಪೆಂಡತಿ ಮಾಹೇಶ್ವರಿ ಗಂಡಂ ಜೈನಂ ಗಡ" ಎಂಬಂತಹ ವ್ಯವಸ್ಥೆಗೆ ಮನ್ನಣೆಯಿದ್ದ ಕಾಲದವಳಾದ ಅತ್ತಿಮಬ್ಬೆಗೂ ಇಂತ ತೊಡಕು ಎದುರಾಗಿರಬಹುದೇ? ಎಂಬುದನ್ನು ಕುರಿತು ಇಲ್ಲಿ ಚರ್ಚಿಸಬಹುದಾಗಿದೆ.

ಈಕೆಯ ತವರುಮನೆಯ ವಿವರ ಪೊನ್ನನ ಶಾಂತಿಪುರಾಣದಲ್ಲಿ, ತವರುಮನೆ–ಗಂಡನ ಮನೆಗಳ ವಿವರ ರನ್ನನ ಅಜಿತಪುರಾಣ ಮತ್ತು ಶಾಸನಗಳಲ್ಲಿ ಕಂಡುಬರುತ್ತವೆ. ತವರು ಮನೆಯ ಸದಸ್ಯರಲ್ಲಿ ಅಜ್ಜ ನಾಗಮಯ್ಯ, ಕಕ್ಕ ಪುನ್ನಮಯ್ಯ, ತಂದೆ ಮಲ್ಲಪಯ್ಯ, ತಾಯಿ ಅಪ್ಪಕಬ್ಬೆ (ಇವಳ ತಾಯಿ ನಾಗಿಯಬ್ಬೆ, ತಂದೆ ನಾಗಮಯ್ಯ), ಸಹೋದರರು ಗುಂಡಮಯ್ಯ, ಎಳಮಯ್ಯ, ಪೊನ್ನಮಯ್ಯ, ಅಹವಮಲ್ಲ, ವಲ್ಲ, ಸೋದರಿಯರು ಗುಂಡಮಬ್ಬೆ, ನಾಗಿಯಬ್ಬೆ – ಈ ಹೆಸರುಗಳೆಲ್ಲ ಅಜೈನೀಯವಾಗಿವೆ. ಇಲ್ಲಿ ಒಂದು ತಲೆಮಾರು ಅಲ್ಲ; ಅಜ್ಜನ, ತಂದೆಯ, ಇವಳ ಮತ್ತು ಮಗನ–ಹೀಗೆ ನಾಲ್ಕು ತಲೆಮಾರುಗಳಲ್ಲಿ ಒಂದೂ ಹೆಸರು ಜೈನೀಯವಾಗಿಲ್ಲದಿರುವುದು ಆಶ್ಚರ್ಯದ ಸಂಗತಿ. ಇದಲ್ಲದೆ ಜೈನಸಂಪ್ರದಾಯದಲ್ಲಿ ಸಲ್ಲೇಖನ ಮರಣ ಮಾತ್ರ ಮಾನ್ಯ. ಹೀಗಿದ್ದೂ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆ ಪತಿ ನಿಧನಾನಂತರ ಹಿಂದೂ ಪದ್ಧತಿಯ ಚಿತಾಪ್ರವೇಶ ಮಾಡುತ್ತಾಳೆ. ಇವೆಲ್ಲ ಕಾರಣಗಳಿಂದಾಗಿ ಇವಳ ತವರುಮನೆಯವರು 'ಧರ್ಮ'ದಿಂದ ಜೈನರಾಗಿದ್ದರೂ 'ಜಾತಿ'ಯಿಂದ ಅಜೈನರಾಗಿ ಕಾಣುತ್ತಾರೆ. ಹಾಗಾದರೆ ಈ ಮನೆತನದವರು ಯಾವ 'ಜಾತಿ'ಯವರು?

ಅಜಿತಪುರಾಣದಲ್ಲಿ ಅತ್ತಿಮಬ್ಬೆಯ ತಂದೆಯನ್ನು "ವಿಪ್ರಕುಲಪ್ರದೀಪ", "ಕೌಂಡಿಣ್ಯಗೋತ್ರ ಮಂಡನಂ" ಇತ್ಯಾದಿ ವಿಶೇಷಣಗಳಿಂದ ಕರೆದಿರುವ ಕಾರಣ ಇವರು ಯಾವುದೋ ಬ್ರಾಹ್ಮಣಜಾತಿಯವರಾಗಿರಬಹುದು. ಇಲ್ಲಿಯ ಹೆಸರುಗಳ ಕೊನೆಯಲ್ಲಿ ಭಟ್ಟ ಇತ್ಯಾದಿಗಳಿಲ್ಲವಾಗಿ ಬಹುಶಃ ಇವರು ವೈದಿಕಬ್ರಾಹ್ಮಣರಾಗದೆ ಆಗಮಿಕ ಶೈವಬ್ರಾಹ್ಮಣರಾಗಿರಬಹುದೆನಿಸುತ್ತದೆ.[೧] (ಅತ್ತಿಮಬ್ಬೆಯ ಗಂಡನ ಮನೆಯವರೂ ಆಗಮಿಕ ಶೈವಬ್ರಾಹ್ಮಣ, ಅದರಲ್ಲಿಯೂ ಕಾಳಾಮುಖರೆಂದು ಮುಂದೆ ಚರ್ಚಿಸಲಾಗಿದೆ). ಒಟ್ಟಾರೆ, ಇವಳ ತವರುಮನೆಯವರು ಬಹುಶಃ ಆಗಮಿಕ ಶೈವ ಬ್ರಾಹ್ಮಣರಾಗಿದ್ದು, ಜೈನ 'ಧರ್ಮ'ಕ್ಕೆ ಒಕ್ಕಲಾಗಿದ್ದರೆಂದು ತೋರುತ್ತದೆ.

ಈಕಡೆ ಗಂಡನ ಮನೆತನವನ್ನು ಕುರಿತು ಸಿಗುವ ಮಾವ ದಲ್ಲಪಯ್ಯ, ಗಂಡ ನಾಗಮಯ್ಯನೆಂಬ ವ್ಯಕ್ತಿ ನಾಮ ಇತ್ಯಾದಿ ವಿವರಗಳನ್ನು ನೋಡಿದರೆ ಇಲ್ಲಿಯೂ ಜೈನರೆಂಬ ಸೂಚನೆ ಕಂಡುಬರುವುದಿಲ್ಲ. ಅತ್ತಿಮಬ್ಬೆಯ ಮಗ ಅಣ್ಣಿಗದೇವನನ್ನು ಅಜಿತಪುರಾಣದಲ್ಲಿ (೧೨–೨೧)

೧. ಈ ಮನೆತನ ಕಮ್ಮೆನಾಡು ಮೂಲದ್ದು. ಕಮ್ಮೆನಾಡು ಮೂಲದ ಬಸವಣ್ಣನೂ ಆಗಮಿಕ ಶೈವಬ್ರಾಹ್ಮಣದ ಒಂದು ಶಾಖೆಯವನೆಂದು ನಾನು ಬೇರೆಡೆ ಚರ್ಚಿಸಿದ್ದೇನೆ.

ಶ್ರೀ ನೇಮಿಚಂದ್ರ ಮುನಿಗಳ್
ಕಾಣ್ಡರ್ಗಣ ತಿಲಕರವರ ಶಿಷ್ಯ (೦) ಸದ್ವಿ ।
ದ್ಯಾ ನಿಳಯನಯ್ಯಣಯ್ಯಂ
ತಾನೋದಿಸೆ ಕುಶಲನಾದನಣ್ಣಿಗದೇವಂ ॥

ಎಂದು ಹೇಳಲಾಗಿದೆ. ಇಲ್ಲಿ ಅಣ್ಣಿಗದೇವರು ಜೈನನಾದ ಅಯ್ಯಣಯ್ಯನಲ್ಲಿ ವಿದ್ಯಾಭ್ಯಾಸ ಮಾಡಿದನೆಂದು ಮಾತ್ರ ಹೇಳಲಾಗಿದೆಯೇ ಹೊರತು, ಅವನು ಜೈನನೆಂಬ ಸೂಚನೆ ಕಂಡುಬರುವುದಿಲ್ಲ. ಇನ್ನು ಮಾವನಾದ ದಲ್ಲಪನನ್ನು ಅಜಿತಪುರಾಣ 'ಉತ್ತಮಜಾತಿ' (೧-೩೮ ಗದ್ಯ)ಯವನೆಂದು ಒಂದು ಸಲ ಹೇಳಿದೆ. ಲಕ್ಕುಂಡಿ ಶಾಸನ ಗಂಡನಾಗಿದೇವನನ್ನು "ಮಹೀದೇವ (= ಬ್ರಾಹ್ಮಣ) ಕುಳಗಗನ ಗಭಸ್ತಿ ಮೌಳಿ" ಎಂದು ಕರೆದಿದೆ. ಈ ಉಲ್ಲೇಖಗಳಲ್ಲಿ ಕಿಂಚಿತ್ತೂ ಜೈನ ಸೂಚನೆಯಿಲ್ಲವಾಗಿ ಗಂಡನದು ಜೈನಕ್ಕೆ ಒಕ್ಕಲೂ ಆಗಿರದ ಯಾವುದೋ ಅಜೈನೀಯ ಕುಟುಂಬವಾಗಿರಬಹುದು; ಅದರಲ್ಲಿಯೂ ಆಕರಗಳು ಹೇಳುವ ಪ್ರಕಾರ ಇವರದು ವಾಜಿವಂಶವಾಗಿರಬಹುದೆನಿಸುತ್ತದೆ. ಒಟ್ಟಾರೆ, ಗಂಡನ ಮನೆತನದವರು ಜಾತಿ ಮತ್ತು ಧರ್ಮ ಎರಡೂ ನೆಲೆಗಳಲ್ಲಿ ಅಪ್ಪಟ ಅಜೈನರೇ (ಹಿಂದೂ) ಆಗಿದ್ದರೆಂದು ಈವರೆಗಿನ ಚರ್ಚೆ ತಿಳಿಸುತ್ತದೆ. ಈ ಕಾರಣದಿಂದಾಗಿಯೇ ಮಗನಿಗೆ ಅಣ್ಣಿಗದೇವನೆಂಬ ಅಜೈನೀಯ (ಹಿಂದೂ) ಹೆಸರಿಟ್ಟಂತಿದೆ. ತಂಗಿ ಗುಂಡಮಬ್ಬೆ ಹಿಂದೂ ಪದ್ಧತಿಯಂತೆ ಸಹಗಮನ ಮಾಡಿದಂತಿದೆ. ಹೀಗೆ ಹಿಂದೂ ಪರಂಪರೆಯದಾಗಿರುವ ಈ ಗಂಡನ ಮನೆತನವು ಆಗಮಿಕ ಶೈವಬ್ರಾಹ್ಮಣ, ಅದರಲ್ಲಿಯೂ ಕಾಳಾಮುಖ ಸಂಪ್ರದಾಯದ್ದಾಗಿರಬಹುದೆಂದು ಇತ್ತೀಚೆ ಬೆಳಕಿಗೆ ಬಂದು ಕೆಳಗಿನ ಶಾಸನಾಧಾರದಿಂದ ಸ್ಪಷ್ಟಪಡಿಸಬಹುದಾಗಿದೆ.

ಶ್ರೀ ಬಿ.ಸಿ. ಪಾಟೀಲ ಅವರು ಶೋಧಿಸಿ, "ಇತಿಹಾಸದ ದರ್ಶನದ XIXನೆಯ ಸಂಚಿಕೆಯಲ್ಲಿ ಪ್ರಕಟಿಸಿರುವ ಈ ಶಾಸನ ಕೊಪ್ಪಳ ತಾಲೂಕಿನ ಗುಡ್ಲಾನೂರು (ಶಾಸನದ ಪ್ರಕಾರ ಇದರ ಹಳೆಯ ಹೆಸರು ಗಾವುಂಡನೂರು) ಗ್ರಾಮದ ಶಿವದೇವಾಲಯದ ಆವರಣದಲ್ಲಿದೆ. ಇದರ ಕಾಲ ಕ್ರಿ.ಶ. ೯೮೭. ಇದರ ಮೇಲ್ಭಾಗದಲ್ಲಿ ಸೂರ್ಯ-ಚಂದ್ರ, ಆಕಳು-ಕರುಗಳ ಸಾಂಪ್ರದಾಯಿಕ ಚಿತ್ರಗಳಿವೆ. ಜೊತೆಗೆ ಲಿಂಗದ ಮುಂದೆ ಕೈಮುಗಿದು ಕುಳಿತ ಭಕ್ತನ ಶಿಲ್ಪವಿರುವುದರಿಂದ ಇದು, ಮುಕ್ಕೊಡೆಯ ತೀರ್ಥಂಕರನ ಚಿತ್ರವನ್ನೊಳಗೊಂಡ ಜೈನಶಾಸನವಲ್ಲ; ಹಿಂದೂ (ಶೈವ) ಶಾಸನವೆಂದು ಸ್ಪಷ್ಟವಾಗುತ್ತದೆ.

ಅತ್ತಿಮಬ್ಬೆಯ ಮಗ ಅಣ್ಣಿಗದೇವನು ಮಾಸವಾಡಿ-೧೪೦ ಪ್ರಾಂತವನ್ನಾಳುತ್ತಲಿರುವಾಗ, ತನ್ನ ತಂದೆ ನಾಗದೇವನ ಸ್ಮರಣಾರ್ಥ, ಅವನ ಹೆಸರಿನ ನಾಗೇಶ್ವರದೇವಾಲಯ ನಿರ್ಮಿಸಿ, ತಾಯಿ ಅತ್ತಿಮಬ್ಬೆಯೊಂದಿಗೆ ದೇವರಾಸಿ ಪಂಡಿತರ ಕಾಲು ತೊಳೆದು, ಈ ದೇವಾಲಯವನ್ನೂ, ಕೆಲವು ದಾನಗಳನ್ನೂ ಆ ಯತಿಗೆ ನೀಡಿದನೆಂದು ಪ್ರಸ್ತುತ ಶಾಸನ ತಿಳಿಸುತ್ತದೆ. ಇದರಿಂದ ಈ ಕೆಳಗಿನ ಸಂಗತಿಗಳೂ ವ್ಯಕ್ತವಾಗುತ್ತವೆ;

೧. ತಂದೆ ನಾಗಮಯ್ಯನು ಜೈನ (ಧರ್ಮೀಯನೋ, ಒಕ್ಕಲೋ)ನಾಗಿದ್ದರೆ ಅವನ ಪರೋಕ್ಷವಿನಯದಲ್ಲಿ ಮಗ ಅಣ್ಣಿಗದೇವನು ಬಸದಿಯನ್ನು ಕಟ್ಟಿಸುತ್ತಿದ್ದನು. ಇದರ ಬದಲು ಶಿವಲಿಂಗ ಸ್ಥಾಪಿಸಿ, ದೇವಾಲಯ ಕಟ್ಟಿಸಿರುವುದರಿಂದ ಅವನು ಖಂಡಿತವಾಗಿಯೂ ಜಾತಿ ಮತ್ತು ಧರ್ಮ ಎರಡೂ ನೆಲೆಗಳಲ್ಲಿ ಅಜೈನ ಅಂದರೆ ಆಗಮಿಕ ಶೈವ (ಬ್ರಾಹ್ಮಣ) ನಾಗಿದ್ದಾನೆ. ಮೇಲೆ ಹೇಳಿದಂತೆ ಅತ್ತಿಮಬ್ಬೆಯೂ ಆಗಮಿಕ ಶೈವಬ್ರಾಹ್ಮಣ ಮೂಲದ ತವರಿನವಳಾಗಿರುವುದರಿಂದ, ಇವರಿಬ್ಬರ ಮದುವೆ ಸಹಜವೆಂಬಂತೆ ಜರುಗಿದೆ. ಇಲ್ಲಿರುವ ವ್ಯತ್ಯಾಸವೆಂದರೆ ಇವಳ ತವರು ಮನೆತನ ಜೈನಧರ್ಮಕ್ಕೆ ಒಕ್ಕಲು ಆಗಿದ್ದಿತ್ತು, ಅಷ್ಟೆ. "ಪೆಂಡತಿ ಮಾಹೇಶ್ವರಿ ಗಂಡಂ ಜೈನಂ ಗಡ"[೨] ಎಂದು ಮುಂತಾಗಿ ಹೇಳಿ ಬ್ರಹ್ಮಶಿವನು ಇಂಥವರು "ಉತ್ತಮ ಜೈನರಲ್ಲ"ವೆನ್ನುವುದನ್ನು ಗಮನಿಸಿದರೆ, ಇವನ ದೃಷ್ಟಿಯಲ್ಲಿ ಅತ್ತಿಮಬ್ಬೆಯದು ಉತ್ತಮ ಜೈನಬಾಂಧವ್ಯವಲ್ಲವೆನಿಸುತ್ತದೆ.

ಇಲ್ಲಿ ನಾಗೇಶ್ವರದೇವಾಲಯವನ್ನು ಕಟ್ಟಿಸಿ ದೇವರಾಸಿ ಪಂಡಿತರಿಗೆ ಅರ್ಪಿಸಲಾಗಿದೆ. ರಾಸಿ, ಜೀಯ, ಪಂಡಿತ ಎಂಬ ಉಪಾಧಿಗಳು ಕಾಳಾಮುಖಯತಿಗಳನ್ನು ಸೂಚಿಸುವುದರಿಂದ ಆಗಮಿಕ ಶೈವಬ್ರಾಹ್ಮಣ (ವೈದಿಕ

೨. ಅತ್ತಿಮಬ್ಬೆಯ ವಿಷಯದಲ್ಲಿ ಹೆಂಡತಿ ಜೈನ, ಗಂಡ ಮಾಹೇಶ್ವರ ಆಗಿದ್ದಾರೆಂಬುದನ್ನು ಇಲ್ಲಿ ಗಮನಿಸಬಹುದು.

ಶೈವಬ್ರಾಹ್ಮಣ ಅಲ್ಲ) ನಾಗಿರುವ ಈಕೆಯ ಗಂಡ ನಾಗಿದೇವನು, ಅದರಲ್ಲಿಯೂ ಕಾಳಾಮುಖ ಅನುಯಾಯಿಯಾಗಿರಬಹುದೆನಿಸುತ್ತದೆ.

೨. ಅಜಿತಪುರಾಣವು ನಾಗಿದೇವನ ಮರಣವನ್ನು ಸೂಚಿಸಿರುವುದರಿಂದ ಈ ಪುರಾಣದ ಕಾಲವಾದ ಕ್ರಿ.ಶ. ೯೯೩ಕ್ಕೆ ಮೊದಲು ಅವನು ನಿಧನನಾಗಿರುವನೆಂದು ಈವರೆಗೆ ಭಾವಿಸಲಾಗಿತ್ತು. ಈಗ ಈತನ ಮರಣವನ್ನು (ಪರೋಕ್ಷವಿನಯ) ಈ ಗುಡ್ಡಾನೂರು ಶಾಸನ ತಿಳಿಸುವುದರಿಂದ, ಈ ಶಾಸನದ ಕಾಲವಾದ ೯೮೭ಕ್ಕೆ ಮೊದಲು, ಅಂದರೆ ಅಜಿತಪುರಾಣಕ್ಕೂ ಆರು ವರ್ಷ ಮೊದಲು ಅವನು ತೀರಿಕೊಂಡಿದ್ದನೆಂಬ ಹೊಸ ಅಂಶ ಈಗ ಬೆಳಕಿಗೆ ಬರುತ್ತಿದೆ.

ಬಹುಶಃ ಗಂಡ ಸತ್ತಬಳಿಕ ಆರಂಭಿಸಿದ ಲೋಕಹಿತ ಕಾರ್ಯಗಳಿಂದಾಗಿ ಲಭ್ಯವಾಗಿರಬಹುದಾದ ಕವಿವರ ಕಾಮಧೇನು, ಕಟಕಪವಿತ್ರೆ ಇತ್ಯಾದಿ ಬಿರುದುಗಳನ್ನು ಈ ಶಾಸನ (೯೮೭)ದಲ್ಲಿ ಬಳಸಲಾಗಿದೆ. ಇದರಿಂದ ಕ್ರಿ.ಶ. ೯೯೩ರಲ್ಲಿ ಬರೆದ ಅಜಿತಪುರಾಣಕ್ಕೆ ಆರುವರ್ಷ ಮೊದಲು, ಈಕೆ ಕವಿ ರನ್ನನಿಗೆ (ಬೇರೆ ಕವಿಗೆ?) ಆಶ್ರಯ ನೀಡಿದ್ದಳೆಂದೂ, ಈ ಹೊತ್ತಿಗಾಗಲೇ 'ಕಟಕಪವಿತ್ರೆ' ಎಂಬಂಥ ಬಿರುದು ಧರಿಸುವಷ್ಟು ಪ್ರಸಿದ್ಧಿ ಹೊಂದಿದ್ದಳೆಂದೂ ವಿದಿತವಾಗುವುದರಿಂದ, ಈ ಶಾಸನಕ್ಕೂ ಬಹಳ ಮೊದಲೇ ಅವಳ ಗಂಡ ತೀರಿಕೊಂಡಿದ್ದನೆಂದು ಊಹಿಸಬೇಕಾಗುತ್ತದೆ.

ಮಗ ಅಣ್ಣಿಗದೇವನಿಗೆ ಈ ಶಾಸನ (೯೮೭)ದಲ್ಲಿ "ಸಮಸ್ತ ರಾಜ್ಯಭರನಿರೂಪಿತಂ ಮಹಾಸೈನ್ಯಾಧಿಪತಿ ಪ್ರಚಂಡದಂಡನಾಯಕಂ" ಮೊದಲಾದ ಪ್ರಸಿದ್ಧ ಬಿರುದುಗಳನ್ನು ಬಳಸಲಾಗಿದೆ. ತಂದೆ ಸತ್ತ ಬಳಿಕ ಈತ ಈ ಹುದ್ದೆ ಗಳಿಸಿದ್ದರೆ, ಈ ಬಿರುದು ಪ್ರಸಿದ್ಧಿಗೆ ಕೆಲವು ವರ್ಷಗಳಾದರೂ ಹಿಡಿದಿರುವುದು ಸ್ವಾಭಾವಿಕ. ಹಾಗಿದ್ದರೆ, ಈ ಶಾಸನಕ್ಕೆ ಕೆಲವು ವರ್ಷ ಮೊದಲೇ ತಂದೆ ನಾಗಮಯ್ಯ ತೀರಿಕೊಂಡಿರುವನೆಂದು ಮತ್ತೂ ಸ್ಪಷ್ಟವಾಗುತ್ತದೆ.

೩. ರಾಜ್ಯದ ಬೇರೆ ಗ್ರಾಮಗಳನ್ನು ಬಿಟ್ಟು ಈ ಸಿಂಧೋಗಿ ಗ್ರಾಮದಲ್ಲಿಯೇ ಏಕೆ ನಾಗಿದೇವನ ಸ್ಮಾರಕ ಕಟ್ಟಿಸಲಾಯಿತು? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುವುದು ಸಹಜ. ಬಹುಶಃ ಅಣ್ಣಿಗದೇವನು ಆಳುತ್ತಲಿದ್ದ ಮಾಸವಾಡಿ-೧೪೦ ಪ್ರಾಂತ್ಯಕ್ಕೆ ಸೇರಿದುದೆಂಬ ಇಲ್ಲವೆ ಬಹುಶಃ ಈ ಪ್ರಾಂತದ ರಾಜಧಾನಿಯೆಂಬ ಇಲ್ಲವೆ ಇದು ನಾಗಿದೇವನ ಸ್ವಗ್ರಾಮವಾಗಿದ್ದಿತೆಂಬ ಕಾರಣದಿಂದ ಇಲ್ಲಿ ಕಟ್ಟಿಸಿರಬಹುದು. ಈ ದೇವಾಲಯಕ್ಕೆ ೬೦೦ ಮತ್ತರದಷ್ಟು ದೊಡ್ಡ ಪ್ರಮಾಣದ ಭೂದಾನ ನೀಡಿದುದನ್ನು ಗಮನಿಸಿದರೆ, ಇದು ನಾಗಿಮಯ್ಯನ ಸ್ವಗ್ರಾಮವಾಗಿರುವುದು ಹೆಚ್ಚು ಸಂಭವನೀಯವಾಗಿದೆ.

೪. ಈ ಶಾಸನದ ಕೊನೆಯಲ್ಲಿರುವ "ಅಲಸುತಮೀವ ಚಿಂತಿಸುತ ಮೀವ...." ಎಂಬ ಚಂಪಕಮಾಲಾ ಪದ್ಯ ಅಜಿತಪುರಾಣದಲ್ಲಿ (೧೨-೧೭) ಕಂಡುಬರುತ್ತದೆ. ಬಹುಶಃ ರನ್ನನೇ ಶಾಸನಕ್ಕಾಗಿ ೯೮೭ರಷ್ಟು ಪೂರ್ವದಲ್ಲಿಯೇ ಬರೆದ ಈ ಪದ್ಯವನ್ನು ಆಮೇಲೆ ೯೯೩ರಲ್ಲಿ ಬರೆದ ತನ್ನ ಅಜಿತನಾಥಪುರಾಣದಲ್ಲಿ ಬಳಸಿಕೊಂಡಿರುವನೆಂದು ತಾನಾಗಿಯೇ ವ್ಯಕ್ತವಾಗುತ್ತದೆ. ಇಲ್ಲಿಯೇ "ಮೊಳೆತು ರಸಾತಳದೊಳ್..." ಎಂದು ಆರಂಭವಾಗುವ ಸುಂದರ ಚಂಪಕಮಾಲಾ ಪದ್ಯವಿದೆ. ಇದು ತಂದೆ ನಾಗಮಯ್ಯನನ್ನೋ, ಮಗ ಅಣ್ಣಿಗದೇವನನ್ನೋ ಕುರಿತುದಾಗಿರಬೇಕು. ಆ ಪದ್ಯದಂತೆ ಈ ಪದ್ಯವನ್ನು ರನ್ನನೇ ಬರೆದಿರಬಹುದು.

ಒಟ್ಟಾರೆ ಈ ಶಾಸನದಿಂದ ೧. ಗಂಡ ನಾಗಿದೇವ ಕಾಳಾಮುಖ ಶೈವಬ್ರಾಹ್ಮಣ ಸಂಪ್ರದಾಯದವ. ೨. ಈತನು ಅಜಿತಪುರಾಣ (೯೯೩)ಕ್ಕೆ ಆರು ವರ್ಷ ಮೊದಲು, ಬಹುಶ ಇದಕ್ಕೂ ಮೊದಲು ನಿಧನ ಹೊಂದಿದನು. ೩. ಕೊಪ್ಪಳ ತಾಲೂಕಿನ ಸಿಂಧೋಗಿಯು ಬಹುಶಃ ಈತನ ಗ್ರಾಮವಾಗಿರಬಹುದು. ೪. ಈ ಶಾಸನಕ್ಕಾಗಿ ತಾನು ಬರೆದ ಪದ್ಯವನ್ನು ರನ್ನನು ತನ್ನ ಅಜಿತಪುರಾಣಕ್ಕೂ ಬಳಸಿಕೊಂಡನು - ಎಂಬ ಹೊಸ ಸಂಗತಿಗಳು ತಿಳಿದುಬರುತ್ತವೆ.

❑

ನಾ.ಸೂ. ದಾನಿ.

ಪ್ರಸಾಧನ ಕಲೆಯ ದಿಕ್ಕುದೆಸೆ

ನಾಟಕದಲ್ಲಿ 'ನಟ'ನೇ ಕೇಂದ್ರ ಬಿಂದು. ದೃಶ್ಯಾಂಗವಾದ ನಾಟಕದಲ್ಲಿ ನಟನೆಗೆ ಪೂರಕವಾಗಿ 'ನೇಪಥ್ಯ' ಕೆಲಸ ಮಾಡುತ್ತದೆ. ಈ ನೇಪಥ್ಯದಲ್ಲಿ 'ಪ್ರಸಾಧನ'ವೂ ಒಂದು ಅವಿಭಾಜ್ಯ ಅಂಗ. ಆದರೆ ನಟನ ಸಾಧನೆಗಳಲ್ಲಿ (Tools of an Actor) ಪ್ರಸಾಧನವೂ ಒಂದು ಮುಖ್ಯ ಪೂರಕ ಸಾಧನೆಗಳಲ್ಲೊಂದಷ್ಟೆ. ಪ್ರಸಾಧನವು ಪಾತ್ರಕ್ಕೆ ಸರಿಯಾಗಿದ್ದರೆ ಪಾತ್ರಧಾರಿಗೂ ಒಂದು ಮಾನಸಿಕ ಸಮಾಧಾನ ಹಾಗೂ ಉಲ್ಲಾಸವಿರುತ್ತದೆ. ಈ ಪ್ರಸಾಧನದ ಕಾಯಕದಲ್ಲಿ ನಾನು ನನ್ನ ದೀರ್ಘ (ಸುಮಾರು ೪೦ ವರ್ಷಗಳು) ಅನುಭವದಲ್ಲಿ ಅನೇಕ ಮಜಲುಗಳನ್ನು ಕಂಡಿದ್ದೇನೆ.

ಪ್ರಾರಂಭಕ್ಕೆ ವೃತ್ತಿ ರಂಗಭೂಮಿ. ಅಲ್ಲಿ ನಾನು ಕೆಲಸ ಮಾಡದಿದ್ದರೂ ಅವರ ಗ್ರೀನ್ ರೂಂ ಗೆ ಹೋಗಿ ಅವರ ಕಾರ್ಯವನ್ನು ವೀಕ್ಷಿಸಿ ಕೆಲವರೊಡನೆ ವಿಚಾರವಿನಿಮಯ ಮಾಡಿಕೊಂಡಿದ್ದೆ. ಅಲ್ಲಿ ಪ್ರತಿ ನಟನೂ ತಮ್ಮ ತಮ್ಮ ಪಾತ್ರಕ್ಕೆ ತಾವೇ ಬಣ್ಣ ಹಚ್ಚಿಕೊಳ್ಳುತ್ತಿದ್ದರು. ಅವರವರ ಸಾಮಗ್ರಿಗಳನ್ನು ಅವರವರೇ ಇಟ್ಟುಕೊಂಡು ಕನಿಷ್ಠ ೨-೩ ಘಂಟೆಗಳ ಮುಂಚೆಯೇ ಕುಳಿತು ಮಾಡಿಕೊಳ್ಳುವ ಅಭ್ಯಾಸವಿತ್ತು. ಅಲ್ಲಿ ಅವರ ವೃತ್ತಿ ಪರತೆ ಕಾಣುತಿತ್ತು.

ಯಾಂತ್ರಿಕ ಯುಗ ಆರಂಭವಾದಂತೇ ಪ್ರೇಕ್ಷಕರಿಗೂ ಸಮಯಾಭಾವ ಕಾಣಿಸಿಕೊಳ್ಳಲಾರಂಭಿಸಿತು. ಅದರಲ್ಲೂ ನಗರ ಪಟ್ಟಣಗಳಲ್ಲಿ ಕಂಪೆನಿ ನಾಟಕಗಳನ್ನು ನೋಡಲು ಸಮಯ ಹಾಗೂ ತಾಳ್ಮೆ ಇರಲಿಲ್ಲ. ಆಗಲೇ ಹವ್ಯಾಸಿ ತಂಡಗಳು ಆರಂಭವಾಯಿತು. ಆಸಕ್ತಿ ಇದ್ದ ಕೆಲವು ಗೆಳೆಯರು ಕೂಡಿಕೊಂಡು ತಮ್ಮದೇ ಆದ ಸಂಘ ಸಂಸ್ಥೆಗಳನ್ನು ಪ್ರಾರಂಭಿಸಿದರು. ಆಗ ಕಂಪೆನಿ ನಾಟಕದ ಶೈಲಿಯಿಂದ ಹೊರ ಬಂದು ಸಾಮಾಜಿಕ ಚಿಂತನದ ನಾಟಕಗಳೂ ಆರಂಭವಾದವು. ಎಲ್ಲರೂ ಹವ್ಯಾಸಿಗಳಾದುದರಿಂದ ಅವರಿಗೆ ನೇಪಥ್ಯದಲ್ಲಿರಬೇಕಾಗಿದ್ದ ಆಸಕ್ತಿಗಳಿಗಿಂತ ನಟನೆ, ನಿರ್ದೇಶನಗಳ ಕಡೆಗೆ ಹೆಚ್ಚು ಆಸಕ್ತಿ ಇತ್ತು. ನೇಪಥ್ಯದ ಕೆಲಸಗಳಿಗೆ ಅವರಿಗೆ ಸಮಯವೂ ಇರುತ್ತಿರಲಿಲ್ಲ. ಆದ್ದರಿಂದ ಈ ನೇಪಥ್ಯ ಕಾಯಕಕ್ಕೆ ಕಂಪೆನಿ ನಾಟಕಗಳಿಗೆ ಸಹಾಯಕರಾಗಿದ್ದವರಿಂದ ಸಹಾಯ ತೆಗೆದುಕೊಳ್ಳುತ್ತಿದ್ದರು. ಅವರುಗಳಿಗೆ ಗುತ್ತಿಗೆ ಕೊಟ್ಟರೆ ಸಾಕು ಅವರುಗಳು ಬಂದು ನಾಟಕಕ್ಕೆ ರಂಗಸಜ್ಜಿಕೆ, ದೀಪಾಲಂಕಾರ, ವಸ್ತ್ರವಿನ್ಯಾಸ, ಸೀನರಿಗಳು, ಆಭರಣಗಳು ಹಾಗೂ ಮೈಕಾಸುರಸೆಟ್ ಎಲ್ಲವನ್ನೂ ಸಿದ್ಧಮಾಡುತ್ತಿದ್ದುದರಿಂದ ತಂಡಗಳು ತಮ್ಮ ನಾಟಕ ತಾಲೀಮು, ಪ್ರಚಾರ ಇವುಗಳಿಗೆ ಸಮಯ ಸಿಕ್ಕುತ್ತಿತ್ತು.

ಆದರೆ ಕಂಪೆನಿ ನಾಟಕಗಳಲ್ಲಿ ಅವರು ಹೆಚ್ಚಾಗಿ ದುಡಿದುದ್ದರಿಂದ ಅವರ ಶೈಲಿ ಬದಲಾಗಲಿಲ್ಲ. ಅದೇ ೨ ಇಂಚು, ೧ ೧/೨ ಇಂಚು ಬಣ್ಣಗಳು ಮುಖದ ಮೇಲೆ ಬೀಳುತ್ತಿತ್ತು. ಮತ್ತೆ ನಾಯಕ ನಟನಿಗೆ ಯಾವಾಗಲೂ ಸ್ಪುರದ್ರೂಪತೆ, ಸ್ತ್ರೀ ಪಾತ್ರಗಳೆಲ್ಲವೂ ಸುಂದರಿಯರೇ. ಪಾತ್ರಗಳ ತಾರತಮ್ಯತೆ ಹೆಚ್ಚಿಗೆ ಇರಲಿಲ್ಲ. ಉದಾಹರಣೆಗೆ ಕೈಲಾಸಂರವರ 'ಗಂಡಸ್ಕತ್ರಿ' ನಾಟಕದಲ್ಲಿ ಬರುವ ಅಶ್ವತ್ಥ, ರಂಗಣ್ಣ ಇಬ್ಬರಿಗೂ ಒಂದೇ ಪ್ರಸಾಧನ. ಪಾತ್ರಗಳ ಸೃಷ್ಟಿಯಲ್ಲಿ ಇದ್ದದ್ದು ಎರಡೇ ವಿಧ. ಯುವಕ, ಯುವತಿ ಹಾಗೂ ಅಜ್ಜ, ಅಜ್ಜಿ. ಯುವಕ/ಯುವತಿಯರ ತಂದೆ ತಾಯಿಯ ಪಾತ್ರಗಳಿಗೆ ಹಣೆ, ಮುಖಗಳ ಮೇಲೆ ಕರೀ ಗೆರೆಗಳು ಹಾಗೂ ಬಿಳಿ ತಲೆಗೂದಲು. ಗಡ್ಡಮೀಸೆಗಳಲ್ಲೂ ಕಪ್ಪು ಅಥವಾ ಬಿಳುಪು. ಆದರೆ ಗಡ್ಡಮೀಸೆಗಳಲ್ಲಿ ವೈವಿಧ್ಯತೆಯಿತ್ತು. ಅದರಲ್ಲೂ ಧನಪಾಲ್, ಮುತ್ತು, ನಾರಾಯಣ ರಾಯರು, ನಾರಾಯಣ (ಇಬ್ಬರೂ ಪ್ರಭಾತ್ ಕಲಾವಿದರು) ಇವರುಗಳ "ಕ್ರೇಪ್ ಕೆಲಸ" (Crape Work) ಉತ್ತಮವಾಗಿರುತ್ತಿತ್ತು. ನಾರಾಯಣನು ವಿಗ್ಸ್ ಅನ್ನು ಬಹಳ ಚೆನ್ನಾಗೇ ಹೆಣೆಯುತ್ತಿದ್ದ. ಆದರೆ ಅವನ ಅತೀ ಬಣ್ಣ (Heavy Makeup) ಹೆಚ್ಚುತ್ತಿದ್ದದ್ದು ಅವನ ದೀರ್ಘ ಅಭ್ಯಾಸಬಲ. ಕಂಪೆನಿ ನಾಟಕಗಳಿಗೆ ಹೆಚ್ಚು ಬಣ್ಣದ ಅವಶ್ಯಕತೆ ಇತ್ತು. ಏಕೆಂದರೆ ಅವರು ನಾಟಕಗಳನ್ನಾಡುತ್ತಿದ್ದದ್ದು, ದೊಡ್ಡ ದೊಡ್ಡ ಪ್ರೇಕ್ಷಾಗೃಹಗಳಲ್ಲಿ ಅಥವಾ ಬಯಲಿನಲ್ಲಿ. ಸಾವಿರಾರು ಮಂದಿ ಪ್ರೇಕ್ಷಕರೂ ಇರುತ್ತಿದ್ದರು. ದೀಪ ವ್ಯವಸ್ಥೆ ಅಷ್ಟೇನೂ ಪರಿಷ್ಕರಣೆಯಾದುದಿಲ್ಲ. ಆ ಮಂದ ಬೆಳಕಿನಲ್ಲಿ ಪ್ರೇಕ್ಷಾಗೃಹದ ಹಿಂದಿನವರೆಗೂ ನಟರು ಕಾಣಿಸಬೇಕಾಗಿದ್ದರೆ ಬಣ್ಣ ಸ್ವಲ್ಪ ಅತಿಯಾಗೇ ಇರುತಿತ್ತು. ಆದರೆ ಶಾಲಾ ಕಾಲೇಜುಗಳ ಸಭಾಂಗಣದಲ್ಲಿ ನಾಟಕವಾಡಿದಾಗ ಈ ಉತ್ಪ್ರೇಕ್ಷೆ ಎದ್ದು ಕಾಣುತ್ತಿತ್ತು. ಅಲ್ಲಿ

ಸಹಾಯಕರುಗಳು ಕಲಿಯಲು ಬಂದರೆ ಅದನ್ನು ಕಲಿಯಲು ಸಾಕಷ್ಟು ವರ್ಷಗಳೇ ಬೇಕಾಗುತ್ತಿತ್ತು. ಬೇಗ ಕಲಿಯಬೇಕೆಂದವರಿಗೆ ಈ ಗುರುಗಳು ಅವರ ಉತ್ಸಾಹಕ್ಕೆ ತಣ್ಣೀರೆರಚುತ್ತಿದ್ದರು. ಬಹುಶಃ ಅವರಿಗೆ ಈ ಶಿಷ್ಯರೇನಾದರೂ ಬೇಗ ಕಲಿತರೆ ತಮ್ಮ ಸಂಪಾದನೆಗೆ ಪೆಟ್ಟು ಬೀಳಬಹುದೆಂಬ ಭಯವಿತ್ತು. ಇದರಿಂದ ಹವ್ಯಾಸಿಗಳು ಇದನ್ನು ಕಲಿಯುವ ಗೊಡವೆಗೇ ಹೋಗಲಿಲ್ಲ.

ಆಗಲೇ ಮೇಕಪ್ ನಾಣಿಯವರ ಉಗಮವಾದದ್ದು. ಹಿರಿಯ ನಟ-ನಿರ್ದೇಶಕರೊಬ್ಬರು ಈ ರೀತಿ ಉತ್ಸಾಹ ಭಂಗದ ಮಾತುಗಳನ್ನಾಡಿದಾಗ ನಾಣಿಯವರಿಗೆ ಬೇಸರವಾಗಿ ತಾನೇ ಇದನ್ನು ಕಲಿಯಬೇಕು ಹಾಗೂ ಇದನ್ನು ಎಲ್ಲ ನಟರಿಗೂ ಕಲಿಸಿಕೊಡಬೇಕೆನ್ನುವ ಛಲ ಬಂತು. ಬಣ್ಣಗಳ ಪುಡಿ ತಂದು ಎಣ್ಣೆಗಳಲ್ಲಿ, ಗ್ಲಿಸರೀನ್‌ನಲ್ಲಿ ಮಿಶ್ರಣಗಳನ್ನು ಮಾಡಿ ತಮ್ಮ ಪ್ರಯೋಗಶೀಲತೆಯನ್ನು ಸಾಧಿಸುತ್ತ ಹೋದರು. ಅಲ್ಲದೆ ಆಗ ನಮಗೆ ಇಂಗ್ಲೆಂಡಿನ ಲೀಷನರ್ ಸ್ಟಿಕ್ಕುಗಳೂ ದೊರೆಯುತ್ತಿತ್ತು. ಪ್ರಯೋಗಶೀಲತೆಗೆ ಸ್ವಲ್ಪ ಅನುಕೂಲವೂ ಆಯಿತು. ಅವರು ಆಂಗ್ಲ ನಾಟಕಗಳನ್ನು ಓದುತ್ತಿದ್ದುದರಿಂದ ಇದರ ಬಗ್ಗೆ ಸಾಹಿತ್ಯಾಭ್ಯಾಸ ಮಾಡಲು ಅವಕಾಶ ಸಿಕ್ಕಿತು. ಆಗ ಬೆಂಗಳೂರಿಗೆ ಬಂದ ಆಂಗ್ಲ ತಂಡಗಳ ಒಡನಾಟವೂ ಇಟ್ಟುಕೊಂಡು ಆ ನಾಟಕಗಳಿಗೆ ನೇಪಥ್ಯ ಕೆಲಸಗಳಲ್ಲೂ ತೊಡಗಿಸಿಕೊಳ್ಳುತ್ತಿದ್ದುದರಿಂದ ಆ ಕಲೆಯ ಬಗ್ಗೆ ಇನ್ನೂ ಹೆಚ್ಚು ಆಸಕ್ತಿ ತಳೆದರು. ಅವರ ಪ್ರಸಾಧನದ ಪ್ರಯೋಗಗಳೂ ನಡೆದೇ ಇತ್ತು. ಅದನ್ನು ತದೇಕ ಚಿತ್ತದಿಂದ ನಿಷ್ಠೆಯಿಂದ ಮುಂದುವರೆಸಿ 'ಪ್ರಸಾಧನ ಕಲೆ' ಎಂದರೆ 'ಮೇಕಪ್ ನಾಣಿ' ಎನ್ನುವಷ್ಟರ ಮಟ್ಟಿಗೆ ಬೆಳೆದರು. ಅಲ್ಲಿಯ ತನಕ "ಮೇಕಪ್ ಮ್ಯಾನ್" 'ಮೇಕಪ್ ಬಾಯ್' ಎಂದು ಕರೆಯುತ್ತಿದ್ದ ಜನಗಳೇ ಇವರನ್ನು 'ಮೇಕಪ್ ಆರ್ಟಿಸ್ಟ್' ಎನ್ನುವಷ್ಟರ ಮಟ್ಟಿಗೆ ಈ ಕಲೆಯನ್ನು ಬೆಳೆಸಿದರು. ಬಣ್ಣ ಹಚ್ಚುವುದರಲ್ಲೂ 'ಕಲೆ' ಇದೆಯೆಂದು ಜಾಹೀರುಗೊಳಿಸಿದರು. ಅವರ ಕನಸಿದ್ದದ್ದು ಪ್ರತಿಯೊಬ್ಬ ನಟನೂ ತನ್ನ ಪ್ರಸಾಧನವನ್ನು ತಾವೇ ಮಾಡಿಕೊಳ್ಳಬೇಕು, ಮತ್ತೊಬ್ಬರ ಮೇಲೆ ಅವಲಂಬಿತರಾಗಬಾರದು ಎಂಬುದು. ಆದ್ದರಿಂದ ಅವರ ಜೊತೆ ನ್ಯಾಷನಲ್ ಕಾಲೇಜ್ ಹಿಸ್ಟ್ರಿಯಾನಿಕ್ ಕ್ಲಬ್‌ನಲ್ಲಿ ನಟಿಸುತ್ತಿದ್ದ ಪ್ರತಿ ನಟನೂ ಕನಿಷ್ಠಪಕ್ಷ ಅವರವರ ಬೇಸ್ ಮೇಕಪ್ ಅವರವರೇ ಮಾಡಿಕೊಳ್ಳಲು ಪ್ರೋತ್ಸಾಹಿಸುತ್ತಿದ್ದರು. ತಾವು ಕಲಿತಿದ್ದನ್ನು ಎಲ್ಲರೂ ಕಲಿಯಬೇಕು. ಆಸ್ಥೆ ಇದ್ದರೆ ಪ್ರತಿಯೊಬ್ಬ ನಟನೂ ಇದನ್ನು ಕಲಿಯಬಹುದು ಎಂದು ತೋರಿಸಿಕೊಟ್ಟು ಇವರಲ್ಲೂ ವೃತ್ತಿಪರತೆ ಬರಬೇಕು ಎಂಬ ಆಸೆ ಇಟ್ಟುಕೊಂಡು ಆಸ್ಥೆ ಇರುವವರಿಗೆ ಕಲಿಸಿದರು. "ಉಪಾಸನ" ಸೀತಾರಾಂ, ಚಲನಚಿತ್ರನಟ ಶಿವರಾಂ ಇವರುಗಳು ಕೆಲ ಕಾಲ ಇವರಿಗೆ ಸಹಾಯಕರಾಗಿದ್ದರು. ಈ ಪರಿಸರದ ಸಹವಾಸದಿಂದ ನಾನೂ ಅಲ್ಪಸ್ವಲ್ಪ ಕಲಿತು ನಂತರ ನಾಣಿ ಹೋದಲ್ಲೆಲ್ಲಾ ಅವರ ಜೊತೆ ನಾನೂ ಹೋಗಿ ಕಲಿತೆ. ಅನಂತರದಲ್ಲಿ ೬೦-೮೦ ದಶಕಗಳಲ್ಲಿ ಪ್ರಸಾಧನ 'ನಾಣಿ-ದಾನಿ' ಇತಿಹಾಸ.

ಆ ದಿನಗಳಲ್ಲಿ ಅವರ ಶಿಷ್ಯರೂ ಹೆಚ್ಚಾದರು. ಸುಮಾರು ೧೯೭೭ರಲ್ಲಿ ಬೆಂಗಳೂರಿನ ನಾಟ್ಯಸಂಘ ಹಾಗೂ ಸಂಗೀತ ನಾಟಕ ಅಕಾಡೆಮಿಗಳ ವತಿಯಿಂದ ಶ್ರೀರಂಗರ ನೇತೃತ್ವದಲ್ಲಿ ನಡೆದ ನಾಟಕ ಕಮ್ಮಟದಲ್ಲಿ ಎನ್.ಕೆ. ರಾಮಕೃಷ್ಣರವರು ಈ ಕಲೆಯಲ್ಲಿ ಆಸ್ಥೆ ತೋರಿ, ಕಲಿತು ನಂತರ ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡರು. ಆ ಕಮ್ಮಟದಲ್ಲಿ ನಾಣಿಯವರ ಮುಖ್ಯ ಸಹಾಯಕನಾಗಿ ನಾನೂ ಭಾಗಿಯಾಗಿದ್ದೆ. ಈ ರಾಮಕೃಷ್ಣರವರ ನಂತರ 'ರಂಗಸಂಪದ', 'ಬೆನಕ' ತಂಡಗಳಿಗೆ ದೃಢವಾಗಿ ನಿಂತು ಆಮೇಲೆ ಸಿನಿಮಾ ರಂಗಕ್ಕಿಳಿದು ಅಲ್ಲಿ ದೊಡ್ಡದಾಗೇ ಬೆಳೆದು ಹೆಸರು ಮಾಡಿದರು. ನಂತರದಲ್ಲಿ ಬಿಳಿ ರಾಮಕೃಷ್ಣ (ಕನ್ನಪ್ಪಾಡಿ), ವಿಲಾಸ್, ವಸಂತ್‌ಕುಮಾರ್ ಶೆಣೈ, ರಾಮಚಂದ್ರಮೂರ್ತಿ ಮತ್ತಿತರರೂ ಬಂದರು. ನಾಣಿಯವರ ಮಗಳು ಸುಜಾತಾ ಬೆಳವಾಡಿಯೂ ನಂತರದಲ್ಲಿ ಈ ಕಲೆಗೆ ಕೈಹಾಕಿ ಆ ದಿನಗಳಲ್ಲಿ (ಅಂದರೆ ಸುಮಾರು ೮೦ರ ದಶಕ) ಬಹುಶಃ ಸ್ತ್ರೀ ಪ್ರಸಾಧನಕಾರರಲ್ಲಿ ಮೊದಲನೆಯವಳಾದಳು.

ಇಷ್ಟೆಲ್ಲಾ ಆದರೂ ಈ ಪ್ರಸಾಧನ ಕ್ರಿಯೆ ಕಲೆಯ ಮಟ್ಟವನ್ನು ಉಳಿಸಿಕೊಂಡಿತೇ ಅಥವಾ ಇನ್ನೂ ಉಳಿಸಿಕೊಂಡಿದೆಯೇ ಎನ್ನುವ ಪ್ರಶ್ನೆಗೆ ಬಹಳ ಖೇದದಿಂದ ಇಲ್ಲ ಎನ್ನಬೇಕಾಗಿದೆ. ಎನ್.ಕೆ ರಾಮಕೃಷ್ಣರವರು 'ರಂಗಸಂಪದ', 'ಬೆನಕ' ತಂಡಗಳ ನಾಟಕಗಳಿಗೆ ಕೆಲವು ಉತ್ತಮವಾಗೇ ಮಾಡಿದ ಕಾರ್ಯವಿದೆ. ಅದೇ ನಿಟ್ಟಿನಲ್ಲಿ 'ಸ್ಪಂದನ'

ತಂಡಕ್ಕೆ ಕನ್ನಪ್ಪಾಡಿ ರಾಮಕೃಷ್ಣ ಹಾಗೂ "ವೇದಿಕೆ" ತಂಡಕ್ಕೆ ರಾಮಚಂದ್ರಮೂರ್ತಿ, "ಪರಸ್ಪರ" ತಂಡಕ್ಕೆ ಮೂರ್ತಿ ಬೆಂಗಳೂರುಕರ್ ಅವರುಗಳನ್ನೂ ಹೆಸರಿಸಬಹುದು. ನಾಟಕದ ಸಂಪೂರ್ಣತೆಯನ್ನು ತೆಗೆದುಕೊಂಡಾಗ ಎಡವಿದ್ದುಂಟು. ಈ ತರಹ ಎಡವಲು ಪ್ರಸಾಧನ ಕಲಾವಿದನೇ ಕಾರಣನೆ? ಎಂಬುದನ್ನು ಯೋಚಿಸಿದರೆ ಉತ್ತರ ಖಂಡಿತ ಇಲ್ಲ ಎಂಬುದೇ ಬರುತ್ತದೆ. ಅದರಲ್ಲೂ ಬಹುಪಾತ್ರಧಾರಿಗಳು ಇರುವ ನಾಟಕಗಳಲ್ಲಿ ಪ್ರಸಾಧನಕಾರನ ಅಷ್ಟೂ ಪಾತ್ರಗಳಿಗೆ ಸಂಪೂರ್ಣ ತೃಪ್ತಿ ಕೊಡುವುದು ಕಷ್ಟ. ಅದಕ್ಕೆ ಬೇಕಾದ ಸಮಯ, ಚಿತ್ತೈಕಾಗ್ರತೆಗಳು ಸಿಗುವುದು ಹವ್ಯಾಸಿಗಳಲ್ಲಿ ಕಷ್ಟ. ಒಬ್ಬನೇ ೩-೪-೫ ಪಾತ್ರಗಳಿಗೂ ೧೫-೨೦ ಪಾತ್ರಗಳಿಗೆ ಪ್ರಸಾಧನ ಮಾಡುವುದಕ್ಕೂ ವ್ಯತ್ಯಾಸಗಳಿದ್ದೇ ಇರುತ್ತವೆ. ಈ ಕಾರಣಕ್ಕೋಸ್ಕರವೇ ನಟರು ಕನಿಷ್ಠಪಕ್ಷ ತಮ್ಮ ತಮ್ಮ 'ಬೇಸ್' ಕೆಲಸವನ್ನು ತಾವೇ ಮಾಡಿಕೊಳ್ಳಲು ಕಲಿಯಬೇಕು. ಈ ದಿನಗಳಲ್ಲಿ ತಮ್ಮ ಪ್ರಸಾಧನವನ್ನು ಪರಾವಲಂಬಿತರಾಗದೆ ತಾವೇ ಮಾಡಿಕೊಳ್ಳಲು ಅನುಕೂಲತೆಗಳೂ ಒದಗಿ ಬಂದಿವೆ. ವಿವಿಧ ಶೈಲಿಯ ಗಡ್ಡ ಮೀಸೆಗಳೂ, ತಲೆಗೆ ವಿಗ್‌ಗಳೂ ಸಿದ್ಧವಾಗಿ ದೊರೆಯುತ್ತಿವೆ. ಕೊಳ್ಳಲಾಗದಿದ್ದರೆ ಕಡೇ ಪಕ್ಷ ಬಾಡಿಗೆಗಾದರೂ ತರಬಹುದು. ಆದರೆ ಈಚೆಗೆ ಸ್ವಲ್ಪ ಬೇಜಾರಾಗಿರುವ ವಿಷಯ ಪ್ರಸಾಧನಕಾರರು "ಮೇಕಪ್ ಆರ್ಟಿಸ್ಟ್" ಮಟ್ಟದಿಂದ ಪುನಃ 'ಮೇಕಪ್ ಮ್ಯಾನ್' ಮಟ್ಟಕ್ಕೆ ಇಳಿದಿರುವುದು. ಕಳೆದ ದಶಕದಲ್ಲಿ ಉತ್ತಮ ಪ್ರಸಾಧನ ಎನ್ನುವ ಮಟ್ಟಕ್ಕೆ ಬೆರಳೆಣಿಸುವಷ್ಟು ಮಾತ್ರ ಬಂದಿವೆ. ಬಹುಶಃ ಈ ಹಿಂತೆಗೆತಕ್ಕೆ ಇನ್ನೊಂದು ಕಾರಣ ನೇಪಥ್ಯದವರೂ ಬೆಳಕಿಗೇ ಬರುವುದಿಲ್ಲ. "ಕಲಾಗಂಗೋತ್ರಿ" ತಂಡದವರು ಮಾತ್ರ ಪ್ರತಿ ವರ್ಷ ಕೆಲವು ನೇಪಥ್ಯ ಕಲಾವಿದರನ್ನು ಗುರುತಿಸಿ ಪ್ರಶಸ್ತಿಗಳನ್ನು ಕೊಡುವ ಕಾಯಕವಿಟ್ಟುಕೊಂಡಿದ್ದಾರೆ.

ಇಷ್ಟಕ್ಕೂ ಪ್ರಸಾಧನಕಾರರನ್ನೇ ಹೊಣೆಯಾಗಿಸುವುದು ಸರಿಯೆ? ಸರಿಯಲ್ಲ. ಕಾರಣಗಳು ಹಲವಾರು. ಅವರು ಬೆಳೆಯುವುದಕ್ಕೆ ತಕ್ಕ ಶಿಕ್ಷಣಾಗಾರಗಳು ಸಾಕಷ್ಟು ಇಲ್ಲ. ಪುಸ್ತಕಗಳಂತೂ ಅತಿ ವಿರಳ, ನಮ್ಮ ಭಾಷೆಯಲ್ಲಿ ಇಲ್ಲ. ಇದಕ್ಕೇ ಪ್ರತ್ಯೇಕವಾಗಿ ಬಂದ ಪುಸ್ತಕ ಕನ್ನಡದಲ್ಲಿ ನಾಣಿಯವರ ಪುಸ್ತಕ ಒಂದೇ. ಮತ್ತೆ ಎನ್.ಎಸ್. ವೆಂಕಟರಾಂ ಅವರು ಬರೆದ ಕೈಪಿಡಿ 'ರಂಗಭೂಮಿ'ಯಲ್ಲಿ ಇತರ ಪ್ರಕಾರಗಳೊಡನೆ ಪ್ರಸಾಧನವೂ ಒಂದು ಅಧ್ಯಾಯವಾಗಿದೆ ಅಷ್ಟೇ. ಆದರೆ ಆಂಗ್ಲ ಭಾಷೆಯಲ್ಲಿ ಸಾಕಷ್ಟು ಪುಸ್ತಕಗಳಿವೆ. ಹಾಗೂ ಆವಿಷ್ಕಾರಗಳಾಗುತ್ತಲೇ ಇವೆ. ಆದರೆ ಆಂಗ್ಲ ಪುಸ್ತಕಗಳು ನಮ್ಮ ಮಟ್ಟಕ್ಕೆ ದುಬಾರಿ. ನಾನೂ ಕೆಲವು ಪುಸ್ತಕಗಳನ್ನು ಕೊಂಡೆ. ಮತ್ತೆ ಆಗಿದ್ದ U.S.I.S ಹಾಗೂ ಈಗಲೂ ಇರುವ ಬ್ರಿಟಿಷ್ ಲೈಬ್ರರಿ ಸಂಗ್ರಹಾಲಯಗಳಲ್ಲಿ ಓದಿದೆ. ಈ ದಿಶೆಯಲ್ಲಿ ನಾನು ಸುಬ್ಬಣ್ಣ (ಎಚ್.ವಿ. ವೆಂಕಟಸುಬ್ಬಯ್ಯ) ಹಾಗೂ ಹಿರಿಯ ರಂಗಕರ್ಮಿ, ಸ್ವತಃ ಉತ್ತಮ ಪ್ರಸಾಧನ ಕಲಾವಿದರಾದ ಶ್ರೀ ವಿ. ರಾಮಮೂರ್ತಿಯವರಿಗೂ ಋಣಿಯಾಗಿರಬೇಕು. ನನ್ನಲ್ಲಿದ್ದ ಕೆಲವು ಪುಸ್ತಕಗಳನ್ನು ಶಿಬಿರಾರ್ಥಿಗಳೂ ನೋಡಲೆಂದು ಕೊಟ್ಟು ಪುಸ್ತಕಗಳನ್ನು ಕಳೆದುಕೊಂಡಿದ್ದು ಇವತ್ತಿಗೂ ವಿಷಾದನೀಯವಾಗಿದೆ. ಅದರಲ್ಲೂ ಒಂದೇ ಪುಸ್ತಕದ ಮೂರು ಪ್ರತಿಗಳನ್ನು ಕಳೆದುಕೊಂಡದ್ದು ಶೋಚನೀಯ. ಆದರೆ ಇಲ್ಲಿ ಕಾಣುವ ಕೊರತೆ ನಮ್ಮವರು ಆಂಗ್ಲ ಭಾಷೆಯನ್ನು ಅರ್ಥಮಾಡಿಕೊಳ್ಳುವ ಕೊರತೆ. ಆದರೆ ನನಗೆ ಈ ಪುಸ್ತಕಗಳ ಸಹವಾಸ ನಾನು ನಡೆಸಿದ ಕಾರ್ಯಾಗಾರಗಳಲ್ಲಿ ಬಹಳ ಸಹಾಯಕವಾಗಿದ್ದುವು. ಬಹುಶಃ ಕಲಿಯಲು ಆಸ್ಥೆ ಇದ್ದರೂ ಪುಸ್ತಕಗಳು ದುರ್ಲಭವಾದುದರಿಂದ ಈ ಕಲಿಯುವಿಕೆಗೆ ಏಟು ಬಿದ್ದಿದೆ. ಮತ್ತೊಂದು ಕಾರಣ ನಿರ್ದೇಶಕರುಗಳೂ ಪ್ರತಿ ಪಾತ್ರದ ವಿಶ್ಲೇಷಣೆಯನ್ನು ಪ್ರಸಾಧನದ ದೃಷ್ಟಿಯಿಂದ ಮಾಡದಿರುವುದು. ಅವರುಗಳು ಪಾತ್ರಗಳ ಪರಿಕಲ್ಪನೆಯನ್ನು ವಿಶದವಾಗಿ ಪ್ರಸಾಧನಕಾರರಿಗೆ ಬಿಡಿಸಿ ಹೇಳುವ ಮತ್ತು ಚರ್ಚಿಸುವಷ್ಟು ಸಮಯ, ತಾಳ್ಮೆ ಇರಬೇಕು. ನಿರ್ದೇಶಕರು ಹಾಗೂ ಪ್ರಸಾಧನಕಾರರು ಒಟ್ಟಿಗೇ ಕೂತು ಚರ್ಚಿಸಿ ಒಂದೆರಡು ಸ್ಟೇಜ್ ರಿಹರ್ಸಲ್ ಮಾಡಿದರೆ ಆಗ ಕಲೆಯ ಪ್ರದರ್ಶನವೂ ಆದೀತು. ಆದರೆ ಇದಕ್ಕೆ ಕಂಟಕವಾಗಿರುವುದು ಸಮಯಾಭಾವ ಹಾಗೂ ಹಣದ ಕೊರತೆ. ಈ ನಿಟ್ಟಿನಲ್ಲಿ ಅತಿ ಸಣ್ಣ ಪಾತ್ರಕ್ಕೂ ವಿಶ್ಲೇಷಣೆಯನ್ನು ಕೊಟ್ಟು ಅದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ನಿರ್ದೇಶಕರಲ್ಲಿ ಪ್ರೊ. ಬಿ.ಸಿ.ಯವರು ಅತ್ಯಂತ ಮುಖ್ಯರು. ಇತ್ತೀಚಿನ ನಾಟಕಗಳು ಬಹುಪಾತ್ರಧಾರಿಗಳಿಂದ ಕೂಡಿರುವುದರಿಂದ ಹಾಗೂ ಅವು ಜನಜಂಗುಳಿಯ (Crowd scenes) ಪಾತ್ರಗಳಿರುವುದರಿಂದ ಅಷ್ಟೇ ವಿಶ್ಲೇಷಣೆ ನಿರುಪಯುಕ್ತ.

ಇಷ್ಟೆಲ್ಲಾ ನಡೆಯುತ್ತಿದ್ದರೂ ಈಗಿನವರಿಗೆ ತಮ್ಮ ಕಲಾವಂತಿಕೆ ಬೆಳೆಯುವುದೇ ಇಲ್ಲವೆ? ಎಂಬ ಚಿಂತನೆಯೂ ಬರಬಹುದು. ಆದರೆ ನಾವು ನಿರಾಶಾದಾಯಕವಾಗಿರಬೇಕಾಗಿಲ್ಲ. ಇಂದಿನ ರಂಗಭೂಮಿ ಸ್ಥಿತಿ ಉತ್ತಮಗೊಂಡಿದೆ.

ಬೆಳಕಿನ ಆವಿಷ್ಕಾರವಾಗಿದೆ. ಸಹಜ ಬೆಳಕಿನ ಅನುಕೂಲತೆ ಇದೆ. ಸಣ್ಣ ಪ್ರೇಕ್ಷಾಂಗಣಗಳು ಬಂದು ಅತ್ಯಂತ ನಿಕಟ ಅನುಭವವನ್ನು ಕೊಡುತ್ತವೆ. (Intimate Theatre). ಇದರಿಂದ ಪ್ರತಿ ಪಾತ್ರದ ವೈಶಿಷ್ಟ್ಯವನ್ನು ಬಿಡಿಸಲು ಸಾಧ್ಯವಾಗುತ್ತದೆ. ಈಗಲಂತೂ N.S.D ಪದವೀಧರರುಗಳು, "ನೀನಾಸಂ" ಪದವೀಧರರೂ ಸಾಕಷ್ಟು ಮಂದಿ ನಿರ್ದೇಶಕರುಗಳಿರುವುದರಿಂದ ಇನ್ನೂ ಹೆಚ್ಚಿನ ನಿರೀಕ್ಷಣೆಯೂ ಮಾಡಬಹುದು. ಅಲ್ಲದೇ ವಿಮರ್ಶಕರೂ ಇದನ್ನು ಅರ್ಥ ಮಾಡಿಕೊಂಡು ನಿಷ್ಪಕ್ಷವಾಗಿ, ತುಲನೀಯ ವಿಮರ್ಶೆ ಮಾಡಿದರೆ ಒಳ್ಳೆಯದು. ಅಲ್ಲದೆ ಕಲಾವಿದರಿಗೂ ಸ್ವ ವಿಮರ್ಶೆಯ ಅಭ್ಯಾಸ ಬೆಳೆದರೆ ಅನುಕೂಲ. ನಮ್ಮ ದಿನಗಳಲ್ಲಿ ನಾಣಿ, ನಾನು ನಾಟಕದ ಕೆಲವು ತುಣುಕುಗಳನ್ನಾದರೂ ನಮ್ಮ ಕೆಲಸದ ದೃಷ್ಟಿಯಿಂದ ನೋಡಿ ತುಲನ ಮಾಡುತ್ತಿದ್ದವು. ಅಲ್ಲದೇ ನಮ್ಮ ದಿನಗಳಲ್ಲಿ ನಮಗೆ ಅನುಕೂಲವಿದ್ದ ಇನ್ನೊಂದು ಸಂಗತಿಯೆಂದರೆ ನಮ್ಮ ಜೊತೆಯೇ ಇದ್ದ "ನೇಪಥ್ಯ ಶಿಲ್ಪಿ" ಪದ್ದಣ್ಣ ಅವರು. ತಮ್ಮ ಕಾಯಕದ ಪರಿಣಾಮವನ್ನು ನಾಟಕ ಮುಗಿದ ಮೇಲೆ ಅಥವಾ ಮತ್ತೊಂದು ಪ್ರದರ್ಶನಕ್ಕೆ ಮುಂಚೆ ಹೇಳುತ್ತಿದ್ದರು. ಅವರೂ ಸ್ವತಃ ಪ್ರಸಾಧನ ಕಾಯಕದಲ್ಲಿದ್ದುದು ಒಂದು ವೈಶಿಷ್ಟ್ಯ. ಅವರು ಭಾರತದ ಎಲ್ಲಾ ಮೂಲಗಳ ಕಚ್ಚೆ ಪಂಚೆಗಳೂ ಹಾಗೂ ರುಮಾಲುಗಳ ಪರಿಚಯ ಶ್ಲಾಘನೀಯ. ನಮಗೂ ಪ್ರಸಾಧನ ಕೊಠಡಿಯಲ್ಲಿ ಈ ನಿಟ್ಟಿನಲ್ಲಿ ಮುಖ್ಯ ಸಹಾಯಕರಾಗಿದ್ದರು. ಈಗ ತಾವು ನಿರ್ದೇಶಿಸುವ ನಾಟಕಗಳೆಲ್ಲಕ್ಕೂ ತಾವೇ ಪ್ರಸಾಧನ ಮಾಡುತ್ತಿರುವ ಶಶಿಧರ್ ಬಾರೀಘಾಟ್ ರವರೂ ಇದ್ದಾರೆ. ಇಂಥವರು ಹೆಚ್ಚಬೇಕು.

ಇಷ್ಟು ಹೇಳಿದರೂ ನಾಣಿಯವರ ಕನಸು ಕನಸಾಗೇ ಉಳಿಯುತ್ತದೆಯೆ ಅಥವಾ ನನಸಾಗಬಹುದೆ? ಇದಕ್ಕೆ ಪ್ರತಿಯೊಬ್ಬ ನಟನ ಸಹಕಾರ ಬೇಕಾಗುತ್ತದೆ. ಬಿ.ವಿ. ಕಾರಂತರೂ ಈ ವೃತ್ತಿಪರತೆಯ ಕನಸಿಟ್ಟುಕೊಂಡಿದ್ದು ಹವ್ಯಾಸಿ ರಂಗಭೂಮಿಯೂ ವೃತ್ತಿಪರವಾಗಿ ದುಡಿಯಬೇಕೆಂಬ ಕನಸು ನನಸಾಗಲು ನಮ್ಮ ಅನೇಕ ರಂಗಸಂಸ್ಥೆಗಳು, ಆರ್.ಆರ್.ಸಿ. ಬೆಂಗಳೂರು ಹಾಗೂ ನಾಟಕ ಅಕಾಡೆಮಿ ಸಹಾಯ ಮಾಡಬೇಕು. ರಂಗತಂಡಗಳಿಗೆ ಹಣದ ತೊಂದರೆ ಇದೆ. ಅಲ್ಲದೆ ಸಮಯದ ಅಭಾವವೂ ಕೂಡಾ. ಈಗಿನ ಕಾರ್ಯಾಗಾರಗಳು ನಟನೆ, ನಿರ್ದೇಶನ, ಇವುಗಳಿಗೆ ಸಂಬಂಧಿಸಿದ ಕ್ರಿಯೆಗಳಿಗೆ ಸೀಮಿತವಾಗಿ ನೇಪಥ್ಯ ಕಾರ್ಯಗಳಿಗೆ ಹೆಚ್ಚಿಗೆ ಒತ್ತಿಲ್ಲ. ನೇಪಥ್ಯಕ್ಕೇ ಮೀಸಲಾದ ಕಾರ್ಯಾಗಾರಗಳು ಕನಿಷ್ಠ ೩೦ ದಿನಗಳ ಅಂತರದವರೆಗೂ ನಡೆದರೆ ಅನುಕೂಲವಾದೀತು. ಆದರೆ ಇಲ್ಲಿರುವ ಕಷ್ಟ ಹಣ ಮತ್ತು ಸಮಯ. ಈ ದಿಕ್ಕಿನಲ್ಲಿ ಆರ್.ಆರ್.ಸಿ. ಹಾಗೂ ನಾಟಕ ಅಕಾಡೆಮಿಯವರು ಗಮನ ಹರಿಸ ಬೇಕು. ಈಚಿನ ದಿನಗಳಲ್ಲಿ N.S.D ಪದವೀಧರರೂ ಹಾಗೂ ರಂಗಕರ್ಮಿಗಳು ನಡೆಸುತ್ತಿರುವ ಒಂದು ಚಳವಳಿಯನ್ನು ಸರ್ಕಾರದವರೂ ಗಂಭೀರವಾಗಿ ಪರಿಗಣಿಸಬೇಕು. ಅದೆಂದರೆ ಕರ್ನಾಟದಲ್ಲೆ ಭಾರತದ ದಕ್ಷಿಣ ಭಾಗಕ್ಕೇ ಒಂದು N.S.D ಶಾಖೆ ತೆರೆಯಬೇಕು. ಈ ಚಳುವಳಿಯ ಮುಖ್ಯ ಪ್ರೇರಣೆಯೆಂದರೆ ದೇಶದಲ್ಲೇ ಅತಿ ಹೆಚ್ಚು ಸುಮಾರು ೬೦ರ ಹತ್ತಿರ N.S.D ಪದವೀಧರರು ಇರುವುದು ಕರ್ನಾಟಕದಲ್ಲೇ. ಸರ್ಕಾರವು ಇವರುಗಳಿಗೆ ಒಂದಷ್ಟು ಜಾಗ ಕೊಟ್ಟು ಕೇಂದ್ರದ N.SD ಮೇಲೆ ಸ್ವಲ್ಪ ಒತ್ತಡ ತಂದರೆ ಇದು ಸಾಧ್ಯವಾದೀತು. ಆಗ ರಂಗಭೂಮಿಯಲ್ಲಿ ಅಗ್ರಸ್ಥಾನ ಪಡೆದಿದ್ದ ಕನ್ನಡ ರಂಗಭೂಮಿ ಮತ್ತೆ ಕಳಕಳಿಸುವಂತಾಗಬಹುದು.

ಈ ಕನಸೂ ನನಸಾಗಬಹುದೆ? ಕಾದು ನೋಡಬೇಕು. ❑

ಸ್ನೇಹ ಸಂಕ್ರಮಣ

ಪ್ರಿಯ ಹರಿಹರಪ್ರಿಯ,

ನಿಮ್ಮ "ಪ್ರಜಾಸಾಹಿತ್ಯ" ಪತ್ರಿಕೆಯ ಮೊದಲ ಸಂಚಿಕೆ ತಲುಪಿದೆ. ಪತ್ರಿಕೆಯ ಲೇಔಟ್ ಅಂತೂ ಬಹಳ ಅಚ್ಚುಕಟ್ಟಾಗಿ ಸುಂದರವಾಗಿದೆ. ಲೇಖನಗಳು ಚಿಕ್ಕವಾದರೂ ಚೆನ್ನಾಗಿವೆ.

ಪತ್ರಿಕೆ ಚೆನ್ನಾಗಿ ಬೆಳೆಯಲಿ ಎಂದು ಹಾರೈಸುವೆ.

ವಂದನೆಗಳೊಂದಿಗೆ

ನಿಮ್ಮ

ಧಾರವಾಡ

ಡಾ. ಗಿರಡ್ಡಿ ಗೋವಿಂದರಾಜ

ಬಿ.ಸುರೇಶ

ಆಧುನಿಕ 'ಉದ್ಯಮ'ಗಳು ಮತ್ತು ಆಧುನಿಕ 'ಮನಸ್ಸು'ಗಳು

'ಬದಲಾವಣೆಯೊಂದೇ ಶಾಶ್ವತ' ಎನ್ನುತ್ತಾನೆ ಸಾರ್ತ್. ಅದನ್ನು ನಾವು ಕಾಣುತ್ತಲೇ ಇದ್ದೇವೆ. ಕಳೆದ ಶತಮಾನದ ಆದಿಯಿಂದ ಇಲ್ಲಿನವರೆಗೆ ಆಗುತ್ತಿರುವುದು ಬದಲಾವಣೆಗಳ ಮಹಾಪೂರ. ಲೆಟರ್ ಪ್ರೆಸ್ಸಿನಿಂದ ಪವರ್ ಪ್ರೆಸ್, ಅಲ್ಲಿಂದ ಗಣಕೀಕೃತ ಮುದ್ರಣದವರೆಗೆ ಸರಕು ಸಿದ್ಧಪಡಿಸುವ ಕ್ರಮ ಬದಲಾಗುತ್ತಲೇ ಇದೆ. ಈ ಬದಲಾವಣೆ ಕೇವಲ ಮುದ್ರಣ ಮಾಧ್ಯಮದಲ್ಲಿ ಮಾತ್ರವೇ ಅಲ್ಲ, ಇನ್ನೆಲ್ಲಾ ಮಾಧ್ಯಮದಲ್ಲಿಯೂ ಆಗಿದೆ, ಆಗುತ್ತಿದೆ. ನಮ್ಮ ದೃಶ್ಯ ಮಾಧ್ಯಮಗಳಲ್ಲಂತೂ ಈ ಬದಲಾವಣೆಯ ವೇಗ ಅದೆಷ್ಟು ತೀವ್ರಗತಿಯಲ್ಲಿ ಆಗುತ್ತಿದೆ ಎಂದರೆ, ವಿದ್ಯುನ್ಮಾನ ಮಾಧ್ಯಮಗಳ ಜನಪ್ರಿಯತೆಯ ಜೊತೆಗೇ ಇನ್ನುಳಿದ ದೃಶ್ಯ ಮಾಧ್ಯಮಗಳಲ್ಲಿ ಚಿತ್ರೀಕರಣ ಕ್ರಮ, ದೃಶ್ಯ ಜೋಡಣೆಯ ಕ್ರಮ ಕೂಡ ಬದಲಾಗಿದೆ. 'ಮಿಸ್ ಲೀಲಾವತಿ'ಯ 'ದೋಣಿ ಸಾಗಲಿ' ರೀತಿಯ ಹಾಡಿನ ಚಿತ್ರೀಕರಣ ಕ್ರಮಕ್ಕೂ ಈಚಿನ ಚಿತ್ರಗಳಲ್ಲಿ ಬರುತ್ತಿರುವ ಹಾಡಿನ ಚಿತ್ರೀಕರಣ ಕ್ರಮಕ್ಕೂ ಅಜಗಜಾಂತರ ವ್ಯತ್ಯಾಸವಾಗಿದೆ. ಅದನ್ನು ನಾವುಗಳೆಲ್ಲರೂ ಗಮನಿಸಿಯೇ ಇರುತ್ತೇವೆ. ಈ ಬದಲಾವಣೆಯ ಕ್ರಮವನ್ನ ನಾವು semiotics ಮೂಲಕ ನೋಡುವುದಾದರೆ ಎಂತಹ ಬದಲಾವಣೆಗಳಾಗಿದೆ ಎಂಬುದು ಇಂದಿನ ನನ್ನ ಮಾತುಗಳ ಹಿಂದಿರುವ ಪ್ರಧಾನ ವಿಷಯ.

ಯಾವುದೇ ಮಾತನ್ನ ಆಡುವುದಕ್ಕೆ ಮುನ್ನ ನಾವು ಈ ದೃಶ್ಯಮಾಧ್ಯಮಗಳೆಲ್ಲವೂ ಮೂಲತಃ ನಾಡಿನ ಜನರ ಒಳಿತಿಗಾಗಿ ಹುಟ್ಟಿದೆ ಎಂಬ ಒಂದು 'ಅರ್ಧ' ಸತ್ಯವನ್ನ ಒಪ್ಪಿಕೊಳ್ಳಬೇಕಾಗುತ್ತದೆ. ಅಂತಹ ಒಂದು ಒಪ್ಪಂದ ಸಧ್ಯದ ಮಾತುಗಳಿಗೆ ಅನಿವಾರ್ಯ. ಇಲ್ಲವಾದಲ್ಲಿ ನಮ್ಮ ಮಾತುಗಳು 'ಸಧ್ಯದ ಸಮಾಜ ಮತ್ತು ಸಮೂಹ ಮಾಧ್ಯಮಗಳು' ಎಂಬ ಸಮಾಜಮುಖೀ ಚರ್ಚೆಗೆ ಇಳಿದು ಬದಲಾಗಿರುವುದು ಏನು ಮತ್ತು ಯಾಕೆ ಎಂಬ ಒಳಮುಖಿ ಚರ್ಚೆಯಿಂದ ದೂರ ಸರಿದು ಸಮಾಜ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಕುರಿತ ಹೊರಮುಖಿ ಚರ್ಚೆಗೆ ಸಾಗುವ ಅಪಾಯವಿದೆ. ಆ ಅಪಾಯದಿಂದ ದೂರ ಉಳಿಯದೆ ಯಾವುದೇ ಮಾತುಗಳನ್ನ ಸಧ್ಯದ ಜನಪ್ರಿಯ ಮಾಧ್ಯಮಗಳನ್ನು ಕುರಿತು ಆಡುವುದು ದುಸ್ಸಾಧ್ಯ ಎಂಬುದನ್ನ ತಿಳಿದುಕೊಂಡೇ ನಮ್ಮ ಚರ್ಚೆಯನ್ನ, ಈ ಒಪ್ಪಂದದ ಜೊತೆಗೆ ಮುಂದುವರೆಸೋಣ.

> Our fine arts were developed, their types and uses were established in times very different from the present, by men whose power of action upon things was insignificant in comparison with ours. But the amazing growth of our techniques, the adaptability and precision they have attained, the ideas and habits they are creating, make it a certainity that profound changes are impending in the ancient craft of the beautiful.

ಅನ್ನುತ್ತಾನೆ ಪಾಲ್ ವಲೇರಿ ತನ್ನ 'ಏಸ್ತಟೀಕ್ಸ್' ಎಂಬ ಹೊತ್ತಿಗೆಯಲ್ಲಿ. ಈ ಮಾತಿನ ಮುಂದುವರಿಕೆಯಾಗಿ.

> In all the arts there is a physical component which can no longer be considered or treated as it used to be, which can not remain unaffected by our modern knowledge and power.

ಎಂತಲೂ ಆತ ಹೇಳುತ್ತಾನೆ.[೧]

---

೧. ಈ ಮಾತುಗಳನ್ನ ಕನ್ನಡೀಕರಿಸದೆ ಇರುವುದಕ್ಕೆ ಕಾರಣ ಅನುವಾದ ಕುರಿತ ದರಿದಾನ ಅಭಿಪ್ರಾಯ. ಅದಾಗಲೇ ಮೂಲ ಫ್ರೆಂಚ್ ನುಡಿಗಟ್ಟು ಆಂಗ್ಲವಾಗುವಾಗ ಆಗಿರಬಹುದಾದ ಗೊಂದಲವನ್ನ ಮತ್ತೆ ಕನ್ನಡದಲ್ಲಿ ಮತ್ತಷ್ಟು ಗೊಂದಲಕ್ಕೆ ತಳ್ಳಬಾರದು ಎಂದಷ್ಟೆ ಈ ತೀರ್ಮಾನಕ್ಕೆ ಬಂದಿದ್ದೇನೆ. ದರಿದಾ Pharmoken ಎಂಬ ಪದ ಕುರಿತಂತೆ Dissemination ಎಂಬ ಪ್ರಬಂಧ ಸಂಕಲನದ ಮೊದಲ ಲೇಖನದಲ್ಲಿ ತನ್ನದೇ ವಿಚಿತ್ರ ಶೈಲಿಯಲ್ಲಿ ಈ ಕುರಿತು ವಿವರಿಸುತ್ತಾನೆ. ಆಸಕ್ತರು ಅದನ್ನು ಗಮನಿಸಬಹುದು.

ಪಾಲ್ ವಲೇರಿ ಹೇಳುವಂತೆ ನಾವು ಈ ದೃಶ್ಯ ಮಾಧ್ಯಮವನ್ನು ಗ್ರಹಿಸುವ ಕ್ರಮ ಬದಲಾಗಿರುವುದು ಹೌದು. ಮತ್ತು ಈಗ ಇವೇ ದೃಶ್ಯ ಮಾಧ್ಯಮಗಳು 'ಮಾಧ್ಯಮ' ಎಂಬ ಹಂತವನ್ನು ದಾಟಿ 'ಉದ್ಯಮ'ಗಳಾಗಿವೆ. ಅದರಿಂದಾಗಿ ನಾವು ಕಲಾಮಾಧ್ಯಮ ಎಂದು ಗುರುತಿಸುತ್ತಿರುವ ಯಾವುದೇ ಮಾಧ್ಯಮವು ಇಂದು ಕಲೆ ಎಂಬ ಅಂಶದೊಂದಿಗೆ ಉಳಿದುಕೊಂಡಿಲ್ಲ. ಅದರಿಂದಾಗಿ ಇವೆಲ್ಲವುಗಳ ವಿನ್ಯಾಸ ಮತ್ತು ಕಟ್ಟಡಗಳು ಬದಲಾಗಿದೆ. ಈ ಬದಲಾವಣೆಗೆ ಉತ್ಪಾದನೆಯ ಹೆಸರಲ್ಲಿ ನಡೆಯುತ್ತಿರುವ ಚಟುವಟಿಕೆಯೇ ಕಾರಣ. ಈ ಉತ್ಪಾದನೆಯಲ್ಲಿ ಇರುವ ದೊಡ್ಡ ತೊಂದರೆಯೆಂದರೆ ಒಂದು ನಿರ್ದಿಷ್ಟ ಅವಧಿಯಲ್ಲಿ ತಯಾರಾಗುವ ಸರಕಿನ ಸಂಖ್ಯೆಯ ಜೊತೆಗೆ ಅವುಗಳ ಗುಣಮಟ್ಟದ್ದು. ಈ ಗುಣ ಪ್ರಮಾಣದ ಕ್ರಮ ಮಾತ್ರ ಸಾಹಿತ್ಯ – ಕಾವ್ಯ ಮೀಮಾಂಸೆಯ ಕ್ರಮಕ್ಕೆ ದಕ್ಕುವುದಲ್ಲ. ಅದು ಉದ್ಯಮದ ಮೂಲಭೂತ ಅಗತ್ಯವಾದ ಹಣಗಳಿಕೆ ಎಂಬ ದೈತ್ಯವನ್ನ ಮೆಚ್ಚಿಸುವುದು.[೨] ಈ ದೈತ್ಯವು ತಿಮಿಂಗಿಲದಂತೆ. ಅದರ ಹೊಟ್ಟೆಗೆ ನೀವು ಎಷ್ಟು ಸುರಿದರೂ ಸಾಲದು.[೩] ಈ ತಿಮಿಂಗಿಲದ ಹೊಟ್ಟೆಗೆ ಯಾವುದೂ ಮುಖ್ಯವಾಗುವುದಿಲ್ಲ. ಅದೇ ಕಾರಣಕ್ಕೆ ಅರಿಸ್ಟಾಟಲ್ ತನ್ನ ಕಾವ್ಯಮೀಮಾಂಸೆಯಲ್ಲಿ ಹೇಳುವ 'ಆರಂಭ, ಮಧ್ಯ ಮತ್ತು ಅಂತ್ಯ' ಎಂಬ ಕಥನ ಕಟ್ಟಡದ ಕ್ರಮ ನಮ್ಮ ಈ ಎಲ್ಲಾ ಜನಪ್ರಿಯ ಉದ್ಯಮ ಗಳಲ್ಲಿ ಇಲ್ಲವೇ ಇಲ್ಲ. ಅಲ್ಲಿರುವುದು ಕೇವಲ ಒಂದೇ ಗುಣ. ಅದು ಉತ್ಕರ್ಷ ಮತ್ತು ಕೌತುಕ. ಅದು ಹೇಗೆ ಎಂಬುದನ್ನ ಮುಂದೆ ಚರ್ಚಿಸೋಣ. ಆದರೆ ಸಧ್ಯದ ಮಟ್ಟಿಗೆ ನಮ್ಮ ಸಾಹಿತ್ಯ ಮೀಮಾಂಸೆಯ ಯಾವ ಕ್ರಮಕ್ಕೂ ಈ ನಮ್ಮ ದೃಶ್ಯ ಮಾಧ್ಯಮಗಳು ದಕ್ಕುವುದಿಲ್ಲ ಎಂಬುದಂತೂ ಸತ್ಯ.

ಇದಕ್ಕಿರುವ ಕಾರಣಗಳನ್ನು ಮತ್ತಷ್ಟು ವಿವರವಾಗಿ ನೋಡೋಣ. ಒಂದೊಮ್ಮೆ ಕಲೆ ಎನ್ನುವುದು ಒಂದು ಸಂಸ್ಕೃತಿಯ ಒಳಗಿನಿಂದ, ಪ್ರಾಯ ಯಾವುದೋ ಸಂಪ್ರದಾಯದ ಭಾಗವಾಗಿ ಹುಟ್ಟುತ್ತಿತ್ತು. ವಸಂತೋತ್ಸವದಲ್ಲಿ ನಾಟಕಗಳು, ಯಾವುದೋ ದೇವರ ಪೂಜೆಯ ಸಂದರ್ಭದಲ್ಲಿ ಅಥವಾ ಜಾತ್ರೆಯ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿದಂತೆ ಕೃತಿಗಳು ಹುಟ್ಟುತ್ತಿದ್ದವು. ಮೈಕೆಲ್ ಏಂಜಲೋನ ಅನೇಕ ಕೃತಿಗಳು ಹುಟ್ಟುವುದಕ್ಕೆ ಚರ್ಚ್‌ಗಳು ಕಾರಣವಾದಂತೆ ನಮ್ಮ ದೇಶದ ಬಹುತೇಕ ಕಲೆಗಳು ದೇವರು ಮತ್ತು ಜನಮಾನಸದ ಸಂಬಂಧದ ಜೊತೆಗೇ ಅರಳಿರುವುದನ್ನು ನಾವು ಕಾಣಬಹುದು. ಅಂದರೆ ಸಂಪ್ರದಾಯ ಅಥವಾ ಸಮಾಜದ ನೇಯ್ಗೆಯ ಒಳಗೇ ಅರಳಿದ ಕಲೆಗಳು ತಮ್ಮದೇ ಆದ ಅನನ್ಯತೆಯನ್ನ ಉಳಿಸಿಕೊಂಡಿದ್ದವು. ಇದನ್ನೇ ವಾಲ್ಟರ್ ಬೆಂಜಮಿನ್ 'ಕಲ್ಟ್ ಬ್ಯೂಟಿ' ಎನ್ನುತ್ತಾನೆ. ಆದರೆ ಬಹುಸಂಖ್ಯೆಯ ಪ್ರತಿಕೃತಿ ನಿರ್ಮಾಣದ ಉದ್ಯಮವು ಆರಂಭವಾದಾಗ 'ಯಾವುದೋ ಹಲಸಿನಹಣ್ಣು ಗಣೇಶನ ಆಕಾರದಲ್ಲಿ ಇದೆ' ಎಂದು ಪತ್ರಿಕೆಯಲ್ಲಿ ಸುದ್ದಿ ಬರುವುದನ್ನು ಮೀರಿ, ಆ ಹಣ್ಣಿನ ಛಾಯಾಚಿತ್ರದ ಪ್ರತಿಗಳು ಫ್ರೇಮ್ ಹಾಕಿಸಿಕೊಂಡು ಬಜ್ಹಾರಿಗೆ ಬರುತ್ತವೆ. ಅದೇ ಹಣ್ಣಿನ ಚಿತ್ರ ದೇವರಚಿತ್ರವಾಗಿ ರಸ್ತೆಯಲ್ಲಿ ಮಾರಾಟಕ್ಕೆ ದೊರೆಯುತ್ತದೆ. ಇಲ್ಲಿ ಮೂಲಕೃತಿ ರಚಿಸಿದ ಕಲಾವಿದನೂ ಇಲ್ಲ, ಆ ಕಲೆಯ ಮೀಮಾಂಸೆಯೂ ಇಲ್ಲ, ಸಾಮಾನ್ಯ ಜನರ ಮನೆಯ ಗೋಡೆಯ ಮೇಲೆ ಕಲಾಕೃತಿಯೊಂದು ನೇತಾಡತೊಡಗುತ್ತದೆ. ಮತ್ತು ಇಂತಹುದೇ ಚಿತ್ರವನ್ನ ಯಾವುದೋ ದೇಸಿ ಸಂಸ್ಥೆ ಅಥವಾ ಜಾನಪದ ಕೇಂದ್ರವು ತನ್ನಲ್ಲಿಗೆ ಬಂದವರಿಗೆ 'ಸ್ವದೇಸಿ' ಎಂಬ ಹೆಸರನ್ನು ಅದೇ ಚಿತ್ರದ ಮೇಲೆ ಮುದ್ರಿಸಿ ನೀಡುತ್ತಾ ಇರುತ್ತದೆ. ಅಲ್ಲಿಗೆ 'ದೇಸಿ' ಎಂಬುದು

೨. ಇಲ್ಲಿ ಹಣಗಳಿಕೆಯನ್ನ 'ದೈತ್ಯ' ಎಂದು ಕರೆಯುವುದಕ್ಕೆ ಕಾರಣ ಈ ಉದ್ಯಮಗಳು ವರ್ಷಾಂತ್ಯದಲ್ಲಿ ಪ್ರಕಟಪಡಿಸುವ ನಿವ್ವಳಲಾಭದ ಅಥವಾ ವಹಿವಾಟಿನ ಲೆಕ್ಕ. ಸನ್ ಟಿ.ವಿ. ಎಂಬ ಒಂದು ಛಾನೆಲ್‌ನ ಕಳೆದ ಆರ್ಥಿಕ ವರ್ಷದ ನಿವ್ವಳ ಲಾಭ ೪೦೦ ಕೋಟಿ ರೂಪಾಯಿಗಳು. ಇದನ್ನ ತಾವು ಸನ್‌ನೆಟ್‌ವರ್ಕ್.ಒಆರ್‌ಜಿಯಲ್ಲಿ ಸ್ವತಃ ನೋಡಬಹುದು. ಇನ್ನು ವಹಿವಾಟೆಷ್ಟು ಎಂಬುದನ್ನ ತಾವೇ ಆಲೋಚಿಸಬಹುದು ಮತ್ತು ಏಷ್ಯಾಖಂಡದ ಅತಿ ಹೆಚ್ಚು ವಹಿವಾಟಿನ ಛಾನೆಲ್ ಎಂಬ ಹೆಸರು ಆ ವಾಹಿನಿಗೆ ಹೇಗೆ ಬಂದಿದೆ ಎಂದು ತಿಳಿಯಬಹುದು.

೩. ಉದಾಹರಣೆಗಾಗಿ ಹೇಳುವುದಾದರೆ ಒಂದು ಈ ವಾರದ ಅತ್ಯಂತ ಜನಪ್ರಿಯ ಟೆಲಿಧಾರಾವಾಹಿ ಯಾವುದೇ ಕಾರಣಕ್ಕಾಗಿ ಮುಂದಿನವಾರದ ಜನಪ್ರಿಯತೆಯ ಪಟ್ಟಿಯಲ್ಲಿ ಕಾಣಿಸಿಕೊಳ್ಳದಿದ್ದರೆ ಆ ವಾರ ಆ ಧಾರಾವಾಹಿಯ ತಯಾರಕರಿಗೆ ಆತಂಕ ಮತ್ತು ಅಂತಿಮ ಕ್ಷಣಗಣನೆ ಆರಂಭವಾಗಿಬಿಡುತ್ತದೆ. ಆ ಧಾರಾವಾಹಿಯ ಹಿಂದಿರುವ ಎಲ್ಲಾ ಚಿಂತೆಗಳ ಇಚ್ಛೆಗೆ ವಿರುದ್ಧವಾಗಿ ಆ ಕಾರ್ಯಕ್ರಮ ನಿಂತೇ ಹೋಗುತ್ತದೆ. ಇದನ್ನು ಸಹ ಈ ಸಭೆಯಲ್ಲಿರುವ ಹಲವರು ಬಲ್ಲರು.

ಕೇವಲ ಜನ ಗುರುತಿಸಬಲ್ಲ ದೇವರ ಆಕಾರವಿರುವ ಸರಕಾಗಿ ಬಿಡುತ್ತದೆ. ಈ ಉದಾಹರಣೆಯನ್ನೇ ಆಧಾರವಾಗಿರಿಸಿ ಕೊಂಡು ನಮ್ಮ ರಂಗಭೂಮಿಯ ಜನಪ್ರಿಯ ಮಾದರಿಗಳಾದ 'ಸಂಗ್ಯಾಬಾಳ್ಯ' ಅಥವಾ 'ಲಕ್ಷಾಪತಿ ರಾಜನ ಕಥೆ' ಮುಂತಾದ ಅನೇಕ ನಾಟಕಗಳನ್ನು ನಾವು ಗಮನಿಸಬಹುದು. ಇವೂ ಸಹ ಯಾವುದೋ ಮೂಲ ಸಂಪ್ರದಾಯದ ಸಂದರ್ಭದಲ್ಲಿ ಅರಳಿದ ಕಲೆ ಎಂದು ನಮ್ಮ ಜಾನಪದ ತಜ್ಞರು ಗುರುತಿಸುತ್ತಾರೆ.[೪] ಆದರೆ ಈಗ ಅವು ಈ ಮುಂಚೆ ಚರ್ಚಿಸಿದ ದೈತ್ಯನ ಹೊಟ್ಟೆ ತುಂಬಿಸುವ ಕಾಯಕದಲ್ಲಿ ತೊಡಗಿದೆ. ದೇಸಿ ಎಂಬುದೂ ಸಹ ಇಂದು ಮಾರಾಟದ ಸರಕು. ಅಂತೆಯೇ ನಮ್ಮ ಊರುಗಳಲ್ಲಿ ಬಂದಿರುವ ಹೊಸ ಹೋಟೆಲುಗಳನ್ನು ನೋಡಿ. ಅವು 'ಹಳ್ಳಿಮನೆ', 'ಕಾಡುಮನೆ' ಮುಂತಾದವಾದರೆ – ನಮ್ಮ ಬೇಬಿಸಿಟ್ಟಿಂಗ್ ಸೆಂಟರ್‌ಗಳು ಸಹ ತಮ್ಮ ಹೆಸರನ್ನ 'ಅಜ್ಜಿಮನೆ', 'ಅಮ್ಮನಮನೆ' ಎಂದಾಗುತ್ತಿರುವುದನ್ನ ಕಾಣಬಹುದು. Desi has become a fashion today because of Urbanization, which is a by product of Globalization. ಆದ್ದರಿಂದಲೇ ಇಂದು ದೇಸಿ ಕುರಿತ ಚಿಂತನೆ ಎಂದರೆ ಅದೇ ಜಾಗತೀಕರಣದ ಯಂತ್ರಕ್ಕೆ ಊಟ ಬಡಿಸಿದ ಹಾಗೆ.[೫]

ಮೇಲೆ ನಾನು ತಿಳಿಸಿದ ಉದಾಹರಣೆಗಳ ಹಿನ್ನೆಲೆಯಲ್ಲಿ ಈ 'ದೇಸಿ' ಕಲೆ ತನ್ನ ಮೂಲ ಅಗತ್ಯ ಮತ್ತು ಸ್ವರೂಪದ ಬದಲಿಗೆ ಪ್ರದರ್ಶನದ ವಸ್ತುವಾಗಿ ಉಳಿದುಬಿಡುತ್ತದೆ. ಅದು ಜನಪ್ರಿಯವೂ ಆಗುತ್ತದೆ ಎಂಬುದಕ್ಕೆ 'ಜನುಮದ ಜೋಡಿ'ಯಂತಹ ಚಿತ್ರದಲ್ಲಿ ಬಳಕೆಯಾದ ಕಂಸಾಳೆಯನ್ನ ಅಥವಾ ಇತ್ತೀಚಿನ 'ಜೋಗಿ' ಚಿತ್ರದಲ್ಲಿ ಬಳಕೆಯಾಗಿರುವ 'ಎಲ್ಲೋ ಜೋಗಪ್ಪ'ವನ್ನ ಗಮನಿಸಬಹುದು. ಇದನ್ನೇ ವಾಲ್ಟರ್ ಬೆಂಜಮಿನ್ ಹೀಗೆನ್ನುತ್ತಾನೆ:

> 'The Instant criterion of authenticity ceases to be applicable to artistic reproduction, the total function of art is then reversed. Instead of being based on ritual, it begins to be based on another practice - Politics.'(Illuminations, By Walter Benjamin, article 'The work of art in the age of mechanical reproductions,page 218)

ಈ ಮಾತಿನ ಕೊನೆಯಲ್ಲಿ ಆತ ಹೇಳುವ ಪಾಲಿಟಿಕ್ಸ್ ಎಂಬ ಶಬ್ದವನ್ನು ಎಚ್ಚರಿಕೆಯಿಂದ ಗಮನಿಸಬೇಕು. ಈಗ ನಮ್ಮೆದುರಿಗಿನ ಎಲ್ಲ ಮಾಧ್ಯಮಗಳೂ ಆ ರಾಜಕೀಯಕ್ಕೆ ಸಿಕ್ಕಿಬಿದ್ದಿವೆ. ವಿಶೇಷವಾಗಿ ಟೆಲಿವಿಷನ್ನಿನ ಮೇಲೆ ಈ ರಾಜಕೀಯದಿಂದ ಆಗಿರುವ ಪ್ರಭಾವ ದೊಡ್ಡದು.

ಒಂದು ದೃಶ್ಯ ಗಮನಿಸಿ:

ಆಕೆ ಕಾಣಿಸುತ್ತಾಳೆ. ಅವಳ ತುಟಿಯ ಮೇಲೆ ಒಂದಿಂಚು ದಪ್ಪದ ಬಣ್ಣವಿದೆ. ಅವಳ ಹಣೆಯ ಮೇಲೆ ರಂಗೋಲಿ ಬರೆದಿದೆಯೋ ಎಂಬಂತಹ ಚಿತ್ತಾರವೂ ಕುಂಕುಮದ ಹೆಸರಲ್ಲಿದೆ. ಆಕೆಗೆ ಐವತ್ತು ವರ್ಷಗಳ ಆಸುಪಾಸಿರಬಹುದು. ಆದರೆ ಆಕೆಯ ತಲೆಗೂದಲಲ್ಲಿ ಒಂದೇ ಒಂದು ಬೆಳ್ಳಿ ಕೂದಲಿಲ್ಲ. ಅವಳು ಅಳುತ್ತಿದ್ದಾಳೆ. ಆದರೆ ಅವಳ ಮುಖದ ಮೇಲಿನ ಬಣ್ಣ ಕರಗುತ್ತಿಲ್ಲ.[೬] ಆಕೆಯ ಕಣ್ಣೀರಿಗೆ ಕಾರಣ ಅವಳೆದುರಿಗೆ ಇರುವ ಹೆಣ. ಆ ದೇಹ ಅವಳ ಗಂಡನದು. ಆ ದೇಹವಾದರೋ ಈಗಿನ್ನೂ ನಿದ್ದೆ ಹೋಗುತ್ತಿರುವಂತಿದೆ. ಆ ದೇಹದ ಮೇಲೆ ಇರುವ ಸೂಟನ್ನು ಈಗಷ್ಟೇ ಡ್ರೈಕ್ಲೀನಿಂಗ್ ಅಂಗಡಿಯಿಂದ ತಂದಂತಿದೆ. ಆತನ ತಲೆಗೂದಲು ಸಹ ಬಿಳಿಯಾಗಿಲ್ಲ.[೭] ಆದರೆ ಗಡ್ಡ ಮಾತ್ರ ಬೆಳ್ಳಗಿದೆ. ಯಾರೋ ಸುಣ್ಣವನ್ನ ಗಡ್ಡಕ್ಕೆ ಮಾತ್ರ ಹಚ್ಚಿದರೋ ಎಂಬಂತೆ. ಸುತ್ತ ನಿಂತಿರುವ ಜನರ ಮೇಲ್ಟೈ ಲಕ್ಷಣ ಇದಕ್ಕಿಂತ ಭಿನ್ನವಲ್ಲ. ಆಕೆ ಭೋರೆಂದು ಅಳುತ್ತಾಳೆ. ಆಗ ಅಲ್ಲಿಗೆ ಬರುವ ಮತ್ತೊಂದು

---

೪. ನೋಡಿ: ಜಾನಪದ ವಿಶ್ವಕೋಶ, ಸಂ: ಚಂದ್ರಶೇಖರ ಕಂಬಾರ.

೫. ಈ ವಿಚಾರಸಂಕಿರಣವು ಸಹ ಯಾವುದೋ ಫಾರಿನ್ ಫಂಡಿನಿಂದ ನಡೆಯುತ್ತಾ ಇರಬಹುದು. ನಥಿಂಗ್ ಕ್ಯಾನ್ ಬಿ ಟ್ರಸ್ಟೆಡ್ ಟು ಡೆ. ಯೂ ನೋ?

೬. ಮಾರ್ಕ್ವೇಜ್‌ನ 'ಎರಿಂದಿರಾ' ಕಥೆಯ ಅಂತ್ಯದಲ್ಲಿ ಬರುವ ಮಾಂತ್ರಿಕ ವಾಸ್ತವತೆಯ ವಿವರಗಳು ಇಲ್ಲಿ ಹೊಂದುವುದೇ ಇಲ್ಲ.

೭. ಅಥವಾ ಆತ ವಿಗ್ಗೇಶ್ವರ!

ಪಾತ್ರ – ಹಣವಾಗಿರುವವನ ಎರಡನೆಯ ಸಂಬಂಧ. ಅವಳು ಈ ಮೊದಲು ನೋಡಿದ ಪಾತ್ರಧಾರಿಗಿಂತ ಸ್ವಲ್ಪ ಸಣ್ಣವಳು. ಅವಳು ಹಣ ನೋಡಲು ಬರುವಾಗಲೂ ಈಗಷ್ಟೇ ಬ್ಯೂಟಿಪಾರ್ಲರಿನಲ್ಲಿ ಸಿದ್ಧಗೊಂಡಂತಿದ್ದಾಳೆ. ಈ ಪಾತ್ರವನ್ನು ಕಂಡೊಡನೆ ಮೊದಲ ಹೆಣ್ಣು ಪಾತ್ರಕ್ಕೆ ಭಯಂಕರ ಸಿಟ್ಟು ಬರುತ್ತದೆ. ಆದರೆ ಅವಳು ಆ ಸಿಟ್ಟನ್ನ ನಮ್ಮ ಸಾಮಾನ್ಯ ಜನರಂತೆ ತೋರಿಸುವಂತಿಲ್ಲ. ಕೈಕಾದೇವಿಯ ಎದುರು ಕೌಸಲ್ಯೆಯಂತೆ ಅವಳು ಭಾರೀ ಸಿವಿಲೈಸ್ಡ್! ಅವಳ ನೋಟಕ್ಕೆ ಹಿನ್ನೆಲೆಯಾಗಿ ನೂರು ವಯಲಿನ್‌ಗಳು ಕೂಗುತ್ತವೆ. ಯುದ್ಧ ಆರಂಭವಾಗಿದೆಯೋ ಎಂಬ ಸಂಗೀತ ಇರುತ್ತದೆ. ಆ ಹೆಣ್ಣಿನ ವಿಚಿತ್ರ ಕೋನದ ಚಿತ್ರಿಕೆಗಳ ಜೊತೆಗೆ ಹೊಸದಾಗಿ ಬಂದವಳ ಅಂತಹುದೇ ಚಿತ್ರಿಕೆಗಳು ಜಕ್ಸ್ಟಪೋಸ್ ಆಗುತ್ತವೆ.[೮] ಆಗ ತಟ್ಟನೆ ಕಾರ್ಯಕ್ರಮ ಮುಗಿಯಿತು ಎಂಬ ಸಂಗೀತವೋ ಅಥವಾ ಕಾರ್ಯಕ್ರಮದ ನಡುವಿನ ಬ್ರೇಕೋ ಬರುತ್ತದೆ.

ಇದು ಇಂದಿನ ಬಹುತೇಕ ಟೆಲಿವಿಷನ್ ಕೃತಿಗಳ 'ರಣ' ನೀತಿ. ಇಂತಹ ಕಟ್ಟಡಕ್ರಮ ದೇಸಿ ಕಥೆಯಾದರೂ ತಪ್ಪದು.[೯]

ಇಲ್ಲಿ ಆ ಕಲಾವಿದರಿಗೆ ಪ್ರೇಕ್ಷಕರನ್ನು ನೋಡುವ, ಪ್ರತಿಕ್ರಿಯೆ ಪಡೆಯುವ ಅವಕಾಶವೂ ಇಲ್ಲ. ಆತನ/ಆಕೆಯ ಪ್ರಯತ್ನಗಳೆಲ್ಲವೂ ಕೇವಲ ಕ್ಯಾಮೆರಾ ಎಂಬ ಯಂತ್ರಕ್ಕಾಗಿ ಮತ್ತು ಆ ಯಂತ್ರದಿಂದ ಹೊರಬಂದ ಸರಕನ್ನ ಜೋಡಿಸಿಡುವ ಸಂಕಲನ ಎಂಬ ತಂತ್ರಕ್ಕಾಗಿ. ಹೀಗಾಗಿಯೇ ವಾಲ್ಟರ್ ಬೆಂಜಮಿನ್, ಸಿನಿಮಾವನ್ನು ಕಲೆಯೆಂದು ಗುರುತಿಸುವುದಿಲ್ಲ. ಬದಲಿಗೆ ಪ್ರತಿಕೃತಿಗಳನ್ನು ತಯಾರಿಸುವ ಕಾರ್ಖಾನೆ ಎನ್ನುತ್ತಾನೆ. ಈ ಮಾತು ಸಿನಿಮಾಗಿಂತ ಹೆಚ್ಚಾಗಿ ಟೆಲಿವಿಷನ್ ಎಂಬ ಹೊಸ ಮಾಧ್ಯಮಕ್ಕೆ ಹೆಚ್ಚು ಹೊಂದುತ್ತದೆ. ಆ ಉದ್ಯಮದಲ್ಲಿನ ಶಕ್ತಿ 'ರಾಜಕೀಯ' ನಡೆಸುವವರು ನೇರವಾಗಿ ಕೊಳ್ಳುಬಾಕ ಸಂಸ್ಕೃತಿಯ ಲಾಭಕೋರರು. ಅವರಿಗೆ ಪ್ರೇಕ್ಷಕ ಮತ್ತು ಅನುಭೂತಿ ಎಂಬ ನಾಟ್ಯಶಾಸ್ತ್ರದ ವಿವರ ಸುತರಾಂ ಬೇಕಿಲ್ಲ. ಅವರಿಗೆ ಪ್ರೇಕ್ಷಕನು ಕಥೆ ಎಂಬ ಕೇಂದ್ರವನ್ನು ನೋಡುವುದಕ್ಕಿಂತ ಪಾತ್ರಧಾರಿಗಳ ಮೇಲ್ಮೈ ವಿವರವನ್ನು ಗಮನಿಸುವುದಷ್ಟೇ ಮುಖ್ಯ. ಮೇಲೆ ಉದಾಹರಿಸಿದಂತಹ ಕಾರ್ಯಕ್ರಮ ನೋಡಿದ ಹೆಂಗಸರು ಮಾರನೆಯದಿನವೇ ಆ ಬಡಾವಣೆಯ ಪಾರ್ಲರ್‌ಗೆ ಹೋಗಬೇಕು, ಇಲ್ಲಾ ಅದೇ ಕಾರ್ಯಕ್ರಮದ ನಡುವೆ ತೋರಿಸಿದ ಜಾಹೀರಾತಿನಲ್ಲಿರುವ ವಸ್ತುವನ್ನು ಕೊಳ್ಳಬೇಕು. ಇದು ಒಟ್ಟು ಕಥೆಯ ತಾತ್ಪರ್ಯ. ಇಲ್ಲಿ ಪ್ರೇಕ್ಷಕ ಪ್ರೀತಿಗಿಂತ ಮುಖ್ಯವಾಗುವುದು ಮಾರುವ ಶಕ್ತಿ ಮಾತ್ರ.

ಆಧುನಿಕ ಪುರಾಣ ಅಥವಾ ನವ್ಯೋತ್ತರ ಎಂಬ ಗೊಂದಲ

ಈ ನವ್ಯೋತ್ತರ ಎಂಬುದೇ ಗೊಂದಲದ ಗೂಡು. ಮೋಡ್ ಎಂಬ ಪದದ ಅರ್ಥ 'ಸಧ್ಯದ ಈಗ'. ಈ ಈಗದ ನಂತರದ್ದನ್ನು ಗುರುತಿಸುವುದು ಎಂದರೆ ಅದು ಕನಸು ಕಾಣುವುದು ಎಂದಾಗುತ್ತದೆ. ಈ ನವ್ಯೋತ್ತರದ ಗೊಂದಲ ಕಳೆದ ಶತಮಾನದ ಆರಂಭದಿಂದ ನಡೆಯುತ್ತಿದೆ. ಪಿಕಾಸೋನ ಕ್ಯೂಬಿಸ್ಟ್ ಚಿತ್ರಗಳಿಂದ, ಎಲ್ಲಾ ದೇಶ-ಕಾಲಗಳಿಗೂ ಹೊಂದುವ ಆರ್ಕಿಟೆಕ್ಚರ್ ಒಂದನ್ನು ರೂಪಿಸುವ ಯತ್ನದಲ್ಲಿ ಯುರೋಪಿನ ವಾಸ್ತುತಜ್ಞರು ರೂಪಿಸಿದ ಬೆಂಕಿಪೊಟ್ಟಣದಂತಹ ಮನೆಗಳವರೆಗೆ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವುದೆ ಜೀವನ'ವಾಗಿದೆ ನವ್ಯೋತ್ತರಕ್ಕೆ. ಈ ನವ್ಯೋತ್ತರದ ಪ್ರಯೋಗಗಳಿಂದಾಗಿ ಅತಿ ಹೆಚ್ಚು ಲಾಭ ಪಡೆದದ್ದು ಜಾಹೀರಾತು ಜಗತ್ತು. ಯಾವುದನ್ನು ದಾದಾಯಿಸಂ ಎಂದು ಚಿತ್ರಕಲಾ ಜಗತ್ತು ಗುರುತಿಸುತ್ತದೋ ಅದರ ಪ್ರಭಾವದಿಂದಲೇ ಜಾಹೀರಾತುಗಳು ಇಂದಿಗೂ ತಯಾರಾಗುತ್ತಿವೆ. ಕೆಲವು ವರ್ಷಗಳ ಹಿಂದೆ ಅತಿ ಹೆಚ್ಚು ಬಿತ್ತರಗೊಳ್ಳುತ್ತಿದ್ದ ಕೋಲಾ ಕಂಪನಿಯೊಂದರ ಜಾಹೀರಾತನ್ನು ತಾವು ನೆನಪಿಸಿಕೊಳ್ಳಬಹುದು. ಅಲ್ಲಿ 'ಅಲಾರೇ, ಅಲಾರೇ' ಎಂಬ

---

೮. ಇದನ್ನು ಚಿತ್ರೋದ್ಯಮದ ಭಾಷೆಯಲ್ಲಿ ಕಟ್ ಟಿಲ್ಟ್ ಅಪ್ ಎನ್ನುತ್ತಾರೆ.

೯. 'ನಲ್ಲತಂಗಾದೇವಿಕಥಾ' ಎಂಬ ಜಾನಪದ ಕಥೆಯೇ ಈಚೆಗೆ 'ಅಣ್ಣ-ತಂಗಿ' ಎಂಬ ಹೆಸರಿನ ಜೊತೆಗೆ ಚಿತ್ರಮಾಧ್ಯಮಕ್ಕೆ ಬಂದಿದೆ. ಆಸಕ್ತರು ಆ ಚಿತ್ರದಲ್ಲಿ ಮೇಲೆ ನಾವು ತಿಳಿಸಿದಂತಹ ಸಿಮಿಯಾಲಜಿಯನ್ನು ಗುರುತಿಸಬಹುದು.)

ಮರಾಠ ಜಾನಪದ ಗೀತೆಯ ಮೂಲಕವೇ ಇಡೀ ಜಾಹೀರಾತನ್ನು ರೂಪಿಸಲಾಗಿತ್ತು. ಅದರೊಂದಿಗೆ ಸಚಿನ್ ತೆಂಡೂಲ್ಕರ್‌ರಂತಹ ಆಧುನಿಕ ಐಕಾನ್‌ಗಳನ್ನು ಬಳಸಿಕೊಂಡು ಸಾಮಗ್ರಿಯೊಂದನ್ನು ಮಾರುವ ಪ್ರಯತ್ನವದು. ಅಂತೆಯೇ ಸೋಪಿನಪುಡಿಯೊಂದರ ಮಾರಾಟಕ್ಕಾಗಿ 'ಅವಳಿಗೆ ಬುದ್ಧಿಯಿದೆ!' ಎಂಬ ಪ್ರಧಾನ ವಾಕ್ಯವನ್ನು(ಕೀ ಲೈನ್) ಬಳಸಿಕೊಂಡದ್ದನ್ನು ಗಮನಿಸಬಹುದು. ಇಲ್ಲಿ ಬಳಸಲಾದ ಸೂಚಕಗಳು (ಸೈನ್ ಎಂಬ ಅರ್ಥದಲ್ಲಿ) ನಮ್ಮ ಸಂಸ್ಕೃತಿಯದೇ. ಆದರೆ ಮಾರಾಟವಾಗುವ ವಸ್ತು ಮಾತ್ರ ಇನ್ನೆಲ್ಲಿಯದೋ! ನೋಡಿ; ಮರ್ಲಿನ್ ಮನ್ರೋ ಎಂದೊಡನೆ ನಿಮಗೆ ನೆನಪಾಗುವುದು ಹಾರುವ ಗಾಳಿಯ ಎದುರಿಗೆ ತನ್ನ ಸ್ಕರ್ಟ್ ಹಾರದಂತೆ ಹಿಡಿದುಕೊಂಡ ಒಂದು ಹೆಣ್ಣಿನ ಚಿತ್ರ. ಈ ಸೂಚಕದ ಬಳಕೆ ಅದೆಷ್ಟು ಬಳಕೆಯಾಗುತ್ತಿದೆ ಎಂದರೆ, ಅದು ಯಾವುದೇ ಮಾಡೆಲ್(ರೂಪದರ್ಶಿ) ಬಳಕೆಯಾಗಿದ್ದರೂ ಆ ಗೆಸ್ಚರ್‌ನ ಅರ್ಥ ಒಂದೇ. ಅದು ಅಮೇರಿಕನ್ ಮನಸ್ಸುಳ್ಳ ಹೆಂಗಸು ಮತ್ತು ಅದು ಜಗತ್ತಿನಾದ್ಯಂತ ಅತಿಹೆಚ್ಚು ಜನಪ್ರಿಯ ಸೂಚಿ. ನಮ್ಮ ಚಲನಚಿತ್ರಗಳು ಸಹ ಇಂದು ಇಂತಹ ಸೂಚಿಗಳ ಮೂಲಕವೇ ಪ್ರೇಕ್ಷಕರಿಗೆ ತಮ್ಮದು ಈ ಕಾಲದ ಸಿನಿಮಾ ಎಂದು ತೋರಿಸಿಕೊಡುವ ಪ್ರಯತ್ನ ಮಾಡುತ್ತಿವೆ. ಹೀಗೇ ನವ್ಯೋತ್ತರದ ಹೆಸರಿನಲ್ಲಿ ಆದ ಎಲ್ಲಾ ಪ್ರಯೋಗಗಳೂ ಪ್ರಧಾನವಾಹಿನಿಗೆ ಬಂದಿದೆ. ಅದರೊಂದಿಗೆ ಹೊಸದೊಂದು ಪುರಾಣ ಕಟ್ಟುವ ಪ್ರಕ್ರಿಯೆ ಆರಂಭವಾಗಿದೆ. ಆ ಪುರಾಣವನ್ನು 'ಆರೋಗ್ಯವಂತ ದೇಹಗಳ ಅನಾರೋಗ್ಯಕರ ಮನಸ್ಸು' ಎನ್ನಬಹುದು.

ಈ ಪುರಾಣದ ಫಲಗಳೇ ಮನೆಮನೆಗಳಲ್ಲಿ ಪ್ರತಿದಿನ ಬಿತ್ತರವಾಗುತ್ತಿರುವ 'ಕ್ಯೂಂಕಿ ಸಾಸ್ ಬಿ ಬಹೂತಿ' ರೀತಿಯ ದೈನಿಕ ಧಾರಾವಾಹಿಗಳು. ಈ ಧಾರಾವಾಹಿಗಳ ಬಣ್ಣ ಮತ್ತು ದೃಶ್ಯ ನಿರ್ವಹಣೆಯ ಬಗ್ಗೆ ಆಗಲೇ ಮಾತಾಡಿದ್ದೇವೆ. ಈಗ ನವ್ಯೋತ್ತರದ ಸಂದರ್ಭದಲ್ಲಿ ಇವುಗಳ ರಾಚನಿಕಗಳನ್ನು, ಕಟ್ಟಡ ವಿನ್ಯಾಸವನ್ನು ಗಮನಿಸಿ ಮತ್ತು ಅದರಿಂದ ಹುಟ್ಟುವ 'ಆಧುನಿಕ ಪುರಾಣ' ಎಂತಹದು ಎಂದು ನೋಡೋಣ.

ಈ ದೈನಿಕ ಧಾರಾವಾಹಿಗಳಲ್ಲಿ ಇರುವುದು ಹೊರವರ್ತುಲದ ಅಂದರೆ ಸೆಂಟ್ರಿಫ್ಯೂಗಲ್ ಚಲನೆ. ಪೂರೈಸುತ್ತವೆ. ಇದರಿಂದ 'ಯಜಮಾನ್ ಖುಷ್ ಹುವಾ!' ರೀತಿಯ ಸಾಧನೆಯಂತೂ ಆಗುತ್ತದೆ. ಆದರೆ ಸಮಾಜದ ನೇಯ್ಗೆಯ ಮೇಲೆ ಆಗುವ ಪರಿಣಾಮಗಳು ವಿಭಿನ್ನ. ಗಮನಿಸಿ: ಈಚೆಗೆ ನಗರಗಳಲ್ಲಿ ಹೊಸ ಮನೆಯನ್ನು ಕಟ್ಟುವವರು ತಣ್ಣಗಿನ ಬಣ್ಣವನ್ನು ಗೋಡೆಗೆ ಬಳಸುವುದಿಲ್ಲ. ಗೋಡೆಗಳು ಧಾರಾವಾಹಿಗಳಿಂದ ಪ್ರೇರಿತವಾದಂತೆ ದಟ್ಟನೀಲಿ, ಅಮೇರಿಕನ್ ಬ್ರೌನ್ ಮತ್ತು ಫ್ಲಾರಸೆಂಟ್ ಆರೆಂಜ್, ಆಗಿರುತ್ತವೆ. ಮನೆಯ ಪ್ರತಿಮೂಲೆಗೂ ಅಲಂಕಾರ ಸಾಮಗ್ರಿಗಳು. ಅದೂ ಸಹ ಹಳೆಯ ಮಾದರಿಯ ಹೊಸದು ಅಥವಾ ಪ್ರತಿಕೃತಿ. ಇಲ್ಲವಾದರೆ ದೇಸಿಯತೆಯ ಕುರುಹಾಗಿ ಗೋಡೆಗಳ ಮೇಲೆಲ್ಲಾ ಚಿತ್ತಾರದ ರಂಗವಲ್ಲಿ. ಇದರಿಂದಾಗಿ ನಗರ ಎಂಬುದು ನೂತನ ಟ್ರೈಬ್ ಆಗಿದೆ. ಈ ಟ್ರೈಬ್‌ಗಳು ತಮ್ಮದೇ ಆದ ಟೋಟೆಮ್‌ಗಳನ್ನು ರೂಪಿಸಿಕೊಳ್ಳುತ್ತಿವೆ. ಹೀಗೆ ನಮ್ಮ ಆಧುನಿಕ ಪುರಾಣದಲ್ಲಿ ಎಲ್ಲವೂ 'ಅಲಂಕಾರ' ಆಗಿಬಿಡುತ್ತದೆ. ಹೀಗಾಗಿ ಮನೆಯ ಒಳಗಿರುವ ಮನಸ್ಸುಗಳು ಸಹ ಎಂದೆಂದಿಗೂ ಹೊರಗೆ ಉಳಿಯುವ ಸಾಧ್ಯತೆ ಹೆಚ್ಚುತ್ತದೆ.

ಆದ್ದರಿಂದ ಆಧುನಿಕ ಸಮಾಜೋ ಸಾಂಸ್ಕೃತಿಕ ವ್ಯವಸ್ಥೆ ಎಂದರೆ chaos! ಈ ಗೊಂದಲದ ನಡುವೆ ಸಾಗುತ್ತದೆ ನಮ್ಮ ದೈನಿಕ ಪುರಾಣ!

❑

'ಬದಲಾಗುತ್ತಿರುವ ಸಂವಹನ ಮೀಮಾಂಸೆ – ನವಸಮಾಜೋ ಸಾಂಸ್ಕೃತಿಕ ರಚನೆಗಳು' ಎಂದು ಹೆಸರಿಸಲಾಗಿದ್ದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ 'ಆಧುನಿಕೋತ್ತರ ಸಂದರ್ಭ – ದೇಸಿ ಸಂಸ್ಕೃತಿ' ಎಂಬ ಹೆಸರಲ್ಲಿ ಮಂಡಿತವಾದ ಪ್ರಬಂಧದ ಪಾಠ (ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ರಂಗಾಯಣ ಮೈಸೂರು ಏರ್ಪಡಿಸಿದ್ದ ಕಾರ್ಯಕ್ರಮ, ದಿನಾಂಕ : ೧೨ ಡಿಸೆಂಬರ್ ೨೦೦೫/ ಬಿ.ಎನ್. ಬಹದ್ದೂರ್ ಸಭಾಂಗಣ)

ಅಜ್ಜಂಪುರ ಕೃಷ್ಣಸ್ವಾಮಿ

ವನಪಾಲನೆ : ಅಂದು, ಇಂದು, ಮುಂದು

ವನಸಂಪತ್ತು ಪ್ರಕೃತಿದತ್ತ ಸಂಪನ್ಮೂಲಗಳಲ್ಲಿ ಅದ್ವಿತೀಯವಾದದ್ದು. ಖನಿಜ ಸಂಪತ್ತು ಬಳಸಿದಂತೆ ಕರಗಿಹೋಗಬಹುದು. ತೈಲ ಸಂಪತ್ತು ತೆಗೆದಂತೆ ತೇಲಿಹೋಗಬಹುದು. ಆದರೆ ಸುವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಬಳಸಿದರೆ ವನಸಂಪತ್ತು ಮಾನವನಿಗೆ ಕರಗಲಾರದ ಸಂಪತ್ತು. ಸೃಷ್ಟಿಯ ವಿಕಸನದಲ್ಲಿ, ಸಸ್ಯ ವಿಕಸನದ ಪ್ರಾರಂಭ ಸುಮಾರು ೪೦ ಕೋಟಿ ವರ್ಷಗಳ ಹಿಂದೆ ಎಂದು ತಜ್ಞರ ಅಂದಾಜು. ನಾವು ಈಗ ಕಾಣುವ ರೂಪದಲ್ಲಿ ಅರಣ್ಯಗಳು ವಿಕಸನಗೊಂಡಿದ್ದು ಸುಮರು ೧೦ ಕೋಟಿ ವರ್ಷಗಳಿಂದ. ಈ ದೀರ್ಘ ಕಾಲಮಾನದಲ್ಲಿ ಮಾನವ ರೂಪುಗೊಂಡಿದ್ದು ಸುಮಾರು ೨೦ ಲಕ್ಷ ವರ್ಷಗಳಿಂದೀಚೆಗೆ.

ಆದಿಮಾನವನ ಮೊದಲ ಮನೆಯೇ ಅರಣ್ಯಗಳು. ಬೇಟೆಯಿಂದ ಬದುಕು ಪ್ರಾರಂಭ. ಕೆಲವು ಕಾಳುಗಳು ತಿನ್ನಲು ಬರುತ್ತವೆ. ಅವು ತೇವದ ನೆಲದಲ್ಲಿ ಬಿದ್ದಾಗ ಮೊಳಕೆ ಬಂದು ಮತ್ತೆ ಕಾಳು ಒದಗುತ್ತದೆ ಎಂಬ ಅರಿವು ಮೂಡಿದಾಗ ಬೇಟೆಯೊಂದಿಗೆ, ಕೃಷಿಬದುಕಿನ ಪ್ರಾರಂಭ. ಕಾಡು ಕಡಿದು, ಬೀಜ ಬಿತ್ತಿ, ಬೆಳೆ ಇಳಿಮುಖವಾದಾಗ, ಬೇರೊಂದೆಡೆ ಮತ್ತೆ ಕಾಡು ಕಡಿದು ಬೆಳೆ ಇಡುವ 'ಕದಲು ಬೇಸಾಯ' ಕಾಡಿನ ವಿನಾಶಕ್ಕೂ ನಾಂದಿಯಾಯಿತು. ಅದು ನಾಗರಿಕತೆಯ ಮೊದಲ ಹೆಜ್ಜೆಯೂ ಹೌದು.

ಭಾರತದಲ್ಲಿ ಅನಾದಿಕಾಲದಿಂದಲೂ ವನಸಂಪತ್ತು ಹೇರಳವಾಗಿದ್ದು, ಕರ್ನಾಟಕವೂ ಈ ದಿಸೆಯಲ್ಲಿ ಭಾಗ್ಯಶಾಲಿ ರಾಜ್ಯ. ಪಶ್ಚಿಮ ಘಟ್ಟಗಳ ಗಗನಚುಂಬಿತ ವೃಕ್ಷಗಳು, ಮಲೆನಾಡಿನ ಬೃಹದಾಕಾರದ ಮರ ಸಂಪತ್ತು, ಬಯಲುಸೀಮೆಯ ಅಮೂಲ್ಯ ಶ್ರೀಗಂಧ ಹಾಗೂ ಸಾಂಬಾರ ಇನ್ನಿತರ ವಿವಿಧ ಲಘು ಫಸಲುಗಳು, ಒಂದಿಗೇ ಅರಣ್ಯಗಳಲ್ಲಿ ನೆಲೆಗೊಂಡ ವೈವಿಧ್ಯಮಯ ವನ್ಯ ಮೃಗ ಸಂಪತ್ತು, ನಮ್ಮ ನಾಡಿನ ಜನತೆಗೆ ಪ್ರಕೃತಿಯ ಅಮೂಲ್ಯ ಕೊಡುಗೆ.

ವೇದ, ಪುರಾಣ, ಇತಿಹಾಸಗಳಲ್ಲಿ ಭಾರತದ ಘೋರ ಕಾನನಗಳ ವರ್ಣನೆಗಳಿವೆ. ಐತಿಹಾಸಿಕ ವಾಗಿಯೂ ಕ್ರಿ.ಪೂ. ೩೨೭ರಲ್ಲಿ, ಈಗಿನ ಪಂಜಾಬು ಪ್ರಾಂತ್ಯದಲ್ಲಿ, ಅಲೆಕ್ಸಾಂಡರನು ಧಾಳಿ ಇಟ್ಟಾಗ, ಅವನ ಸೈನ್ಯದ ಚಲನವಲನಗಳೇ ಕಾಣದಷ್ಟು ದಟ್ಟವಾದ ಅರಣ್ಯಗಳಿತ್ತೆಂದು ಏರಿಯನ್ ಎಂಬ ಚರಿತ್ರಕಾರನ ವರ್ಣನೆಗಳಿವೆ. ಈಗ ಅಲ್ಲಿ ಧೂಳು ತುಂಬಿದ ಬಟ್ಟ ಬಯಲು. ಚಂದ್ರಗುಪ್ತ ಚಕ್ರವರ್ತಿಯ ಕಾಲದಲ್ಲಿಯೇ 'ಗೋವಿಕರ್ತ್ರಿ' ಎಂಬ ಅರಣ್ಯಾಧಿಕಾರಿ ರಾಜ್ಯದ ಮುಖ್ಯ ಅಧಿಕಾರಿಗಳಲ್ಲೊಬ್ಬನಾಗಿದ್ದ. ಅಶೋಕ ಚಕ್ರವರ್ತಿಯ ಕಾಲದಲ್ಲಿ ವನ ಹಾಗೂ ವನ್ಯಜೀವಿ ಸಂರಕ್ಷಣೆಗೆ ಶಿಲಾಶಾಸನಗಳು ಜಾರಿಯಲ್ಲಿದ್ದವು.

ಶತಮಾನಗಳಿಂದ, ಪರಕೀಯರ ನಿರಂತರ ಧಾಳಿಗಳಿಗೆ ಒಳಗಾದ ಭಾರತದಲ್ಲಿ ಅರಣ್ಯಗಳ ಕ್ಷೀಣತೆಗೆ ಕೊನೆಮೊದಲಿಲ್ಲದಂತಾಯಿತು. ೨೦ನೆಯ ಶತಮಾನದ ಆದಿಯಲ್ಲಿ ಭಾರತದಲ್ಲಿ ಒಂದು ಲಕ್ಷಕ್ಕೂ ಮೀರಿದ ಹುಲಿಗಳ ಸಂಖ್ಯೆಯಿತ್ತೆಂದು ವರದಿಗಳಿವೆ. ರಾಜ, ಮಹಾರಾಜರ, ಹಾಗೂ ಧಾಳಿಕಾರರ ಮತ್ತು ಆಕ್ರಮಿಗಳ ಬೇಟೆಗೆ ಸಿಲುಕಿ, ಒಂದು ನೂರುವರ್ಷಗಳಿಗೂ ಕಡಿಮೆ ಕಾಲಮಾನದಲ್ಲಿ, ಅದು ಕೇವಲ ೨೦೦೦ದಷ್ಟು ಇಳಿಮುಖವಾದುದು ಮಾನವ ಕುಲವೇ ನಾಚುವ ಸ್ಥಿತಿ. ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗಿನಿಂದ, ಪ್ರಗತಿಯ ನೆವದಲ್ಲಿ ಹೆಚ್ಚಿದ ಅರಣ್ಯ ನಾಶ.

ನಾನೊಬ್ಬ ವನಪಾಲಕ ವೃತ್ತಿಯವ. ಅಪೂರ್ವವೆಂದರೆ ಈ ವೃತ್ತಿಯಲ್ಲಿ ನಾನು ಮನೆತನದ ಮೂರನೆಯ ತಲೆಮಾರಿನವ. ನಮ್ಮ ಚಿಕ್ಕ ತಾತ ಮತ್ತು ತಂದೆಯವರು ಈ ವೃತ್ತಿಯಲ್ಲಿ ಹೆಸರು

ಗಳಿಸಿದವರು. ಕಾಡುಗಳ ಬಗ್ಗೆ ನನ್ನ ತೀರ ಮೊದಲನೆಯ ನೆನಪು, ತಂದೆಯವರೊಂದಿಗೆ ನಾನು ಎಂಟು ವರ್ಷದವ ನಾಗಿದ್ದಾಗ ಅವುಗಳಲ್ಲಿ ತಿರುಗಾಡಿದುದು. ಆಗ ಕಾಡುಗಳು, ಅನೇಕ ಗಾತ್ರ ಗಾತ್ರದ ಮರಗಳಿಂದ ಕೂಡಿ, ಕೆಲವೆಡೆಗಳಲ್ಲಂತೂ ಮಧ್ಯಾಹ್ನದ ಬಿಸಿಲು ನೆಲಕ್ಕೆ ತಾಗದಷ್ಟು ದಟ್ಟವಾಗಿದ್ದವು. ಹೆಬ್ಬಿದಿರುಮೆಳೆ ಗಳಂತೂ ಆಕಾಶಕ್ಕೇ ಮುಟ್ಟುವಂತಿದ್ದವು. ಶಿವಮೊಗ್ಗಾ ವಿಭಾಗದ ಆಯನೂರು, ಕುಂಸಿ, ಸೂಡೂರು ಕಾಡುಗಳಲ್ಲಿ ಹುಲಿಗಳಂತೂ ಸಂಜೆಗತ್ತಲಿನಲ್ಲಿ, ನೋಡಿದೆಡೆ ಕಣ್ಣಿಗೆ ಬೀಳುವಂತಿದ್ದುದು ನನ್ನದೇ ಅನುಭವ. ಜಿಂಕೆ, ಸಾರಂಗಗಳು ಸ್ವೇಚ್ಛಾವಿಹಾರಿಗಳಾಗಿರುತ್ತಿದ್ದವು. ಉತ್ತಮ ರಸ್ತೆ ಎಂದರೆ ಜಲ್ಲಿ ಹಾಕಿದವು. ಸಾಮಾನ್ಯವಾಗಿ ಗಾಡಿಜಾಡುಗಳೇ ಹೆಚ್ಚು. ತೀರ ಒಳಭಾಗಕ್ಕೆ ಹೋಗಲು ಕಾಲುನಡಿಗೆಯಿಂದ ಮಾತ್ರ ಸಾಧ್ಯ.

೧೯೩೦ರ ಸುಮಾರಿಗೆ ಶಿವಮೊಗ್ಗದಿಂದ ಸಾಗರದ ಕಡೆಗೆ ರೈಲು ಹಾದಿ 'ಅರಸಾಳು' ವರೆಗೆ ಮಾತ್ರ. ಸಾವಿರದೊಂಬೈನೂರು ಇಪ್ಪತ್ತರ ದಶಕದಲ್ಲಿ, ಭದ್ರಾವತಿಯಲ್ಲಿ ಪ್ರಾರಂಭವಾದ ಕಬ್ಬಿಣ ಕಾರ್ಖಾನೆ, ಕೈಗಾರಿಕಾ ವಲಯದಲ್ಲಿ ಆಗಿನ ಮೈಸೂರು ರಾಜ್ಯದ ದಿಟ್ಟ ಹೆಜ್ಜೆ. ಆದರೆ ಅದು ಕಾಡನ್ನೂ ಕಬಳಿಸಬಹುದಾದ ದೈತ್ಯಾಕಾರದ ಸಂಸ್ಥೆ. ಸಾಲೆಯಾನ ಲಕ್ಷಾಂತರ ಟನ್‌ಗಳಷ್ಟು ಸೌದೆ, ಇದ್ದಿಲುಗಳನ್ನು ಅರಣ್ಯ ಇಲಾಖಾವತಿಯಿಂದ ಸರಬರಾಜು ಮಾಡಲಾಗುತ್ತಿತ್ತು. ಆ ದಿನಗಳಲ್ಲಿ, ಗೃಹ ನಿರ್ಮಾಣಕ್ಕೆ ಎಲ್ಲರಿಗೂ ಸಾಗುವಾನಿ ನಾಟವೇ ಬೇಕು. ಅಂದಿನ ಸಾಮಾನ್ಯ ಮನೆಗಳ ನಿರ್ಮಾಣಕ್ಕೆ ಬಳಸಿದ ಮರಮಟ್ಟುಗಳೂ ಇಂದಿನ ನಾಲ್ಕು ಮನೆಗಳಿಗೆ ಒದಗಿಯಾವು. ಕಾಡಿನಲ್ಲಿ ತೇಗ, ಬೀಟೆ, ನಂದಿ, ಹೊನ್ನೆ, ಮತ್ತಿ ಇವಂತೂ ತುಂಬಿ ತುಳುಕಾಡುತ್ತಿದ್ದವು. ಹೆಬ್ಬಿದಿರು ಮಳೆಗಳು ಕಾಡು ಹಾದಿಗೆ ದುರ್ಗಮವಾಗಿದ್ದವು. ಅವನ್ನು ಬಳಸುವವರೇ ಇಲ್ಲ. ಮೇದರಿಂದ ಕಿರುಬಿದರಿಗೇ ಬೇಡಿಕೆ.

ಆಗುಂಬೆಯ ಬಲಗಿ ಕಂಬಗಳು ವಿದ್ಯುಚ್ಛಕ್ತಿ ಇಲಾಖೆಗೆ ಅಪೂರ್ವ ಕೊಡುಗೆ. ತಂತಿ ಹಾಯಿಸಲು ಹೇಳಿ ಮಾಡಿಸಿದಂತಿದ್ದ ೩೦ – ೪೦ ಅಡಿಗಳ ಉದ್ದದ ನೇರ ಬೆಳೆಯ ಬಲಗಿ ಕಂಬಗಳನ್ನು ಲಾರಿಗಳಲ್ಲಿ ಸಂಸ್ಕರಣೆಗಾಗಿ (Wood Preservation) ಭದ್ರಾವತಿಗೆ ಸಾಗಿಸುವುದಂತೂ, ನಾವು ಮಕ್ಕಳಿಗೆ ಒಂದು ಅಪೂರ್ವ ದೃಶ್ಯ. ಮೂವತ್ತರ ದಶಕದಲ್ಲಿ ಅದೇ ಭದ್ರಾವತಿಯಲ್ಲಿ, ರಾಜ್ಯದ ಮೊಟ್ಟಮೊದಲಿನ 'ಕಾಗದ ಕಾರ್ಖಾನೆ' ಸ್ಥಾಪನೆ. ಇದಕ್ಕೂ ಮೇದರ ಬಿದಿರಿಗೇ (ಕಿರು ಬಿದಿರು) ಬೇಡಿಕೆ. ಕಬ್ಬಿಣ ಕಾರ್ಖಾನೆಗೆ ಸೌದೆ, ಇದ್ದಿಲುಗಳ ಸರಬರಾಜಿಗೆ, ನಂತರದಲ್ಲಿ ಕಾಗದ ಕಾರ್ಖಾನೆಗೆ ಬಿದಿರಿನ ಸರಬರಾಜಿಗೆ, ಕಬ್ಬಿಣ ಕಾರ್ಖಾನೆಯ 'ಕಿರು ರೈಲು' ಮುಖ್ಯ ಸಂಪರ್ಕ.

ಭದ್ರಾವತಿಯ ಕಬ್ಬಿಣ ಕಾರ್ಖಾನೆಯನ್ನು ಪ್ರಾರಂಭಿಸುವ ಆ ದಿನಗಳಲ್ಲಿ, ಆಗಿನ ದಿವಾನರಾಗಿದ್ದ, ಭಾರತದ ಶ್ರೇಷ್ಠ ಪ್ರಜೆಗಳಲ್ಲೊಬ್ಬರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು, ಸೌದೆ ಇದ್ದಿಲಿನ ಸರಬರಾಜಿಗೆ, ಆಗಿನ ಅರಣ್ಯ ಮುಖ್ಯಸ್ಥರಾಗಿದ್ದ ರಾವ್ ಬಹದೂರ್ ಮುತ್ತಣ್ಣನವರಲ್ಲಿ ಪ್ರಸ್ತಾಪ ಮಾಡಿದಾಗ, ಮುತ್ತಣ್ಣನವರಿಗೆ ಮಹಾ ಮುಜುಗರ. ಅವರ ಕಣ್ಣೆದುರಿಗೆ ಗೋಚರವಾದದ್ದು ಕಾಡು ಬರಿದಾಗುವ ಶೂನ್ಯ ದೃಶ್ಯ. 'ಕೈಗಾರಿಕೀಕರಣ, ಇಲ್ಲವೇ ವಿನಾಶ' (Industrialise or Perish) ಎಂಬ ಧೋರಣೆ ತಳೆದಿದ್ದ ದಿವಾನರೊಂದು ಕಡೆ, ನೇರವಾಗಿ 'ಇಲ್ಲ' ಎನ್ನಲಾಗದ, ಅರಣ್ಯ ಮುಖ್ಯಸ್ಥರೊಂದು ಕಡೆ. ಕೊನೆಗೆ ಆದ ತೀರ್ಮಾನ 'ಅರಣ್ಯಗಳನ್ನು, ವ್ಯವಸ್ಥಿತವಾಗಿ ಬಳಸಲು ನೂರು ಮೈಲಿಗಳಷ್ಟಾದರೂ ಉದ್ದ 'ಕಿರು ರೈಲು' (Narrow Guage) ಮಾರ್ಗದ ನಿರ್ಮಾಣ. ವಿಶ್ವೇಶ್ವರಯ್ಯನವರಿಗೂ ಮಿತಿಮೀರಿದ ಅರಣ್ಯ ಬಳಕೆಯಿಂದ ಮುಂದೆ ಆಗಬಹುದಾದ ವಿನಾಶದ ಕಲ್ಪನೆಯಿತ್ತು. ಮುತ್ತಣ್ಣನವರ ಷರತ್ತಿಗೆ ಒಪ್ಪಿ, ೧೯೨೮ರ ಸುಮಾರಿಗೆ ಸೌದೆ, ಇದ್ದಿಲುಗಳ ಸರಬರಾಜಿಗೆ ಪೀಠಿಕೆಯಾಯಿತು. ಮುತ್ತಣ್ಣನವರ ಲೆಕ್ಕದಲ್ಲಿ, ಕನಿಷ್ಠಪಕ್ಷ ಒಂದುನೂರು ಮೈಲಿಗಳ ಉದ್ದ ಈ ಕಿರು ರೈಲು ಇದ್ದರೆ, ಆಜುಬಾಜು ಮೂರು ಮೈಲಿಗಳ ದೂರದ ಕಾಡುಗಳನ್ನು ಬಳಸಿ, ೩೦ ವರ್ಷಗಳ 'ಆವರ್ತ'ದಲ್ಲಿ (Rotation) ಮರ ಬಂಡವಾಳಕ್ಕೆ

ಧಕ್ಕೆಯಾಗದಂತೆ, ಅರಣ್ಯವನ್ನು ಉರುವಲಿಗಾಗಿ ಬಳಸಬಹುದು ಎಂಬುದು. ಆದರೆ, ದುರದೃಷ್ಟವಶಾತ್, ಇಸವಿ ೧೯೫೦ ಆದರೂ, 'ಕಿರು ರೈಲು' ಉದ್ದ ೪೦ ಮೈಲಿಗಳನ್ನೂ ದಾಟಲಿಲ್ಲ. ಆಗಿನ ಮೈಸೂರು ರಾಜ್ಯದಲ್ಲಿ, ಅಂದು ಕಾಸಿಗೆ ಕಾಸು ಲೆಕ್ಕಾಚಾರದ ಕಾಲ. ಸಾಲ ಸೋಲಗಳಂತೂ ಸಲ್ಲವು. ಇದರ ಪರಿಣಾಮ, ಕಡಿದ ಕಡೆಯೇ, ಮೇಲಿಂದ ಮೇಲೆ, ಮರ ಕಡಿದು, ಉತ್ತಮ ದರ್ಜೆಯ ಕಾಡುಗಳು ಬಯಲುಗಳಾಗುವಂತಾಯಿತು. ಸೂರ್ಯನ ತಾಪಕ್ಕೆ ಒಳಗಾದಲ್ಲೆಲ್ಲಾ, ಯಥೇಚ್ಛವಾಗಿ ಹುಲ್ಲುಗಾವಲುಗಳು ಮೂಡಿ, ಜನ ಜಾನುವಾರುಗಳ ತುಳಿತದಿಂದ, ಕಾಡಿನ ಮರಜಾತಿಗಳ 'ಪುನರುತ್ಪನ್ನ' ಕುಂಠಿತವಾಗಲಾರಂಭಿಸಿತು. ಅನಿವಾರ್ಯವಾಗಿ, ಈ ಬಯಲು, ಬಂಜರುಗಳಲ್ಲಿ ಈಚಿನ ದಿನಗಳಲ್ಲಿ ವನೀಕರಣಕ್ಕೆ ತೊಡಗಲಾಯಿತು. ಒಂದು ಕಾಲದಲ್ಲಿ ಮಿಶ್ರ ಜಾತಿಯ ಉತ್ತಮ ಮರಗಳಿದ್ದೆಡೆ, ನೆಡುತೋಪುಗಳ ನಿರ್ಮಾಣಕ್ಕೆ, ಹೆಚ್ಚಾಗಿ ಶೀಘ್ರ ಬೆಳವಣಿಗೆಯ ಮೃದು ಜಾತಿಯ ಮತ್ತು ಉರುವಲು ಜಾತಿಯ ಮರಗಳಿಗೆ ಪ್ರಾಶಸ್ತ್ಯ ನೀಡಲಾಯಿತು.

ಇತ್ತ, ಇದೇ ಕಾರಣಕ್ಕಾಗಿ, 'ಕಾಗದ ಕಾರ್ಖಾನೆ'ಗೆ ಬಿದಿರು ಸರಬರಾಜಿಗೂ ಧಕ್ಕೆಯಾಗಿ, ಕಿರಿಬಿದರು ಕಡಿಮೆಯಾಗುತ್ತಾ, ಹೆಬ್ಬಿದಿರಿನ ಬಳಕೆಗೆ ಪ್ರಾರಂಭವಾಯಿತು. ಇದಕ್ಕೆ ಬಿದಿರನ್ನು ಸಣ್ಣ ಚಕ್ಕೆಗಳನ್ನಾಗಿ ಮಾಡಲು ಪ್ರತ್ಯೇಕ 'ಚಿಪ್ಪರ್'ಗಳನ್ನೇ ಒದಗಿಸಬೇಕಾಯಿತು. ಇದ್ದಿಲು, ಸೌದೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಕಿರು ರೈಲಿನ ಆಜುಬಾಜು ಕಾಡುಗಳು ಕ್ಷೀಣಿಸಿ, ದೂರ ದೂರದ ಅರಣ್ಯ ಪ್ರದೇಶಗಳಿಂದ ಉತ್ಪನ್ನ ಪಡೆಯಲು, ಲಾರಿಗಳು ವ್ಯವಸ್ಥೆಯಾಯಿತು.

ಬಿದಿರುಜಾತಿಯ ವೈಶಿಷ್ಟ್ಯವೇನೆಂದರೆ, ಇದು ಹೂ ಬಿಡುವುದು ನಿರ್ದಿಷ್ಟ ಅಂತರಗಳಲ್ಲಿ. ನಮ್ಮ ಕಾಡುಗಳ ಬಿದಿರು ಜಾತಿಗಳು ೩೦ – ೪೦ ವರ್ಷಗಳಿಗೊಮ್ಮೆ ಹೂ ಬಿಟ್ಟು, ಅಗಾಧಪ್ರಮಾಣದಲ್ಲಿ ಸಸಿಗಳು ಮೂಡಿ, ಅರಣ್ಯ ತಲವೆಲ್ಲಾ 'ಮಖಮಲ್' ಹಾಸಿಗೆಯಂತೆ ಕಂಡು, ಕ್ರಮೇಣ ಮರು ಪೀಳಿಗೆಯ ಬಿದಿರು ಮೆಳೆಗಳು ರೂಪುಗೊಳ್ಳುವವು. ಇದು ಬಿದಿರು ಪೀಳಿಗೆಯು ಅಳಿದು ಹೋಗದೆ ಉದ್ಧಾರವಾಗಲು ಪ್ರಕೃತಿಯ ಕ್ರಮ. ತಾಯಿ ಮೆಳೆಗಳು ಹೂಬಿಟ್ಟ ಒಂದೆರಡು ವರ್ಷಗಳಲ್ಲಿ ಒಣ[illegible] ನಿಂತು, ಬೆಂಕಿಯ ಹಾವಳಿಗೆ ಈಡಾಗುವುವು.

೧೯೫೦ರ ದಶಕದಲ್ಲಿ ಹೆಬ್ಬಿದಿರಿನ ಸಾಮೂಹಿಕ (Gregarious) ಹಾಗೂ ಕಿರುಬಿದರಿನ ಅಲ್ಲಲ್ಲಿ (Spordic) ಹೂ ಬಿಡುವಿಕೆ, ಭದ್ರಾವತಿ, ಚಿಕ್ಕಮಗಳೂರು ಅರಣ್ಯ ವಿಭಾಗಗಳಲ್ಲಿ ಪ್ರಾರಂಭವಾ[illegible] ಉತ್ತರಕ್ಕೆ ಹರಡಿ, ಉತ್ತರ ಕರ್ನಾಟಕದ ಕಾಡುಗಳಲ್ಲಿ ಒಂದು ದಶಕದವರೆವಿಗೂ ಹೂ ಬಿಡುತ್ತಿದ್[illegible] ಇಷ್ಟು ಪ್ರಮಾಣದ ಒಣ ಬಿದಿರಿನ ಬಳಕೆಗೆ ಯೋಚನೆ ಹರಿಸಲಾಯಿತು.

ಗ್ರಾಮೀಣರು ಬಿದಿರಿನ ಅಕ್ಕಿಯನ್ನು ಆಹಾರಕ್ಕೆ ಬಳಸುವುದು ರೂಢಿ. ಇದರಿಂದ ಸ್ವ[illegible] ಉಷ್ಣವಾಗುವುದರಿಂದ ಎಲ್ಲರಿಗೂ ಒಗ್ಗದಿರಬಹುದು. ಅಲ್ಲಲ್ಲಿ ಒಣ ಬಿದಿರನ್ನು ಉರುವಲಿನಂತೆಯು ಗ್ರಾಮೀಣರು ಬಳಸುತ್ತಾರೆ. ಆದಾಗ್ಯೂ ಬಹುಪಾಲು, ಈ ಒಣಗಿದ ಬಿದಿರು ಬೆಂಕಿಯ ಬಾಧೆಯನ್ನ ಹೆಚ್ಚಿಸಿ ಅರಣ್ಯದಲ್ಲಿ ಸ್ವಾಭಾವಿಕ ಪುನರುತ್ಪನ್ನದ ಎಳೆಯ ಸಸಿ, ಗಿಡಮರಗಳಿಗೆ ಹಾನಿಯುಂಟುಮಾಡುವುದ[illegible] ಈ ಕಾರಣದಿಂದಲೂ ಮತ್ತು ಕಾಗದ ಹಾಗೂ ರೇಯಾನ್ ತಯಾರಿಕೆಗೆ ಕಚ್ಚಾ ವಸ್ತುವು ಒದಗಬೇಕಾಗಿದ[illegible] ತಾಂತ್ರಿಕ ಬೆಳವಣಿಗೆಯಿಂದ ಈಗ ಈ ಹೂ ಬಿಟ್ಟು, ಒಣಗಿದ ಬಿದಿರುಗಳನ್ನೂ, ಕಾಗದ ಮ[illegible] ರೇಯಾನ್ ತಯಾರಿಕೆಗೆ ಉಪಯೋಗಿಸಲಾಗುತ್ತದೆ. ಇದರಿಂದ ಬೆಂಕಿಯ ಉಪಟಳವೂ ಕಡಿಮೆಯಾ[illegible] ತೆರುವಳಿ ಧನದಿಂದ ಸರ್ಕಾರಕ್ಕೆ ವರಮಾನವೂ ಬರುವುದು.

ರಾಜ್ಯದ ಅಭಿವೃದ್ಧಿಗೆ ಜನತೆಯ ಆರ್ಥಿಕ ಬೆಳವಣಿಗೆಗೆ, ಮೇಲಾಗಿ ಸಂಪನ್ಮೂಲಗಳ ಉಪಯುಕ್ತ[illegible] ಯನ್ನು ಪಡೆಯಲು, ವಿವಿಧ ಕೈಗಾರಿಕೆಗಳು ಅಸ್ತಿತ್ವಕ್ಕೆ ಬರಬೇಕು. ಒಪ್ಪೋಣ. ಆದರೆ ಆರ್ಥಿಕ ಲಾಭ[illegible]

ಕಾರಣಗಳಿಗಾಗಿಯೋ ಅಥವಾ ಬೇರೆ ಕಾರಣಗಳಿಂದಾಗಿ, ಅರಣ್ಯಗಳ ವ್ಯವಸ್ಥಿತ ನಿರ್ವಹಣೆಗೆ ಅಡಚಣೆಯಾಗಬಾರದು. ಹಾಗೂ ಏನೇ ಕಾರಣಗಳಿಗಾಗಿ ವೃಕ್ಷಭರಿತ ಅರಣ್ಯ ಪ್ರದೇಶಗಳನ್ನು, ಅದರಲ್ಲಿಯೂ ಭೂ-ಸವೆತ, ಇನ್ನಿತರ ರಕ್ಷಣಾ ದೃಷ್ಟಿಯಿಂದ ಸೂಕ್ಷ್ಮ ಸ್ಥಳಗಳಲ್ಲಿ ಇರುವ ಅರಣ್ಯ ಪ್ರದೇಶಗಳನ್ನು ಬಿಟ್ಟುಕೊಡಬಾರದು. ಈ ತತ್ವಗಳನ್ನು ಕಟ್ಟುನಿಟ್ಟಾಗಿ ಪ್ರತಿಪಾದಿಸಿದ ಅರಣ್ಯಾಧಿಕಾರಿಗಳು ರಾಜಕೀಯ ವಲಯಗಳಲ್ಲಿ ಅಪ್ರಾಪ್ತರು.

೧೯೨೦-೩೦ರ ದಶಕಗಳಲ್ಲಿ, ಆಗಿನ ಮೈಸೂರು ರಾಜ್ಯದ ವನಸಂಪತ್ತು, ತನ್ಮೂಲಕದ ಅರಣ್ಯ ಉತ್ಪನ್ನಗಳು ಎಷ್ಟು ಹೇರಳವಾಗಿದ್ದವು ಎಂದರೆ, ಅವುಗಳಿಗೆ ಈಜಿಪ್ಟ್, ಚೀನಾ, ಜಪಾನ್ ದೇಶಗಳಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸುವ ಪ್ರಯತ್ನವೂ ಸಾಗಿತ್ತೆಂದು ತಿಳಿದುಬಂದಿದೆ.

ಭಾರತದಲ್ಲಿ ವೈಜ್ಞಾನಿಕ 'ಅರಣ್ಯ ನಿರ್ವಹಣೆ' ಪ್ರಾರಂಭವಾದದ್ದು ೧೮೬೪ರಲ್ಲಿ. ಇದು ಬ್ರಿಟಿಷರ ಕಾಲದಲ್ಲಿ ಅವರು ನಮ್ಮ ಸ್ವಾತಂತ್ರ್ಯವನ್ನು ಅಪಹರಿಸಿ ನಮ್ಮ ದೇಶದ ಸಂಪನ್ಮೂಲಗಳನ್ನು ತಮ್ಮದೇ ರೀತಿಯಲ್ಲಿ ಅಪಹರಿಸಿಕೊಂಡಿದ್ದರೂ, ಕೆಲವು ದಿಸೆಗಳಲ್ಲಿ, ನಮ್ಮ ದೇಶಕ್ಕೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. ತಾಂತ್ರಿಕತೆಯು ಅಷ್ಟು ಮುನ್ನಡೆಯದಿದ್ದ ಕಾಲದಲ್ಲಿಯೇ ಅನೇಕ ಅಭೇದ್ಯ ಸ್ಥಳಗಳಲ್ಲಿ ಮೋಜಿನಿ (Survey) ಕೆಲಸ, ವಿದ್ಯಾಭ್ಯಾಸ ಕ್ರಮ, ಅರಣ್ಯ ನಿರ್ವಹಣೆ ಇತ್ಯಾದಿಗಳಲ್ಲಿ ಅವರು ದೇಶಕ್ಕೆ ಉತ್ತಮ ಕೊಡುಗೆಯನ್ನೇ ಕೊಟ್ಟಿದ್ದಾರೆನ್ನಬಹುದು. ಆಧುನಿಕ ರೀತಿಯಲ್ಲಿ, ಮೊಟ್ಟಮೊದಲನೆಯ 'ಅರಣ್ಯ ನೀತಿ', ೧೮೯೪ ರಲ್ಲಿ ಡಾ॥ ವೊಯಲ್ಕರ್ ಎಂಬ ಜರ್ಮನ್ ತಜ್ಞನ ಮೂಲಕ ರೂಪಿತವಾಗಿ, ಆಗಿನ ಅರಣ್ಯ ಸಂಪತ್ತನ್ನು ಹಾಗೂ ಅರಣ್ಯಗಳ ರಕ್ಷಣಾಪಾತ್ರವನ್ನು ಗಮನದಲ್ಲಿಟ್ಟುಕೊಂಡು, ಜನತೆಯ ದಿನನಿತ್ಯದ ಅವಶ್ಯಕತೆಗಳಿಗೆ ಮತ್ತು ಕೃಷಿ ಬೆಳವಣಿಗೆಗೆ ಅನುಕೂಲವಾಗುವಂತೆ ಸೂಕ್ತ ದರ್ಜೆಯ ಅರಣ್ಯ ಪ್ರದೇಶಗಳನ್ನು, ಅಲ್ಲಲ್ಲಿ ತುಂಡುತುಂಡಾಗದಂತೆ ಎಚ್ಚರ ವಹಿಸಿ, ಮಂಜೂರುಮಾಡಲು ಅವಕಾಶ ಕಲ್ಪಿಸಲಾಗಿತ್ತು. ೧೯೫೨ರಲ್ಲಿ ಪರಿಷ್ಕೃತವಾದ 'ಅರಣ್ಯ ನೀತಿ'ಯಲ್ಲಿ, ಆ ಸಮಯಕ್ಕೆ ವನ ಸಂಪತ್ತು ಹಾಗೂ ವನ್ಯಜೀವಿ ಸಂಪತ್ತು ಕುಗ್ಗುತ್ತಾ ಬಂದಿದ್ದು, ಅರಣ್ಯ ನೀತಿಯಲ್ಲಿ, ನೈಸರ್ಗಿಕ ಅರಣ್ಯಗಳ ರಕ್ಷಣೆ, ಆರ್ಥಿಕ ದೃಷ್ಟಿಯಿಂದ ಉತ್ತಮ ಮರಬಂಡವಾಳವಿದ್ದೆಡೆ ಅವುಗಳ ವ್ಯವಸ್ಥಿತ ಬಳಕೆ, ಹೆಚ್ಚಿನ ವನೀಕರಣ ಇವುಗಳಿಗೆ ಒತ್ತು ಕೊಡಲಾಯಿತು. ನಂತರದಲ್ಲಿ ೧೯೮೮ರಲ್ಲಿ ಪರಿಷ್ಕೃತವಾದ 'ಅರಣ್ಯ ನೀತಿ'ಯಲ್ಲಿ, ಮತ್ತೂ ಕುಗ್ಗಿರುವ ಅರಣ್ಯಸಂಪತ್ತು ಮತ್ತು ವನ್ಯಜೀವಿಗಳು, ಹೆಚ್ಚುತ್ತಿರುವ ಪರಿಸರಮಾಲಿನ್ಯ ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು, ಅರಣ್ಯಗಳ, ಜೈವಿಕ ವೈವಿಧ್ಯತೆಗಳ ಮತ್ತು ವನ್ಯಜೀವಿಗಳ ಸಂರಕ್ಷಣೆ, ವನೀಕರಣ, ರಾಷ್ಟ್ರೀಯ ಉದ್ಯಾನಗಳು, ಸಾಮಾಜಿಕ ಅರಣ್ಯಗಳು ಇವುಗಳಿಗೆ ಇನ್ನೂ ಹೆಚ್ಚು ಪ್ರಾಶಸ್ತ್ಯ ಕೊಟ್ಟು, ಈ ಕಾರ್ಯಗಳಲ್ಲಿ ಜನತೆಯ ಸಹಕಾರವನ್ನೂ ಪಡೆಯುವ ದೃಷ್ಟಿಯಿಂದ, ಗ್ರಾಮೀಣ ಮಟ್ಟದಲ್ಲಿ ಜಂಟಿ ಅರಣ್ಯ ನಿರ್ವಹಣೆ ಇತ್ಯಾದಿಗಳನ್ನು ರೂಪಿಸಲಾಗಿದೆ.... ಅರಣ್ಯಗಳು ಜನಹಿತಕ್ಕಾಗಿರಬೇಕೆಂಬ ಧೋರಣೆ ಮೊದಲಿನಿಂದಲೂ ಇದ್ದು, ಆಗಿನ ಮೈಸೂರು ರಾಜ್ಯದಲ್ಲಿ ಮಲೆನಾಡು ಪ್ರದೇಶಗಳಲ್ಲಿ ಜನತೆ ಉತ್ತಮ ಗೃಹಸೌಕರ್ಯಗಳನ್ನು ಹೊಂದಲು ವಿಶೇಷ ರಿಯಾಯಿತಿ ದರದಲ್ಲಿ ಮರಮಟ್ಟುಗಳನ್ನು ಒದಗಿಸುವ ಕಾನೂನು (Malnad Ryots' Privilege Rules) ಜಾರಿಗೆ ತರಲಾಗಿತ್ತು. ಜಾನುವಾರುಗಳನ್ನು ಮೇಯಿಸಲು ವಿಶಾಲ ಗೋಮಾಳಗಳು, ಅರಣ್ಯ ಲಘು ಫಸಲುಗಳ ಉತ್ಪಾದನೆಗೆ 'ಗುಂಡು ತೋಪುಗಳು', ಪಾದಚಾರಿಗಳ ನೆರವಿಗೆ ಮೈಲುಗಟ್ಟಲೆ ಧೃವ ಫಸಲುಗಳ ಹಾಗೂ ನೆರಳು ನೀಡುವ ಸಾಲುಮರಗಳು ಕಂಗೊಳಿಸುತ್ತಿದ್ದವು. ಗ್ರಾಮೀಣ ಬಂಧುಗಳ ದಿನನಿತ್ಯದ ಅವಶ್ಯಕತೆಗಳಾದ ಕಿರುದಿಮ್ಮಿ, ಉರುವಲು (ಸೌದೆ), ಬಿದಿರು, ನೇಗಿಲು ಮರ, ಬೇಲಿ ಸಾಮಗ್ರಿ, ಎಲೆಗೊಬ್ಬರ ಇತ್ಯಾದಿಗಳನ್ನು ಕೆಲವೆಡೆ ನೇರವಾಗಿ ಜನತೆಯೇ ಕಾಡಿನಿಂದ ರಿಯಾಯಿತಿ ದರದಲ್ಲಿ, ಪರವಾನಗಿ ಪಡೆದು ರೂಢಿಸಿಕೊಳ್ಳುವ (Harvesting) ಸೌಕರ್ಯಗಳನ್ನೂ ಒದಗಿಸಲಾಗಿತ್ತು.

ಮಾತ್ರವಲ್ಲದೆ, ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ಕೊಡಲು ಮತ್ತು ಹೇರಳವಾಗಿದ್ದ ಅರಣ್ಯ ಉತ್ಪನ್ನ ಬಳಕೆಗೆ ನೆರವಾಗಲು ಕಾಗದ, ಬೆಂಕಿಕಡ್ಡಿ, ಪ್ಲೈವುಡ್ ತಯಾರಿಕೆಗಳಿಗೆ ಒದಗುವಂತೆ ಮೃದುಜ ಮರಗಳನ್ನು ವಿಶೇಷ ರಿಯಾಯಿತಿ 'ತೆರುವಳಿ'" (Seigniorage) : ರೂಪದಲ್ಲಿ ಕೈಗಾರಿಕೆಗಳಿಗೆ ಒದ ಲಾಗಿತ್ತು.

ಗ್ರಾಮೀಣರಿಗೆ ಮತ್ತು ರೈತಬಾಂಧವರಿಗೆ ಒದಗಿಸಲಾಗಿದ್ದ ಗುಂಡು ತೋಪುಗಳು, ಗೋಮಾಳ ಕೆರೆಕಟ್ಟೆಗಳು, ಸಾಲುಮರಗಳು, ಉರುವಲು, ಬಿದಿರು, ಎಲೆಗೊಬ್ಬರ ಇತ್ಯಾದಿಗಳ ರಿಯಾಯಿತಿ ಹಿಂದಿನ 'ಡಿಸ್ಟ್ರಿಕ್ಟ್, ಮೈನರ್, ವಿಲೇಜ್ ಫಾರೆಸ್ಟ್'ಗಳ ವಿಭಜನೆ ಇವೆಲ್ಲವುಗಳೂ ಈಗ ನಾವು ಹೆಸರಿಸಿ 'ಸಾಮಾಜಿಕ ಅರಣ್ಯಗಳ ಸೌಲಭ್ಯ'ಗಳ ಇನ್ನೊಂದು ರೂಪವೇ ಆಗಿದ್ದವು. ಕೆಲವು ನಿದರ್ಶನಗಳ ಕೊಡುವುದಾದರೆ, ೧೮೭೫ನೇ ಇಸವಿಯಲ್ಲಿಯೇ, ಆಗಿನ ಮೈಸೂರು ರಾಜ್ಯದಲ್ಲಿ ೧೨೧೩೬ ಹಳ್ಳಿಗ ೧೬೨೬೭ ಗುಂಡು ತೋಪುಗಳಿದ್ದು, ಅವುಗಳಲ್ಲಿ ಎಂಟು ಲಕ್ಷಕ್ಕೂ ಮಿಗಿಲಾದ ಹುಣಿಸೆ, ಮಾ ಹಲಸು, ಎಲೆಗೊಬ್ಬರ ಇತ್ಯಾದಿ ಧ್ರುವ ಫಸಲುಗಳ ಮರಗಳಿದ್ದವೆಂದೂ, ಆಗಿದ್ದ ೩೭೬೬ ಮೈಲಿ ಉದ್ದದ ರಸ್ತೆಗಳ ಪೈಕಿ ೩೫೭೫ ಮೈಲುಗಳ ಉದ್ದದಲ್ಲಿ ಉಪಯುಕ್ತ ಜಾತಿಯ ಸಾಲುಮರಗಳ ಬೆಳೆಸಲಾಗಿತ್ತೆಂದು ಆಗ ಕನ್ಸರ್ವೇಟರ್ ಆಗಿದ್ದ ಕ್ಯಾಪ್ಟನ್ ಸೋಮರ್ಸನ್ ಎಂಬಾತ ದಾಖಲಿಸಿದ್ದ

ಜನಸಂಖ್ಯೆ ಹೆಚ್ಚಾದಂತೆ, ಕ್ರಮೇಣ ಅರಣ್ಯ ಉತ್ಪನ್ನಗಳಿಗೂ ಬೇಡಿಕೆಗಳು ಹೆಚ್ಚುತ್ತಾ ಬಂ ಮೇಲೆ ತಿಳಿಸಿದ ಅನೇಕ ರಿಯಾಯಿತಿಗಳ ದುರುಪಯೋಗಗಳು ಕಂಡುಬಂದು, ಈ ಸೌಲತ್ತುಗ ಕಡಿವಾಣ ಹಾಕಲಾಯಿತು.

ವನಸಂಪತ್ತಿನ ಉಚ್ಛ್ರಾಯದ ಆ ಕಾಲದಲ್ಲಿ, ವನ್ಯಮೃಗಗಳೂ ಹೇರಳವಾಗಿದ್ದು, ಇವುಗಳ ಶಿಕಾ ಪರವಾನಿಗೆ (Game License) ಮೂಲಕ ಬಹಳಷ್ಟು ಅವಕಾಶವಿದ್ದಿತು. ಕಾಲಕ್ರಮೇಣ ವನ್ಯ ಮೃಗ ನೆಲೆಯಾದ ಅರಣ್ಯಪ್ರದೇಶಗಳು ಕ್ಷೀಣವಾಗಿ, ವನ್ಯಮೃಗಗಳ ಇರುವಿಕೆಗೇ ಸಂಚಕಾರ ಬಂದು ವನ್ಯಮೃಗ ರಕ್ಷಣೆಗೆ ವಿಶೇಷ ಕಾಯಿದೆಗಳು ರೂಪುಗೊಂಡು ಇವುಗಳ ಅನುಷ್ಠಾನದಲ್ಲಿ, ಜನತೆ ಸಹಕಾರ ಅತ್ಯವಶ್ಯಕವಾಗಿದೆ.

ಸ್ವಾತಂತ್ರ್ಯಾನಂತರ ನಮ್ಮ ನಾಯಕರುಗಳು, ದೇಶದ ಹಾಗೂ ರಾಜ್ಯಗಳ ಸರ್ವತೋಮು ಬೆಳವಣಿಗೆಗೆ ಕಾತುರರಾಗಿ, ಬಹಳಷ್ಟು ಅರಣ್ಯ ಪ್ರದೇಶಗಳು, ಕೆಲವೊಮ್ಮೆ ಸಕಾರಣಗಳಿಗಾಗಿಯ ನಿರ್ವನೀಕರಣಗೊಂಡವು. ಆಹಾರೋತ್ಪಾದನೆಯ ಗುಂಗಿನಲ್ಲಿ (Grow More Food Capaign) ಲಕ್ಷಾ ಹೆಕ್ಟೇರ್‌ಗಳ ವೃಕ್ಷ ಭರಿತ ಪ್ರದೇಶಗಳನ್ನು ಬಿಟ್ಟುಕೊಡಲಾಯಿತು. ಮಾನವ ನಿರ್ಮಿತ ವರ್ಗೀಕರಣ ಮನ್ನಾ ಜಂಗಲಿ (Reserve Forest) ಡಿಸ್ಟ್ರಿಕ್ಟ್ ಜಂಗಲಿ, ವಿಲೇಜ್ ಫಾರೆಸ್ಟ್, ಮೈನರ್ ಫಾರೆಸ್ಟ್ ಎಂ ವರ್ಗಗಳಿದ್ದರೂ, ಒಂದು ಕಾಲದಲ್ಲಿ, ಕೆಲವು ರಿಸರ್ವ್ ಫಾರೆಸ್ಟ್‌ಗಳಿಗಿಂತಲೂ, ಕಂದಾಯ ಇಲಾಖೆ ಆಡಳಿತದಲ್ಲಿದ್ದ ಈ ಡಿಸ್ಟ್ರಿಕ್ಟ್ ಜಂಗಲಿಗಳಲ್ಲಿಯೇ ದಟ್ಟ ಮರಸಾಂದ್ರತೆಯಿದ್ದು, ಈ ಅರಣ್ಯ ಆಹಾರೋತ್ಪಾದನೆಯ ಸೋಗಿನಲ್ಲಿ ಕೃಷಿವಿಸ್ತರಣೆಗಾಗಿ ಮಂಜೂರಾಗಲ್ಪಡತೊಡಗಿದವು. ಇದರ ಪರಾ ಎಂದರೆ ಭದ್ರಾವತಿ ವಿಭಾಗದ ನರಸಿಂಹರಾಜಪುರ ವಲಯದ ಕಾಡುಗಳಲ್ಲಿ, ಸಿಟ್ರೊನೆಲ್ಲ ಪರಿ ಎಣ್ಣೆ ಒದಗಿಸುವ ಹುಲ್ಲಿನ ಕೃಷಿಗೂ ಅನೇಕ ಹೆಕ್ಟೇರ್ ವನಭರಿತ ಪ್ರದೇಶಗಳನ್ನು ಬಿಟ್ಟುಕೊಡಲಾಯಿ ಇದರ ಪರಿಣಾಮವಾಗಿ, ಅದುವರೆವಿಗೂ, ಜನಸಾಮಾನ್ಯರ ಬಳಕೆಗಾಗಿ, ಕೆಲವು ನಿಯಮಗಳ ಚೌಕಟ್ಟ ಮೀಸಲಾಗಿದ್ದ ಡಿಸ್ಟ್ರಿಕ್ಟ್ ಅರಣ್ಯಗಳು ಕೃಷಿವಿಸ್ತರಣೆಗಾಗಿ ಪರಿವರ್ತನೆ ಹೊಂದಿ, ಜನತೆಯ ದಿನಬಳಕೆ ಅವಶ್ಯಕತೆಗಳನ್ನು, ಮನ್ನಾ ಜಂಗಲಿಗಳೇ ಸುಧಾರಿಸಬೇಕಾಯಿತು. ಇವು ಮನ್ನಾ ಜಂಗಲಿಗ ಅಕ್ರಮ ಚಟುವಟಿಕೆಗಳಿಗೆ ಎಡೆಕೊಟ್ಟವು.

ಆಗಿನ ಮೈಸೂರು ರಾಜ್ಯದ ಬಯಲುಸೀಮೆಯ ಅರಣ್ಯಗಳು, ಪ್ರಪಂಚದ ಶೇ ೮೦ರಷ್ಟು ಶ್ರೀಗಂಧದ ಉತ್ಪನ್ನಕ್ಕೆ ಆಸರೆಯಾಗಿದ್ದವು. ಸಾಗರ, ಸೊರಬ ಪ್ರದೇಶಗಳ ವಿಖ್ಯಾತ ಗುಡಿಗಾರರ ಕರಕುಶಲ ವಸ್ತುಗಳ ತಯಾರಿಕೆ ಪ್ರಪಂಚದಾದ್ಯಂತ ಖ್ಯಾತವಾಗಿದ್ದು, ಅವರು ಈ ಕಸುಬು ಮುಂದು ವರೆಸಲು ಅನೇಕ ರಿಯಾಯಿತಿಗಳನ್ನು ಒದಗಿಸಲಾಗಿತ್ತು. ನಮ್ಮ ನಾಡಿನಲ್ಲಿ ಶ್ರೀಗಂಧದ ಉತ್ಪನ್ನ ಎಷ್ಟಿತ್ತೆಂದರೆ ಅವನ್ನು ಬಳಸಿ ಶ್ರೀಗಂಧದ ಎಣ್ಣೆ ತಯಾರಿಸಲು ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ಗಂಧದ ಎಣ್ಣೆ ಕಾರ್ಖಾನೆಗಳನ್ನು ತೆರೆಯಲಾಗಿತ್ತು. ಶ್ರೀಗಂಧದ ಬೆಲೆ ಏರುತ್ತಾ ಬಂದು, ಅದು ಅಸಾಧಾರಣ ಮಟ್ಟಕ್ಕೇರಿ, ಜೊತೆಗೆ ಅಕ್ಕ ಪಕ್ಕದ ರಾಜ್ಯಗಳಲ್ಲಿ ಶ್ರೀಗಂಧದ ಬಳಕೆ, ಸಾಗಾಣಿಕೆ ಇತ್ಯಾದಿಗಳಿಗೆ ವಿಶೇಷ ಕಾನೂನುಗಳಿಲ್ಲದೆ, ನಮ್ಮ ರಾಜ್ಯದಿಂದ ಶ್ರೀಗಂಧದ ಕಳವು ಹೆಚ್ಚುತ್ತಾ ಬಂದು, ಈಗಂತೂ ಕಾಡಿನ ಮಾತಿರಲಿ, ಊರುಕೇರಿಗಳಲ್ಲಿಯ ಮನೆಮನೆಗಳಲ್ಲಿನ ಶ್ರೀಗಂಧದ ಮರಗಳಿಗೂ ಕುತ್ತು ಬಂದಿದೆ.

ಶ್ರೀಗಂಧವು ಕರ್ನಾಟಕದಲ್ಲಿ 'ರಾಜ ವೃಕ್ಷ' ವಾಗಿದ್ದು ಅದು ಖಾಸಗೀ ಕ್ಷೇತ್ರದಲ್ಲಿ ಬೆಳೆದಿದ್ದರೂ ಸರ್ಕಾರದ ಸ್ವತ್ತು ಮತ್ತು ಅದರ ರಕ್ಷಣೆ ಖಾಸಗೀ ಹಿಡುವಳಿದಾರನ ಹೊಣೆಯಾಗಿರುತ್ತದೆ. ಇದರ ರಕ್ಷಣೆಗೆ ಉತ್ತೇಜನ ಕೊಡಲು ಯಾವೊಬ್ಬ ಖಾಸಗಿಯವನ ಆವರಣದಲ್ಲಿ ಬೆಳೆದ ಶ್ರೀಗಂಧದ ಮರದ ರಕ್ಷಣೆಗಾಗಿ ಆಯಾ ಹಿಡುವಳಿದಾರನಿಗೆ ಮರ ಒಂದಕ್ಕೆ ೫ ರೂಪಾಯಿಗಳ 'ಬೋನಸ್' ಕೊಡಲಾಗುತ್ತಿತ್ತು, ಕ್ರಮೇಣ ಶ್ರೀಗಂಧದ ಬೆಲೆ ಏರುತ್ತಾ ಬಂದು, ಅದರ ರಕ್ಷಣೆಯೂ ಕಠಿಣವಾಗುತ್ತಾ, ಹಿಡುವಳಿದಾರನಿಗೆ ಮರದ ಕೆಚ್ಚಿನ (Heartwood) ಶೇ. ೨೫ರಷ್ಟು ಮೌಲ್ಯವನ್ನು 'ಬೋನಸ್' ರೂಪದಲ್ಲಿ ಪಾವತಿಮಾಡಲು ಕಾನೂನು ತಿದ್ದುಪಡಿಗೊಂಡು, ನಂತರದಲ್ಲಿ ಅದನ್ನು ಶೇ ೫೦ಕ್ಕೆ ಏರಿಸಿ, ಈಗ ಅದು ಶೇ ೭೫ ರಷ್ಟಾಗಿದೆ. ಹೀಗಿದ್ದೂ, ಅದರ ರಕ್ಷಣೆ ಇನ್ನೂ ಗುರುತರವಾಗುತ್ತಿದೆ.

ಶ್ರೀಗಂಧದ ಸ್ವಾಭಾವಿಕ ಪುನರುತ್ಪನ್ನ ಅನುಕೂಲ ವಾತಾವರಣಗಳಲ್ಲಿ ಸಮಾಧಾನಕರವಾಗಿದ್ದರೂ, ಅದನ್ನು ಇನ್ನೂ ಉತ್ತಮಗೊಳಿಸಲು, ಹಿಂದಿನ ದಿನಗಳಲ್ಲಿ, ಇಲಾಖಾ ಫಾರೆಸ್ಟ್ ಗಾರ್ಡ್‌ಗಳು ಮತ್ತು ಇತರ ಕ್ಷೇತ್ರ ಸಿಬ್ಬಂದಿಗಳು ಮಳೆಗಾಲದಲ್ಲಿ ಪೊದೆಗಿಡಗಳ ಸಂದುಗಳಲ್ಲಿ ಇದರ ಬೀಜ ಚೆಲ್ಲಿ ಇದರ ಪುನರುತ್ಪನ್ನಕ್ಕೆ ನೆರವಾಗುತ್ತಿದ್ದರು. ಹಾಗೂ ನೆಡುತೋಪುಗಳ 'ಇನ್‌ಸ್ಪೆಕ್ಷನ್' ಹಾದಿಗಳ ಆಜುಬಾಜು ಇದರ ಬೀಜ ಬಿತ್ತಿಯೂ ಪುನರುತ್ಪನ್ನಕ್ಕೆ ಎಡೆಮಾಡಿಕೊಡುತ್ತಿದ್ದರು. ಈಚಿನ ದಿನಗಳಲ್ಲಿ, ಈ ಪರಿಪಾಠ ತಪ್ಪಿ ಹೋದಂತೆ ಕಂಡು, ಶ್ರೀಗಂಧದ ಪುನರುತ್ಪನ್ನದ ಒಂದು ಅಂಶಕ್ಕೆ ಪೆಟ್ಟುಬಿದ್ದಂತಾಗಿದೆ.

ಆಹಾರೋತ್ಪನ್ನಕ್ಕೆ ವೃಕ್ಷಭರಿತ ಪ್ರದೇಶಗಳ ವಿಲೇ ಆಗುವುದರ ಜೊತೆಗೆ, ಇತರ ಅಭಿವೃದ್ಧಿ ಕಾರ್ಯಗಳ ನಿಮಿತ್ತ ಅಂದರೆ ಜಲಾಶಯಗಳ ನಿರ್ಮಾಣಕ್ಕಾಗಿ, ಎಲೆಕ್ಟ್ರಿಕ್ ತಂತಿಗಳನ್ನು ಹಾಯಿಸಲು, ಹೊಸ ಹೊಸ ರಸ್ತೆಗಳ ನಿರ್ಮಾಣಕ್ಕೆ, ಕೈಗಾರಿಕಾ ಕ್ಷೇತ್ರಗಳ ಬಡಾವಣೆಗೆ, ಜಲಾಶಯಗಳ ನಿರ್ಮಾಣದಿಂದ ಸ್ಥಳ ಪಲ್ಲಟಗೊಂಡ ಜನತೆಯ ಪುನರ್ವಸತಿಗೆ ಹೀಗೆ ಎಲ್ಲಕ್ಕೂ ಕಾಡು ಕಡಿದೇ ಜಾಗ ಮಾಡಿಕೊಟ್ಟು, ೬೦-೭೦ರ ದಶಕದಲ್ಲಿ ಸಾವಿರಾರು ಹೆಕ್ಟೇರ್ ವೃಕ್ಷಭರಿತ ಪ್ರದೇಶಗಳನ್ನು ಬಿಟ್ಟುಕೊಡಬೇಕಾಯಿತು. ಇದು ಇಷ್ಟು ಪ್ರಮಾಣದಲ್ಲಿ ಕೂಡದು ಎಂದು ಧ್ವನಿಎತ್ತಿದ ಅರಣ್ಯಾಧಿಕಾರಿಗಳನ್ನು 'ಪ್ರಗತಿ ವಿರೋಧಿ'ಗಳು ಎಂದು ಮೂದಲಿಸಿ, ಮೂಲೆಗುಂಪು ಮಾಡಲಾಯಿತು.

೧೯೨೮ನೇ ಇಸವಿಯ ಸುಮಾರಿಗೆ, ಆಗಿನ ಮೈಸೂರು ಮಹಾರಾಜರ ಕಾಲದ ಕೌನ್ಸಿಲರ್ ಆಗಿದ್ದ ಸರ್.ಎಂ.ಎನ್. ಕೃಷ್ಣರಾವ್ ಎಂಬ ಪ್ರಗತಿಪರ ಜನಹಿತ ಅಧಿಕಾರಿಯೊಬ್ಬರು ಅರಣ್ಯ ಇಲಾಖೆಯ ಹೊಣೆಗಾರಿಕೆಯನ್ನು ಪ್ರತಿಪಾದಿಸುತ್ತ, ರಾಜ್ಯದ ಬಯಲು ಸೀಮೆಯ ಜನತೆಗೆ, ಸೌದೆ ಇತ್ಯಾದಿ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಉರುವಲು ಒದಗಿಸುವ ಪ್ರತ್ಯೇಕ 'ಫ್ಯೂಯಲ್ ರಿಸರ್ವ್ಸ್' ಗಳನ್ನು ಗುರ್ತಿಸುವುದರ ಜೊತೆಗೆ, ಉರುವಲ ನೆಡುತೋಪುಗಳ ನಿರ್ಮಾಣಕ್ಕೂ ಸೂಚನೆ ಕೊಟ್ಟಿದ್ದರು.

ಮಾತ್ರವಲ್ಲದೆ, ಉತ್ತಮ ದರ್ಜೆಯ ಮರಜಾತಿಗಳ ದಿಮ್ಮಿಗಳನ್ನು ರಫ್ತುಮಾಡಿ, ಸ್ಥಳೀಯ ಅವಶ್ಯಕತೆಗಳಿಗೆ, ಎರಡನೇ ದರ್ಜೆಯ, ಆದರೆ ಅಷ್ಟೇ ಉಪಯುಕ್ತವಾದ ಮರಗಳ ಬಳಕೆಗೆ ಒತ್ತಾಯಿಸಿದ್ದರು. ಹಾಗೂ ಅರಣ್ಯ ಲಘು ಫಸಲುಗಳ ಹೆಚ್ಚು ಹೆಚ್ಚು ಉತ್ಪನ್ನಕ್ಕೆ ಅವಕಾಶಮಾಡಿ, ಇವನ್ನು ರಫ್ತು ಮಾಡಿ ನಾಡಿನ ಬೊಕ್ಕಸಕ್ಕೆ ಆದಾಯತರುವ ಯೋಜನೆಗಳನ್ನು ಸೂಚಿಸಿದ್ದರು. ಇಂತಹ ಪ್ರಗತಿಪರ ಆಡಳಿತಾಧಿಕಾರಿಗಳೂ, ಅರಣ್ಯಾಧಿಕಾರಿಗಳೂ ನಮ್ಮಲ್ಲಿ ಇದ್ದು, ನಾಡಿನ ವನಸಂಪತ್ತು, ಅಭಿವೃದ್ಧಿಯ ಹಾದಿಯಲ್ಲಿದ್ದಾಗ, ಪ್ರಜಾಪ್ರಭುತ್ವದಲ್ಲಿ ಅರಣ್ಯ ನೀತಿಯೇ ಸಡಿಲಗೊಂಡು ವೃಕ್ಷಭರಿತ ಅರಣ್ಯಗಳು ಬಂಜರುಗಳಾಗಿ ರೂಪಾಂತರಗೊಂಡವು.

ಇದಕ್ಕೆ ಅಪವಾದವೆಂಬಂತೆ, ನಮ್ಮ ರಾಜ್ಯದಲ್ಲಿಯೇ ಒಬ್ಬ ಜನ ಚುನಾಯಿತ ಅರಣ್ಯಮಂತ್ರಿಯೊಬ್ಬರು ದೊರಕಿದರು. ಸ್ವಾತಂತ್ರ್ಯೋತ್ತರ ತರುಣದಲ್ಲಿ, ಅಭಿವೃದ್ಧಿ ಕಾರ್ಯಗಳ ನಿಮಿತ್ತ, ಅರಣ್ಯ ಹಾಗೂ ಅರಣ್ಯ ಪ್ರದೇಶಗಳನ್ನು ಮಿತಿಯಿಲ್ಲದೆ ಬಳಸಲಾಗುತ್ತಿದ್ದ ಕಾರಣ, ಎಪ್ಪತ್ತರ ದಶಕದಲ್ಲಿ ಆಗಿನ ಅರಣ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ.ಎಚ್. ಪಾಟೀಲರು, ಅರಣ್ಯ ಮುಖ್ಯಾಧಿಕಾರಿಗಳ ಸೂಕ್ತ ಸಲಹೆಗಳಿಗೆ ಮಾನ್ಯತೆ ಕೊಟ್ಟು ಕೆಲವು ರಚನಾತ್ಮಕ ಆದೇಶಗಳನ್ನು ಜಾರಿಗೆ ತಂದರು.

ಇವುಗಳಲ್ಲಿ ಮುಖ್ಯವಾಗಿ, ಅರಣ್ಯ ಪ್ರದೇಶಗಳನ್ನು ಅರಣ್ಯಾಭಿವೃದ್ಧಿಗಲ್ಲದೆ, ಇತರ ಅನಿವಾರ್ಯ ಕಾರಣಗಳಿಗೆ ಬಿಟ್ಟುಕೊಡಬೇಕಾದಲ್ಲಿ, ಸರ್ಕಾರಕ್ಕಿದ್ದ ಅಧಿಕಾರವನ್ನು ತ್ಯಜಿಸಿ, ಎರಡೂ ಸದನಗಳ ಪೂರ್ವಾನುಮತಿಯಿರಬೇಕೆಂಬ ಕಾನೂನನ್ನು ಹೊರಡಿಸಿದರು. ಇದು ಇಡೀ ಭಾರತ ದೇಶಕ್ಕೇ ಮಾದರಿಯಾಗಿ, ರಾಷ್ಟ್ರದ 'ಅರಣ್ಯ ನೀತಿ' ಪರಿಷ್ಕರಣದಲ್ಲಿ ಈ ಕಟ್ಟುಪಾಡು ಅಳವಡಿಸಲ್ಪಟ್ಟು, ಕರ್ನಾಟಕಕ್ಕೆ ಒಂದು ಹೆಮ್ಮೆಯ ವಿಷಯವಾಯಿತು. ಶ್ರೀ ಪಾಟೀಲರ ಕಾಲದ ಇತರ ಅರಣ್ಯರಕ್ಷಣಹಿತ ಆದೇಶಗಳಲ್ಲಿ,

೧. ನೆಡುತೋಪುಗಳ ನಿರ್ಮಾಣಕ್ಕೆ ವಿಚಕ್ಷಣೆ ಇಲ್ಲದೆ ಉತ್ತಮ ವೃಕ್ಷಭರಿತ ಪ್ರದೇಶಗಳ ಪೂರ್ಣ ಕಟಾವಿನ ಬಹಿಷ್ಕಾರ,
೨. ಮರಬಂಡವಾಳವು (Growing Stock) ಉತ್ತಮಗೊಳ್ಳಲು, ಕೆಲವು ಕಾಲ ನಿಂತ ಮರಗಳ ಕಟಾವನ್ನು ಸ್ಥಗಿತಗೊಳಿಸಿ, ಅಲ್ಲಲ್ಲಿ ಬಿದ್ದಿರುವ ಹಳೆಯ ದಿಮ್ಮಿಗಳ ಮತ್ತು ಒಣಮರಗಳ ಬಳಕೆಗೆ ಒತ್ತು ಕೊಡುವುದು,
೩. ಅರಣ್ಯಗಳ ವ್ಯವಸ್ಥಿತ ಅಭಿವೃದ್ಧಿ ಹಾಗೂ ಅರಣ್ಯ ಫಸಲುಗಳ ಉತ್ತಮ ಬಳಕೆಗೆ, ಪ್ರತ್ಯೇಕ ಗಮಗಳ ಸ್ಥಾಪನೆ,
೪. ಎಂದೋ ನಿಗದಿಪಡಿಸಿದ ತೀರ ಕಡಿಮೆ ದರದ 'ತೆರುವಳಿ' (Seniorage) ದರಗಳ ಹೆಚ್ಚಳ,
೫. ಅರಣ್ಯಾಭಿವೃದ್ಧಿಗಾಗಿ ಪ್ರತ್ಯೇಕ ಧನವನ್ನು ನಿಯಂತ್ರಿಸಲು 'ಫಾರೆಸ್ಟ್ ಸೆಸ್'ನ ನಿಗದಿ,
೬. ಜಲಾಶಯ ನಿರ್ಮಾಣ ಕಾರ್ಯದಲ್ಲಿ, ಆ ಯೋಜನೆಗೆ ಮೀಸಲಾದ ಹಣದ ಕಿಂಚಿತ್ ಭಾಗಾಂಶವನ್ನು ಜಲಾನಯನ ಪ್ರದೇಶಗಳಲ್ಲಿ ವನೀಕರಣಕ್ಕಾಗಿ ಪೂರಾನ್ವಯವಾಗಿ ನಿಗದಿಪಡಿಸುವುದು.

ಈ ರೀತಿ ಕೆಲವಾರು ರಚನಾತ್ಮಕ ಆದೇಶಗಳು ಜಾರಿಗೆ ತರಲ್ಪಟ್ಟವು. ಪ್ರಜಾಪ್ರಭುತ್ವದ ಸೋಗಿನಲ್ಲಿ ಜನಪ್ರತಿನಿಧಿ ರಾಜಕಾರಣಿಗಳು ತಮ್ಮ ಅಧಿಕಾರವನ್ನು ಈ ರೀತಿ ಪ್ರಗತಿದಾಯಕ ರೀತಿಯಲ್ಲಿ ಬಳಸಿಕೊಳ್ಳುವುದು ಈಗಂತೂ ಅಪರೂಪವಾಗಿಬಿಟ್ಟು, ಶ್ರೀ ಪಾಟೀಲರ ಕಾಲದ ಶಿಸ್ತು ಮತ್ತು ಬಿಗಿಗಳು ಸಡಿಲವಾಗುತ್ತಿದ್ದಂತೆ ತೋರುತ್ತಿದೆ.

ಹಿಂದಿನ ದಿನಗಳಲ್ಲಿ ಅರಣ್ಯ ಉತ್ಪನ್ನಗಳಿಂದಲೇ ಬಂದ ಆದಾಯದ ಸ್ವಲ್ಪ ಭಾಗವನ್ನು ಅರಣ್ಯಾಭಿವೃದ್ಧಿ ಕಾರ್ಯಗಳಿಗೆ ಮೀಸಲಾಗಿಟ್ಟು ಕಾರ್ಯನಿರ್ವಹಣೆ ಮಾಡಿದ್ದರೆ, ಇಂದು ಕೆಲವಷ್ಟು ಹೆಕ್ಟೇರುಗಳ ಉತ್ತಮ ನೆಡುತೋಪುಗಳ ರಾಜ್ಯದ ಆಸ್ತಿಯಾಗಿರುತ್ತಿದ್ದವು.

ಮಾತ್ರವಲ್ಲದೇ, ಸಂಕುಚಿತ ಮನೋಭಾವವನ್ನು ತೊರೆದು, ಸೂಕ್ತ ಕಟ್ಟುನಿಟ್ಟಿನ ಚೌಕಟ್ಟಿನಲ್ಲಿ, ಕೈಗಾರಿಕೋದ್ಯಮಗಳ ಮುಖೇನ ಬಯಲು ಬಂಜರುಗಳಲ್ಲಿ ಸೂಕ್ತ ಮರಜಾತಿಗಳ ವನೀಕರಣದ ಯೋಜನೆಗೂ ಪ್ರೋತ್ಸಾಹ ಕೊಟ್ಟಿದ್ದರೆ, ಇಂದು ಮರಕ್ಷಾಮವಾಗದೇ ಹೊರಗಿನಿಂದ ಮರಮಟ್ಟುಗಳನ್ನು ಆಮದುಮಾಡಿಕೊಳ್ಳುವ ಸ್ಥಿತಿ ಬರುತ್ತಿರಲಿಲ್ಲ.

ಮೊದಲಿಗೆ ಜನವಸತಿಗೆಂದು ಗ್ರಾಮಗಳು ರೂಪುಗೊಂಡು, ಜನಸಂಖ್ಯೆ ಹೆಚ್ಚಿದಂತೆ, ನಾಗರಿಕತೆಯು ಬೆಳೆದಂತೆ, ಕೈಗಾರಿಕೆಗಳು ಅಭಿವೃದ್ಧಿಯಾದಂತೆ ಹಳ್ಳಿಗಳು ಊರುಗಳಾಗಿ, ಊರುಗಳು ಪಟ್ಟಣಗಳಾಗಿ, ಪಟ್ಟಣಗಳು ಮಹಾನಗರಗಳಾಗಿ, ಈಗಂತೂ ಗ್ರಾಮೀಣರು ಉದ್ಯೋಗಾವಕಾಶಕ್ಕಾಗಿ ಹೆಚ್ಚು ಹೆಚ್ಚು ಪಟ್ಟಣ ಸೇರುತ್ತಿದ್ದಾರೆ. ಮಹಾನಗರಗಳಲ್ಲಿ, ಪರಿಸರ ಮಾಲಿನ್ಯದ ಸಮಸ್ಯೆ ದಿನದಿನಕ್ಕೆ ಹೆಚ್ಚುತ್ತಿದೆ. ನಗರಗಳಲ್ಲಿ ವಾತಾವರಣ ಕಲ್ಮಶವನ್ನು ಹದ್ದಿನಲ್ಲಿಡಲು 'ನಗರ ಅರಣ್ಯ'ಗಳು ಅತ್ಯವಶ್ಯಕ. ಬೆಂಗಳೂರಿನಂತಹ ಮಹಾನಗರಗಳಲ್ಲಿ ರಸ್ತೆಗಳ ಆಜುಬಾಜು ಹಾಗೂ ಎಲ್ಲೆಲ್ಲಿ ಸಾರ್ವಜನಿಕ ಬೀಳುಜಾಗಗಳಿರುವುವೋ ಅಲ್ಲೆಲ್ಲಾ ವನೀಕರಣದ ಕಾರ್ಯಕ್ರಮ ಎಪ್ಪತ್ತರ ದಶಕದಲ್ಲಿ ಮೂಡಿಬಂದು ಸಾಕಷ್ಟು ವನೀಕರಣ ಸಾಗಿತ್ತು. ಆದರೆ ನಂತರದ ದಿನಗಳಲ್ಲಿ ಇದರ ಗತಿ ಕುಂದಿ, ಈಗಂತೂ ಅನೇಕ ಕಡೆ ಇರುವ ಮರ ಗಳನ್ನು 'ರಸ್ತೆ ಅಗಲೀಕರಣ', 'ಫ್ಲೈ ಓವರ್'ಗಳ ನಿರ್ಮಾಣ ಇನ್ನಿತರ ಕಾರಣಗಳಿಗಾಗಿ ಕಡಿದು ಹಾಕಲಾಗುತ್ತಿದೆ. ಇವೆಲ್ಲ ಅನಿವಾರ್ಯತೆಗಳಾದರೂ, ಕಡಿದ ಮರಗಳ ಬದಲು ಸೂಕ್ತ ಮರಜಾತಿಗಳನ್ನು ನೆಡುವ ಕಾರ್ಯಕ್ರಮ ಭರದಿಂದ ಸಾಗಬೇಕಾಗಿದೆ. ಕಿರುದಾದ ರಸ್ತೆಗಳಲ್ಲಿ, ಎಲೆಕ್ಟ್ರಿಕ್ ತಂತಿ ಹಾಯುವ ಸಾಲು ಬಿಟ್ಟು, ಎದುರುಗಡೆ, ಒಂದೇ ಸಾಲಿನಲ್ಲಿ ಸಾಲ್ಮರ ಬೆಳೆಸಿದರೆ, ವಿದ್ಯುತ್ ತಂತಿಯ ರಕ್ಷಣೆಗಾಗಿ, ಮರಗಳ ಕೊಂಬೆ ರೆಂಬೆಗಳನ್ನು ಕತ್ತರಿಸಿ, ಮರಗಳು ಅವಿಕಾರ ಹಾಗೂ ಅಪಾಯಕಾರಿಯಾಗುವುದನ್ನು ತಪ್ಪಿಸಬಹುದು.

ಈಗಲಾದರೂ ಮಹಾನಗರ ಪಾಲಿಕೆಯವರು ಹಾಲಿ 'ಕಿರುವನ'ಗಳ ನಿರ್ಮಾಣಕ್ಕೆಂದೇ ಮೀಸಲಾಗಿಟ್ಟಿರುವ ನಿವೇಶನ (Civic amenity sites)ಗಳಲ್ಲಿ ಮತ್ತು ರಸ್ತೆ ಆಜುಬಾಜು ಸೂಕ್ತ ಜಾತಿಯ ಗಿಡಮರಗಳನ್ನು ಅರಣ್ಯ ಇಲಾಖೆಯ ನೆರವಿನಿಂದ ನಿರ್ಮಾಣಮಾಡುವ ಕಾರ್ಯಗತಿಯನ್ನು ಚುರುಕುಗೊಳಿಸುವುದು ಸೂಕ್ತವಾಗಿದೆ. ಈ ಕಾರ್ಯಗಳಲ್ಲಿ ಮಹಾನಗರ ಪಾಲಿಕೆ, ವಿದ್ಯುಚ್ಛಕ್ತಿ ಇಲಾಖೆ, ಜಲಮಂಡಳಿ ಇತ್ಯಾದಿ ವಿವಿಧ ಇಲಾಖೆಗಳಲ್ಲಿ ಹೊಂದಾಣಿಕೆ ಅವಶ್ಯಕ. ಇಲ್ಲದಿದ್ದರೆ ಒಂದು ಇಲಾಖೆಯ ಪ್ರಗತಿಪರ ಕಾರ್ಯಗಳು, ಇನ್ನೊಂದರ ಅಡಚಣೆಯೆಂದು ಭಾವಿಸಿ ಮಾಡಿದ ರಚನಾತ್ಮಕ ಕೆಲಸಗಳು ವಿನಾಶವಾಗುವ ಸ್ಥಿತಿಯೂ ಬರುವುದು. ಈ ಕಾರ್ಯಕ್ರಮಗಳು ರಾಜ್ಯದ ಇತರ ಮಹಾನಗರ, ನಗರ ಗಳಲ್ಲಿಯೂ ರೂಪುಗೊಳ್ಳಬೇಕು. ಬೆಂಗಳೂರಿನ ಮಹಾನಗರ ಪಾಲಿಕೆ ತನ್ನದೇ 'ಉದ್ಯಾನೀಕರಣ' ಯೋಜನೆ ಹಾಕಿಕೊಂಡು, ಕೆಲವೆಡೆ ಉತ್ತಮ 'ಉದ್ಯಾನವನ'ಗಳನ್ನು ಸೃಷ್ಟಿಸಿದೆ (ಇವುಗಳಿಗೆ ತಗಲಿರುವ ವೆಚ್ಚ ಬೇರೆಯ ವಿಷಯ) ಕಣ್ಮನಗಳಿಗೆ ಹರ್ಷ ತರುವ ಈ ಉದ್ಯಾನವನಗಳೂ ಬೇಕು. ಆದರೆ ಇಂದಿನ ವಾಯುಮಾಲಿನ್ಯದ ಪರಿಸ್ಥಿತಿಯಲ್ಲಿ, ವಾಯುವಿನಲ್ಲಿ ಹೆಚ್ಚುತ್ತಿರುವ ಇಂಗಾಲಾಮ್ಲವನ್ನು ಹದಗೊಳಿಸಲು ಆಮ್ಲಜನಕ ನೀಡುವ ಕೋಟಿ ಕೋಟಿ ಹಸಿರೆಲೆಗಳು ಬೇಕು. ಇವು ಅಲ್ಲಲ್ಲಿ ಹರಡಿದಂತೆ 'ಕಿರು ವನ'ಗಳ ಸ್ಥಾಪನೆಯಿಂದ ಮಾತ್ರ ಸಾಧ್ಯ. ಇವಕ್ಕೆ ತಗಲುವ ವೆಚ್ಚ, ಪಾಲಿಕೆಯವರು ಸಾಧಿಸುತ್ತಿರುವ ಉದ್ಯಾನಗಳಿಗೆ ತಗಲುವ ಖರ್ಚಿನ ಬಹಳಷ್ಟು ಪಾಲು ಕಡಿಮೆಯಾಗಿ, ಜನತೆಯ ಆರೋಗ್ಯಕ್ಕೂ ಇನ್ನೂ ಉತ್ತಮ ಸಾಧನೆಯಾಗುವುದು.

ಅವಿಚ್ಛಿನ್ನವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರಕ್ಕೆ ಈಗ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕುಗಳು ಸಾಲವು. ಬೆಂಗಳೂರಿನ ಮಧ್ಯದಲ್ಲಿದ್ದು ಈಗ ತೆರವಾಗಿರುವ 'ಸೆಂಟ್ರಲ್ ಜೈಲು' ಇದರ ಖಾಲಿ ಜಾಗದಲ್ಲಿ ಮತ್ತು ಬೆಂಗಳೂರಿನ ಉತ್ತರಭಾಗದಲ್ಲಿರುವ 'ಪ್ಯಾಲೇಸ್ ಆರ್ಚರ್ಡ್'ನಲ್ಲಿ, ನಾಡಿನ

ಈ ಅಪೂರ್ವ ಸ್ಥಿರಾಸ್ತಿಗಳು ಹರಿದು ಹಂಚಿಹೋಗದಂತೆ, ಅತಿ ಜರೂರಾಗಿ, ಯಥೇಚ್ಛವಾದ ಅಂದಚಂದದ, ಹರಡಿದ ಹಂದರದ, ಹೊಂಗೆಯಂತಹ ಹರಿದ್ವರ್ಣ ಹಂದರದ ಮರಜಾತಿಗಳಿಂದ ವನೀಕರಣವಾಗಬೇಕು.

ಪ್ರಗತಿಪರ ಯೋಜನೆಗಳನ್ನು ರೂಪಿಸುವುದೇ ಒಂದು ಹೊಣೆಗಾರಿಕೆಯ ಕಾರ್ಯ. ಆದರೆ ಈ ಯೋಜನೆಗಳ ಸಾರ್ಥಕ ಅನುಷ್ಠಾನ ಇನ್ನೂ ಗುರುತರದ ಹೊಣೆ. ಇದಕ್ಕೆ ಸೂಕ್ತ ಅನುಭವಿ, ಯೋಗ್ಯ, ನಿಷ್ಠಾವಂತ, ಶಿಸ್ತು ಪರಿಪಾಲಿಸುವ ಸಿಬ್ಬಂದಿಗಳ ನೇಮಕ ಮುಖ್ಯ. ಒಂದು ಬಾರಿ ಕಾರ್ಯನೀತಿಯನ್ನು ರೂಪಿಸಿ ಅದರ ನಿರ್ವಹಣೆಗೆ ಆದೇಶ ಕೊಟ್ಟನಂತರ, ಸರ್ಕಾರವು ಅದರ ನಿರ್ವಹಣೆಯನ್ನು ಇಲಾಖಾ ಮುಖ್ಯಸ್ಥರಿಗೇ ಬಿಟ್ಟು, ರಾಜಕಾರಣಿಗಳು ಯಾವುದೇ ಕಾರಣಕ್ಕಾಗಿ, ಪದೇ ಪದೇ ಹಸ್ತಕ್ಷೇಪ ಮಾಡದಿದ್ದರೆ ಹಾಗೂ ನೌಕರರ ವರ್ಗಾವಣೆಗಳಲ್ಲಿ ಕೈಹಾಕದಿದ್ದರೆ, ರಾಜ್ಯ ಪ್ರಗತಿಯ ಹಾದಿಯಲ್ಲಿ ಶೀಘ್ರವಾಗಿ ಮುನ್ನಡೆಯುವಲ್ಲಿ ಅನುಮಾನವಿಲ್ಲ.

ಅರಣ್ಯ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೊಂದು ಕಿವಿಮಾತು. ಸರ್ಕಾರದ ಎಲ್ಲಾ ವರ್ಗದ ನೌಕರರು, ರಾಜ್ಯದ ಎಲ್ಲಿಯಾದರೂ, ತಮ ತಮಗೆ ಅನ್ವಯಿಸುವ ಸೇವೆಗೆ ಸಿದ್ಧರಿರಬೇಕು. ಸರ್ಕಾರವೇ ಆಗಲೀ ಮೇಲಧಿಕಾರಿಗಳೇ ಆಗಲಿ, ಎಲ್ಲ ಅಂಶಗಳನ್ನೂ ಪರಿಗಣಿಸಿ, ಯಾವೊಬ್ಬ ಸಿಬ್ಬಂದಿಯನ್ನು ಒಂದು ಸ್ಥಳಕ್ಕೆ ವರ್ಗಾಯಿಸಿದರೆ, ಅದನ್ನು ಮರುಮಾತಿಲ್ಲದೇ ಪಾಲಿಸುವ ಮತ್ತು ಹೊಸ ಸ್ಥಳದಲ್ಲಿ ಅಷ್ಟೇ ಶ್ರದ್ಧೆ, ನಿಷ್ಠೆಗಳಿಂದ ಕಾರ್ಯವೆಸಗುವ ಮನೋಸ್ಥೈರ್ಯ ಬೆಳೆಸಿಕೊಳ್ಳಬೇಕು. ವರ್ಗದ ಆದೇಶ ಹೊರಟಕೂಡಲೇ ಆ ಜಾಗ ಬೇಕು. ಈ ಜಾಗ ಬೇಕು ಎಂದು ರಾಜಕಾರಣಿಗಳನ್ನು ಬೇಡುವ ಚಟ ಬಿಡಬೇಕು. ಅಂತಹ ಹಂಗಿನಲ್ಲಿ ಯಾವೊಬ್ಬ ನೌಕರನೂ ನಿಷ್ಠೆಯಿಂದ ತನ್ನ ನಿಗದಿತ ಕಾರ್ಯವನ್ನು ನೆರವೇರಿಸುವುದು ಸಾಧ್ಯವಿಲ್ಲ.

ಈ ಎಲ್ಲ ಅನಿಸಿಕೆಗಳು ಸರ್ಕಾರದ ಯಾವುದೇ ನೀತಿಯನ್ನಾಗಲೀ, ಯಾವುದೇ ರಾಜಕಾರಣಿಗಳ ನ್ನಾಗಲೀ, ಯಾವುದೇ ಅಧಿಕಾರಿಗಳನ್ನಾಗಲೀ ಟೀಕಿಸುವುದಕ್ಕಾಗಿ ಎಂದು ಪರಿಗಣಿಸದೆ, ಇವು ರಾಜ್ಯದ ಹಾಗೂ ರಾಜ್ಯ ಜನತೆಯ ಸರ್ವತೋಮುಖ ಹಿತಕ್ಕಾಗಿ ನುಡಿದವು ಎಂದು ಭಾವಿಸಲು ನನ್ನ ಮನವಿ.

ಒಟ್ಟಿನಲ್ಲಿ, ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲೂ ಹಸಿರು ಕಂಡು ಉತ್ತಮ ನಿಷ್ಕಲ್ಮಶ ವಾತಾವರಣ ರೂಪುಗೊಂಡ ಸುದಿನವನ್ನು ಮತ್ತೆ ಶೀಘ್ರವಾಗಿ ಕಾಣೋಣ.

❑

ಸಂಗಾತಿ ಒತ್ತಾಸೆ

"ಪ್ರಜಾಸಾಹಿತ್ಯ" ಒಂದು ಹೊಸ ಪರಿಕಲ್ಪನೆಯನ್ನೇ ಮುಂದಿಟ್ಟಿದ್ದೀರಿ. ಯಾವಾಗಲೂ ಮೂಲೆಯಲ್ಲಿ ಕುಳಿತವರ ಪರ ನಿಂತು ಹೋರಾಡುತ್ತಲೇ ಬಂದವರು ನೀವು.

ನೀವೆಂದಂತೆ ಪ್ರಜಾಪ್ರಭುತ್ವದ ಉಳಿವಿಗೆ ಈ ಮೂಲೆಯಲ್ಲಿ ಕುಳಿತಿರುವವರನ್ನು ಮಾತನಾಡಿಸಬೇಕಿದೆ. ಅದರ ಅರಿವಿಲ್ಲದವರಿಗೆ ಅರಿವನ್ನು ಹೇಳಬೇಕಿದೆ. ಅಂಥ ಹೋರಾಟದ ಒಂದು ಭಾಗವಾಗಿ "ಪ್ರಜಾಸಾಹಿತ್ಯ" ಹೊರಬರುತ್ತಿದೆ. ಇದು ಸ್ವಾಗತಾರ್ಹವಾದ ಸಂಗತಿ. ನನ್ನ ಸಹಕಾರ ನಿಮ್ಮೊಟ್ಟಿಗೆ ಇದೆ.

ಈ ಸೆಪ್ಟಂಬರ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಲೇಖನಗಳು ಅಂಥ ಹೊಣೆಯನ್ನು ಹೊತ್ತಂತವು ಅಭಿನಂದನೆ

ನಿಮ್ಮ

ಉತ್ತರ ಕರ್ನಾಟಕ — ಆರ್.ವಿ. ಭಂಡಾರಿ

ರಾಷ್ಟ್ರಕವಿ ಅಂಬೋ ಮಸಿ ಯಾರ ಮುಖಕ್ಕೋ

ಮೊದಲ ರಾಷ್ಟ್ರಕವಿ, ಮಂಜೇಶ್ವರದ ಗೋವಿಂದ ಪೈ ಎಂದುಕೊಂಡಿದ್ದೇವೆ. ರಾಷ್ಟ್ರಕವಿ ಅಂತಲೆ ಕೊಟ್ಟರೊ, ಆಸ್ಥಾನಕವಿ ಅಂತಲೆ ಕರೆದರೊ ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ ಆವತ್ತಿನ ಕಾಲ. ಆದರೆ ಅವರೊಂದಿಗೆ ತೆಲುಗು, ತಮಿಳು, ಮಲೆಯಾಳ ಭಾಷೆಗಳಿಗೂ ಒಬ್ಬೊಬ್ಬರನ್ನು ಆರಿಸಿದ ನೆನಪು. ಏನೇ ಇರಲಿ. ಬ್ರಾಹ್ಮಣರ ಕೋಟ ಅದು.

ಸ್ವಾತಂತ್ರ್ಯ ಬಂದ ಮೇಲೆ, ಏಕೀಕರಣ ಆದ ಮೇಲೆ, ಯಾವ ಪುಣ್ಯಾತ್ಮ ರಾಷ್ಟ್ರಕವಿ ಎಂಬ ಶಬ್ದ ಜೋಡಣೆಮಾಡಿ ಕೊಡಬೇಕು ಎಂದು ಸರ್ಕಾರವನ್ನು, ಮುಖ್ಯಮಂತ್ರಿಯನ್ನು ಪ್ರಚೋದಿಸಿದನೊ, ಆತನೇ ಬದುಕಿದ್ದರೆ ಆತನ ಆಶಯವೇನೊ ಈಗಲಾದರು ವಿವರಿಸಿದರೆ ಪುನೀತರಾಗಬಹುದು. ಅಂತೂ ಕುವೆಂಪು ಅವರಿಗೆ ಅದನ್ನು ತಗಲಾಕುವುದಾಯಿತು. ಒಕ್ಕಲಿಗರ ಕೋಟ ಅದಾಯಿತು.

ಬೇರೆ ಎಲ್ಲ ಕ್ಷೇತ್ರಬಿಟ್ಟು (ಸಂಗೀತದಲ್ಲಿ ಇತ್ತೀಚೆಗೆ ಆಸ್ಥಾನ ವಿದ್ವಾನ್ ಎಂಬ ಟೈಟಲ್ ಕೊಡಮಾಡಿದಂತೆ ಕಾಣಿಸುತ್ತೆ) ಈ ಕವಿಗಡಣಕ್ಕೆ ಯಾಕೆ ಈ ಕರ್ಮ ಎಂಬುದು ಮಾತ್ರ ತಿಳಿಯುತ್ತಿಲ್ಲ. ಇದರ ಪರಿಣಾಮ ಎಲ್ಲಿಗೆ ತಲಪುತ್ತೆ ಎಂಬುದಕ್ಕೆ ಪಕ್ಕದ ಆಂಧ್ರಪ್ರದೇಶಕ್ಕೆ ಒಂದು ನಿಯೋಗವನ್ನು ಕಳಿಸುವ ಕೃಪೆಮಾಡಬೇಕು ಮಾನ್ಯ ಮುಖ್ಯಮಂತ್ರಿಯವರು. ಸಾಹಿತ್ಯ, ಸಂಗೀತ ಇತ್ಯಾದಿ ಇರಲಿ, ಆಸ್ಥಾನ ಬೃಹನ್ನಳೆಯನ್ನಾಗಿ ಯಾರನ್ನು ಆರಿಸುತ್ತಾರೆ ಅಥವಾ ನೇಮಿಸುತ್ತಾರೆ ಎಂಬುವ ಮಟ್ಟಿಗೆ ಆ ಪಟ್ಟ ಅಥವಾ ಪೀಠ ಬೆಳೆಯಿತು. ಕೊನೆಗೆ ಎನ್.ಟಿ. ರಾಮಾರಾವ್ ಕಾಲದಲ್ಲಿ, ದೇಶದ ಬುದ್ಧಿಜೀವಿಗಳಲ್ಲಿ ಒಬ್ಬರಾದ ಡಾ॥ ನಾರ್ಲ ವೆಂಕಟೇಶ್ವರರಾವ್ ಅವರ ಸಲಹೆ ಮೇರೆಗೆ ಈ ದರಿದ್ರ ಪದ್ಧತಿಯನ್ನು ಕಿತ್ತು, ಆಂಧ್ರ(ಪ್ರ)ದೇಶವನ್ನು ಪುನೀತಗೊಳಿಸಿದ್ದಾಯಿತು. ಈಗ ಅದು ಅಲ್ಲಿ ಮುಂದುವರಿದಿದೆಯೊ ಇಲ್ಲವೊ ಗೊತ್ತಿಲ್ಲ.

ಗೋವಿಂದ ಪೈ, ಕುವೆಂಪು ಯಾವ ಪ್ರಶಸ್ತಿ, ಪೀಠ, ಸ್ಥಾನಗಳಿಗಿಂತಲೂ ದೊಡ್ಡವರು, ಎತ್ತರದವರು. ಆದರೆ ಅವರಿಂದ ಏನನ್ನು ಬಯಸಿ ಇದನ್ನು ಕೊಡಮಾಡುವ ಕೃಪೆ ತೋರಿತೊ ಸರ್ಕಾರ ಗೊತ್ತಾಗಲಿಲ್ಲ. ಈ ಮೂಲಕ ಅವರಿಗೆ ಏನೇನು ಸವಲತ್ತೊ ಮರ್ಯಾದೆಯೊ – ಸಂದಿತೊ ಅದೂ ಗೊತ್ತಿಲ್ಲ. ದಿವ್ಯ ನಿರ್ಲಕ್ಷದಿಂದ ಬದುಕಿ ಬಾಳಿದ ಆ ಇಬ್ಬರು ಮಹಾಪುರುಷರಿಗೆ ಈಗ ಎಲ್ಲಿ ಕಳಂಕ ಬರುವಂತೆ ಆದೀತೊ ಎಂಬ ದಿಗಿಲು ಬರುವಂತೆ ಈಗಿನ ಪರಿಸ್ಥಿತಿ ರೂಪುಗೊಳ್ಳುತ್ತಿದೆ. ಅದಕ್ಕೆ ಜ್ಞಾನಪೀಠ ಪ್ರಶಸ್ತಿಯ ಸಂಖ್ಯಾಕ್ರಮದವರ ಯೋಗ್ಯತೆಯೇ ಒಂದು ಸಾಕ್ಷಿಯಾಗಿದೆ. ನಮ್ಮನ್ನು ಆಳಲಿಕ್ಕೆ ಹುಟ್ಟಿದ ಮುಖ್ಯಮಂತ್ರಿ ಬಾಯಲ್ಲಿ "ಯಾರ್ರೀ ಈ ಅನಂತಮೂರ್ತಿ" ಅಂದಾಗಲೇ, ಇಡೀ ಸಾಂಸ್ಕೃತಿಕ ಲೋಕ ತತ್ತರ ತರತರ ನಡುಗಿಹೋಯಿತು. ಅದೇ ಮುಖ್ಯಮಂತ್ರಿಯ ಇನ್ನೊಂದು ಕೈಯಾಗಿ ಚಪ್ಪಾಳೆ ಹಾಕಹೊರಟ ಬಿ.ಜೆ.ಪಿ. ಹಿಂಡೇ ಈ ಹಿಂದೆ, ಗಿರೀಶ ಕಾರ್ನಾಡರಿಗೆ ಕೊಟ್ಟ ಜ್ಞಾನಪೀಠ ಪ್ರಶಸ್ತಿ ಕಿತ್ತುಕೊಳ್ಳಲು ಕೇಂದ್ರಕ್ಕೆ ಶಿಫಾರಸ್ಸು ಮಾಡಲು ಹೊರಟ ಹಾಸ್ಯೋತ್ಸವವೂ ನಡೆಯಿತು.

ಹೀಗಿರುವಾಗ ಈ ಎರಡೂ ಕೈಗಳು ಕೂಡಿ ಕೊಡುವ ಪ್ರಶಸ್ತಿಯಿಂದ ಆಯ್ಕೆಯಾದ ರಾಷ್ಟ್ರಕವಿ ಇರಲಿ, ಕರ್ನಾಟಕದ ಕುಲಕೋಟಿಯ ಕತ್ತಿಗೆ ಉರುಳಾದರೆ ಗತಿ ಏನು ಅನ್ನುವಂತಾಗಿದೆ ಈಗ.

ಅದಕ್ಕೆ ತಕ್ಕಂತೆ ಸಮಿತಿ ರಚನೆಯಾಗಿದೆ : ಯಥಾ ಸ್ಥಿತಿ ಸಮಿತಿಗೆ ಆಯ್ಕೆಯಾದವರು, ಕಳೆದ ಮುವ್ವತ್ತು ವರ್ಷಗಳಿಂದ, ಯಾವುದೇ ಸರ್ಕಾರ ಬರಲಿ ಅವರಿಗೆ, ಆಯಾ ಜಾತಿಯ ನಾಯಕಮಣಿಗಳಂತೆ ಕಾಣುವವರು, ಸಿಗುವವರು ಇವರೇ ಆಗಿದ್ದಾರೆ. ಇದರಿಂದಲೇ ಗೊತ್ತಾಗುತ್ತದೆ ಆಯಾ ಜಾತಿಯಲ್ಲಿ ಇನ್ನೊಬ್ಬರನ್ನು ಈವರೆಗೆ ಬರಲು ಆ ನಾಯಕಮಣಿಗಳು ಬಿಟ್ಟಿಲ್ಲವೊ ಅಥವಾ ಮತದ ಅಂತರದಿಂದ

ಗೆದ್ದು ಬಂದು ನಮ್ಮನ್ನು ಆಳುತ್ತಿರುವ ಪ್ರಭುಗಳು ಬಿಟ್ಟಿಲ್ಲವೊ ಇನ್ನು ತೀರ್ಮಾನ ಆಗಬೇಕಾಗಿದೆ. ಸುಲಭವಾಗಿ ಆಯ್ಕೆ ಸಮಿತಿ ಮಾಡಿದವರೆ ಇನ್ನೊಂದು ಹೆಜ್ಜೆ ಮುಂದುವರಿದು, ಅವರಲ್ಲಿಯೆ ಒಬ್ಬರನ್ನು ಘೋಷಿಸಿಬಿಟ್ಟಿದ್ದರೂ ಯಾರೂ ಪ್ರಶ್ನಿಸುವ ಸಾಹಸ ಮಾಡುತ್ತಿರಲಿಲ್ಲ ಎಂಬ ಧೈರ್ಯ ಯಾಕೆ ವಹಿಸಲಿಲ್ಲವೊ ಗೊತ್ತಾಗಲಿಲ್ಲ. ಈಗಲೂ ಕಣ್ಣುಮುಚ್ಚಿಕೊಂಡು ಮಾಡಬಹುದಾದ ಒಂದು ಪ್ರಯತ್ನ ಏನೆಂದರೆ : ಪುಸ್ತಕ ಪ್ರಾಧಿಕಾರ, ಅಕಾಡೆಮಿ ಮುಂತಾದ ಸರ್ಕಾರಿ ನಿರುಪದ್ರವಿ ತೊಟ್ಟಿಗಳಲ್ಲಿ ಹೇಗೆ, ಸದಸ್ಯರಾದರೂ ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸಿಕೊಳ್ಳುವುದು, ಸ್ಥಾನದಿಂದ ಇಳಿದ ಕೂಡಲೆ ಪ್ರಶಸ್ತಿ ಹೊಡೆದುಕೊಳ್ಳುವ, ರಾಜಕಾರಣಿಗಳು ಅಧಿಕಾರಿಗಳಿಗೆ ಹೋಲಿಸಿಕೊಂಡರೆ ತುಂಬಾ ತುಂಬಾ ಕಡಿಮೆ ಭ್ರಷ್ಟರು ಮಾನಗೆಟ್ಟವರು ಆಗಿರುವುದು ಕಂಡು ಕಾಣದ ವಿಷಯವಾಗಿ ಉಳಿದಿಲ್ಲ. ಹಾಗೆ ಅಥವಾ ಅದರಂತೆ ಅಥವಾ ಆ ಆದರ್ಶದಂತೆ, ಚೀಟಿ ಹಾಕಿ ಒಬ್ಬರನ್ನು ಆರಿಸಿಬಿಟ್ಟರು ಅಪರಾಧ ಎನ್ನುವಂತಿಲ್ಲ. ಇರಲಿ. ತೊಡಕು ಅದಲ್ಲ.

ನಮ್ಮ ನಡುವೆ ಜ್ಞಾನಪೀಠ ಪ್ರಶಸ್ತಿ ಬಂದರೂ ಬದುಕಿರುವವರು ಇಬ್ಬರು. ಆ ಇಬ್ಬರಿಗೂ ನಮ್ಮ ಆಳುವ ಸಂ–ಮಿಶ್ರ ಸರ್ಕಾರ ಈಗಾಗಲೆ ಏನು ಮಾಡಿದೆ ಎಂಬುದನ್ನು ಮತ್ತೊಮ್ಮೆ ವಿವರಿಸಬೇಕಿಲ್ಲ. ಹೀಗಿರುವಾಗ ಆಯ್ಕೆ ಸಮಿತಿ ಆ ಇಬ್ಬರಲ್ಲಿ ಒಬ್ಬರನ್ನು ಆರಿಸಿ, ಇರಿಸುಮುರಿಸಿಗೆ ಸಿಕ್ಕಿಕೊಂಡೀತೊ? ಅದರಲ್ಲಿಯು ಆಯ್ಕೆ ಸಮಿತಿ ಅಧ್ಯಕ್ಷರೂ, ಜ್ಞಾನಪೀಠ ಪ್ರಶಸ್ತಿ ಪಡೆದ ಒಬ್ಬರೂ, ಬಹಿರಂಗವಾಗಿಯೇ ಕಾಳಗಕ್ಕೆ ಇಳಿದು ಆಡಿದ ಮಾತುಗಳು, ಸಮೂಹಮಾಧ್ಯಮಗಳಿಗೆ ಪರಮಾನ್ನವೆ ಆಗಿಹೋಯಿತು. ಹೀಗಿರುವಾಗ ಅವರ ಪಟ್ಟಿಯಲ್ಲಿ ಸೇರುವುದು ಸಾಧ್ಯವೊ?

ಜ್ಞಾನಪೀಠಿಗಳ ಹಣೇಬರಹ ಒತ್ತಟ್ಟಿಗಿರಲಿ. ಅದರ ನಂತರ ಎರಡನೇ ಸ್ಥಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪಡೆದವರದ್ದು. ಸಾಕಷ್ಟು ಜನ ಇದ್ದಾರೆ. ಬದುಕಿಯೂ ಇದ್ದಾರೆ. ದುರ್ದೈವದ ಸಂಗತಿ ಎಂದರೆ, ಆಯ್ಕೆ ಸಮಿತಿಯಲ್ಲಿ ಒಬ್ಬರಿಗೂ ಕೇಂದ್ರ ಸರ್ಕಾರದ ಆ ಪ್ರಶಸ್ತಿ ಸಿಕ್ಕಿಲ್ಲದೇ ಇರುವುದು. ಹೀಗಿರುವಾಗ ಪ್ರಶಸ್ತಿ ಈವರೆಗೆ ಕೊಟ್ಟವರನ್ನು ಅಥವಾ ಹಂಚಿಕೊಂಡವರನ್ನು ರಾಷ್ಟ್ರಕವಿ ಆಯ್ಕೆ ಸಮಿತಿ, ನಿರ್ಮಮಕಾರದಿಂದ ಆಯ್ಕೆ ಮಾಡುವುದಿರಲಿ, ಪಟ್ಟಿಯಲ್ಲಿ ಸೇರಿಸೀತೊ? ರಾಘವೇಂದ್ರ ಪಾಟೀಲರಂಥವರಿಗೂ ಪ್ರಶಸ್ತಿ ಕೊಡುವ ಔದಾರ್ಯ ತೋರಿದವರಿಗೆ ರಾಷ್ಟ್ರಕವಿ ಪಟ್ಟವೆ? ಯಾರಾದರು ಹೂ ಅಂದಾರು. ಸಾಹೇಬರು ಮಾತ್ರ ಸೂಟು ಬೂಟು ವಗೆದಾರು.

ಮೊದಲೇ ಬೇಕಾಗಿಯೊ ಬೇಡವಾಗಿಯೊ ಬ್ರಾಹ್ಮಣ, ಒಕ್ಕಲಿಗ ಎಂಬ ನಿಜದ ಸಂಗತಿಗಳನ್ನು ದಾಖಲಿಸಲಾಗಿದೆ. ಹೀಗಿರುವಾಗ ಆ ಕುಲ–ಗೋತ್ರದವರು ಯಾರಾದರು ಬದುಕಿದ್ದರೆ, ಉದಾಹರಣೆ: ಎಸ್.ಎಲ್. ಭೈರಪ್ಪ, ಪೂರ್ಣಚಂದ್ರತೇಜಸ್ವಿ ಈ ಪಟ್ಟಿಯಲ್ಲಿ ಕಾಣಿಸಿಕೊಂಡಾರೆಂದು ನಂಬಬಹುದೇ? ಇವರು ಕವಿಗಳೊ ಎಂಬ ಪ್ರಶ್ನೆ ಬರಬಹುದೊ? ನಾವಿಲ್ಲವೆ ಎಂದು ಸುಮತೀಂದ್ರ ನಾಡಿಗ, ಲಕ್ಷ್ಮೀನಾರಾಯಣಭಟ್ಟ, ಕಾಳೇಗೌಡ ನಾಗವಾರ ಎದ್ದರೆ, ಜನ ಸುಮ್ಮನೆ ಬಿಟ್ಟಾರೆಯೊ?

ಹಾಗಾದರೆ ಮುಖ್ಯಮಂತ್ರಿ ಅಥವಾ ರಾಷ್ಟ್ರಕವಿ ಆಯ್ಕೆಗೆ ಆದೇಶ ನೀಡಿದ ಅಧಿಕಾರಿ, ರಾಷ್ಟ್ರಕವಿ ಪಟ್ಟ ಕೇವಲ ಕವಿಯಾಗಿರುವವರಿಗೆ ಮಾತ್ರ ಎಂದು ಹುಕುಂ ಹೊರಡಿಸಿದೆಯೊ? ಹಾಗಾದರೆ ಕತೆ, ಕಾದಂಬರಿ, ನಾಟಕ, ಸಂಶೋಧನೆ, ವಿಮರ್ಶೆ, ಜಾನಪದ, ಸಂಪಾದನೆ ಮಾಡಿದ ಪುರುಷಶ್ರೇಷ್ಠರನ್ನು ಈ ಪಟ್ಟಿಯಲ್ಲಿ ಸೇರಿಸುತ್ತಾರೆಯೊ ಇಲ್ಲವೊ?

ಬಹುಸಂಖ್ಯಾತರ ಆಧಾರದ ಮೇಲೆ ನೋಡುವುದಾದರೆ ವೀರಶೈವರು, ಕುರುಬರು, ಆಮೇಲೆ ದಲಿತರು, ಆಮೇಲೆ ಅಲ್ಪಸಂಖ್ಯಾತರ ಪಟ್ಟಿ ತಯಾರಾಗಬೇಕು.

ಯಾರೂ ಬೇಸರ ಮಾಡಿಕೊಳ್ಳದೇ ಇದ್ದರೆ: ಹಿಂದೆ, ಪುರಾತನ ಕಾಲದಲ್ಲಿ ಅಕಾಡೆಮಿ, ಅಕಾಡೆಮಿಗಳ ಅಕಾಡೆಮಿಯ ನೇತಾರ ಎಂಟೋ ನಿರ್ದೇಶಕನಿಗೇ ಪ್ರಶಸ್ತಿ ಕೊಟ್ಟದ್ದು ನೆನಪಿದ್ದರೆ; ಒಂದು ವಿಶ್ವವಿದ್ಯಾಲಯ ಆಗಿನ ಮಾನ್ಯ ಮುಖ್ಯಮಂತ್ರಿಗಳಿಗೇ ಘನಗೌರವ ಡಾಕ್ಟರೇಟ್ ಕೊಡಲು ಸಿಂಡಿಕೇಟ್‌ನಲ್ಲಿ ಪಾಸ್

ಮಾಡಿದ್ದು, ನೋಡಿದ್ದು, ಕೇಳಿದ್ದು ನೆನಪಿದ್ದರೆ; ಸುಲಭವಾದ ಒಂದು ಉಪಾಯವನ್ನು ಆಯ್ಕೆ ಸಮಿತಿಗೆ ಸೂಚಿಸಬಹುದು; ಅದೇನಪ್ಪ ಅಂದರೆ, ಸಾಕ್ಷಾತ್ ಏಕೈಕ ಬುದ್ಧಿಜೀವಿ, ಬರಹಗಾರ, ಗೃಹಮಂತ್ರಿಯವರಿಗೇ ಯಾಕೆ ಮುಂದೆ ಎಂದಾದರೂ ಕಾವ್ಯ-ಮಹಾಕಾವ್ಯ ಬರದೇ ಬರೆಯುತ್ತಾರೆ ಎಂದು ಈ ಪಟ್ಟ ಕಟ್ಟಬಾರದು? ಇದಕ್ಕೆ ಯಾರು ತಕರಾರು ಮಾಡಬಹುದು? ಖಂಡಿತ ಬಳ್ಳಾರಿಯ ರೆಡ್ಡಿ ಬಂಧುಗಳು ಈಗಲೆ ಈ ಸಂಬಂಧಿಸಿ ನ್ಯಾಯಾಲಯಕ್ಕೆ ಹೋಗಲಾರರು ಎಂದು ನಂಬಬಹುದೇನೊ! ಯಾಕೆಂದರೆ ರೆಡ್ಡಿ ಜನಾಂಗದಲ್ಲಿ ಸದ್ಯ ಯಾರಿದ್ದಾರೆ, ರಾಷ್ಟ್ರಕವಿ ಪಟ್ಟ ಅಥವಾ ಪೀಠದ ಆರೋಹಣ ಮಾಡಬಲ್ಲವರು?

ಹೋಗಲಿ ಬಿಡಿ. ಮಹಾಕವಿಗಳೂ ಮಾಜಿ ಮುಖ್ಯಮಂತ್ರಿಗಳೂ ಕೇಂದ್ರದಲ್ಲಿ ಪವರ್‌ಫುಲ್ ಸ್ಥಾನದಲ್ಲಿರುವವರಿಗೇ ಈ ಪಟ್ಟ ಕಟ್ಟಿದರೆ, ಸಂಮಿಶ್ರ ಸರ್ಕಾರವೂ ಪೂರ್ಣಾವಧಿ ಉಳಿದಂತೆಯೂ ಆಯಿತು, ಆಯ್ಕೆ ಸಮಿತಿಗೇ ಉಳಿಸಿದ ಪುಣ್ಯ ಕೂಡ ಬಂದಂತೆಯೂ ಆಯಿತು. ಇನ್ನೇನಿಲ್ಲದಿದ್ದರೂ ಈ ಕವಿ ಗಳ ಕಲರವಕ್ಕಿಂತ ಇದು ಸುಲಭೋಪಾಯವಾದೀತಲ್ಲವೆ? ದಯವಿಟ್ಟು ಗಂಭೀರವಾಗಿ ಆಲೋಚಿಸ ಬೇಕಾಗಿ ಬಿನ್ನಹ.

ಪಾಪ ನಿಮಗೆ ತಿಳಿಯಿತೊ ಇಲ್ಲವೊ. ವೀರಶೈವರಾದರು ಶಿವರುದ್ರಪ್ಪನವರ ಹೆಸರು ಪಟ್ಟಿಯಲ್ಲಿ ನಮೂದಾಗುವುದು ನೂರಕ್ಕೆ ನೂರು ಅನುಮಾನ. ಒಂದು ಪಕ್ಷ ಸಿದ್ಧಯ್ಯಪುರಾಣಿಕರೇ ಬದುಕಿದ್ದರೆ, ತಮಗೆ ಆ ಪ್ರಶಸ್ತಿ ಬೇಡ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೊಡಿಸದೇ ಹೋದರೂ ಪರವಾಗಿಲ್ಲ ಎಂದು, ಶಿವರುದ್ರಪ್ಪ ಅವರ ಹೆಸರನ್ನು ಹಿಡಿದುಕೊಂಡು ದೇ. ಜವರೇಗೌಡರಲ್ಲಿ ಹೋಗಬಹುದಿತ್ತು. ಅವರ ಮಾತಿಗೆ ಜಿ. ನಾರಾಯಣ ಅವರೂ ಒಪ್ಪುತ್ತಿದ್ದರೇನೊ. ಇರಲಿ ಈಗ ಅದು ಕನಸಿನ ಮಾತು.

ಇನ್ನು ಉಳಿದಿರುವುದು ಚೆನ್ನವೀರ ಕಣವಿ, ಕಲಬುರ್ಗಿ, ಎಲ್. ಬಸವರಾಜು, ಪಾಟೀಲ್ ಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಚಿದಾನಂದಮೂರ್ತಿ. ಕಲಬುರ್ಗಿ, ಪಾಟೀಲ ಪುಟ್ಟಪ್ಪ ಅವರು ಗದ್ಯ ಕ್ಷೇತ್ರಗಳ ದಿಗ್ಗಜರು. ಎಲ್. ಬಸವರಾಜು ಅವರು ಇತ್ತೀಚೆಗೆ ಕವಿಯೂ ಆಗಿದ್ದಾರೆ ನಿಜ. ನೆನ್ನೆ ಮೊನ್ನೆ ಬಂದ ಯಾವುದಾದರು ಹುಡುಗನ ಹೆಸರನ್ನಾದರೂ ಸರಿ ಸಹಿಸಿಕೊಳ್ಳಬಹುದು, ಮಾತೆಂದರೆ ಜ್ಯೋತಿರ್‌ಲಿಂಗ ಎಂಬ ಈ ಮುದುಕರನ್ನು ಸರ್ಕಾರ ಇರಲಿ, ಆಯ್ಕೆ ಸಮಿತಿ ನೆನಪಿಸಿಕೊಳ್ಳುವುದಾದರು,. ಊಹೆಗೆ ನಿಲುಕದ ಮಾತು. ಇನ್ನು ಚಿದಾನಂದಮೂರ್ತಿ. ಮಾತೆತ್ತಿದರೆ ತುಂಗ-ಭದ್ರ ಹಳ್ಳಕ್ಕೇ ಬೀಳುವೆ ಎನ್ನುವ ಈ ಪುಣ್ಯಾತ್ಮನನ್ನು ಕಟ್ಟಿಕೊಂಡು ಏಗುವುದು ಹೇಗೆ? ಈಗಾಗಲೆ ಒಮ್ಮೆ ಕಮಲ ಹಂಪನಾ ಅವರು ಧಮಕಿಹಾಕಿ ಆಗಿದೆ ಎಂಬುದನ್ನು ಸಮಿತಿ ಮರೆಯಬಾರದು.

ಇನ್ನು ಬಾಕಿ ಚೆನ್ನವೀರ ಕಣವಿ, ಚಂದ್ರಶೇಖರ ಪಾಟೀಲರು. ಈಗಾಗಲೆ ಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೂ, ಅಮೇರಿಕಾಕ್ಕೂ ಕರೆದುಕೊಂಡು ಹೋಗಿ, ಸಲ್ಲಿಸಬೇಕಾದ ಸೇವೆ ಸಲ್ಲಿಸಿದೆ. ಹೀಗಿರುವಾಗ ಇವರಿಗೆ ರಾಷ್ಟ್ರಕವಿ ಸ್ಥಾನ ಕೊಟ್ಟರೆ, ಮುಂದೆ ಖಾಯಂ ಆಗಿ, ಬೇರೆ ಎಲ್ಲ ದೇಶ ವಿದೇಶಗಳಿಗೂ ಕರೆದುಕೊಂಡು ಹೋಗಬೇಕಾದ ಬಾಕಿಗೆ ಸಹಿಮಾಡಿದಂತೆ ಆದೀತಲ್ಲವೆ? ಆ ಬಿಲ್ಲು ಹಗರಣವೆ, ಆ ಶೀಲ (ಹಳೇ ಮೈಸೂರಿನ ಪ್ರಕಾರ ಶೀಲ್) ವಶೀಕರಣ ಪ್ರಕರಣವೆ ಬೇಡ ಎಂದು ಆಯ್ಕೆ ಸಮಿತಿ ತೀರ್ಮಾನಿಸಬಹುದೆ? ಅಥವಾ ಅಂದರಿಕಿ ಮಂಚಿವಾಡು ಎಂದು, ಚೆನ್ನವೀರ ಕಣವಿ ಅವರನ್ನು ಉತ್ತರಕರ್ನಾಟಕದ ಏಕೈಕ ಪ್ರತಿನಿಧಿ ಎಂದು ಸ್ವೀಕರಿಸಬಹುದೇ?

ಉತ್ತರ ಕರ್ನಾಟಕದ ಜನರ, ಜಾನಪದ ಪ್ರತಿನಿಧಿ ಎಂದು ನೀವೇನಾದರೂ ಷರಾ ಬರೆಯುವುದಾದರೆ, ಈಗಾಗಲೆ ಎರಡೆರಡು ಬಾರಿ (ರಾಮಕೃಷ್ಣ ಹೆಗ್ಗಡೆಯೇ ಬದುಕಿದ್ದರೆ ಜೀವಮಾನ ಪರ್ಯಂತ) ಕನ್ನಡ ಏಕೈಕ ವಿಶ್ವವಿದ್ಯಾಲಯದ ಕುಲ-ಪತಿಯಾಗಲಿದ್ದ ವ್ಯಕ್ತಿ ಸುಮ್ಮನಿರುವುದು ಉಂಟೊ? ಮುಂದಿನ ಜ್ಞಾನಪೀಠ ಯಾರಿಗೆ ಅಂದುಕೊಂಡಿದ್ದೀರಿ? ಎಂಎಲ್‌ಸಿಗೂ ರಾಷ್ಟ್ರಕವಿ ಕುರ್ಚಿಗೂ ಏನು ವ್ಯತ್ಯಾಸ ಎಂಬುದರ ಬಗ್ಗೆ ತೀರ್ಮಾನ ಆಗದೆ, ಘೋಷಣೆ ಆಗಲು ಬಿಡುವುದಿಲ್ಲ ಎಂದು ಕೂತಿದ್ದಾರಂತೆ. ಆಯ್ಕೆ ಸಮಿತಿ ಈ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿದೆ.

ಇನ್ನು ದಲಿತರ ಎಡಗೈ ಬಲಗೈ ಸಮಸ್ಯೆ. ಸದ್ಯ ಇರುವ ಇಬ್ಬರೂ ಪ್ರಾಧಿಕಾರದ ಅಧ್ಯಕ್ಷರಾಗಿ, ಎಂ.ಎಲ್.ಸಿ.ಗಳಾಗಿ ಬೆಳೆಯುತ್ತಿದ್ದಾರೆ. ಅವರು ಇತ್ತ ಮುಖಮಾಡಿಯಾರು ಎನ್ನುವ ನಂಬಿಕೆಯಿಲ್ಲ. ಹಾಗೂ ಎರಡೆರಡು ಪಟ್ಟ, ಇಬ್ಬಿಬ್ಬರು ಪಟ್ಟ ಮಹಿಷಿಗಳನ್ನು ಉಳ್ಳವರ ಚರಿತ್ರೆ ನೆನಪಿದ್ದರೆ, ಏಕೆ ಆಗಬಾರದು ಎಂಬ ಒಂದು ಪಟ್ಟುವರಸೆಗೆ ಜಟ್ಟಿಗಳಂತೆ ನಿಂತರೆ, ಅಗ್ರಹಾರ ಕೃಷ್ಣಮೂರ್ತಿ ಅವರಿಗಿಂತ ಕ್ಯಾಂಡಿಡೇಟ್ ಬೇರೆ ಇದ್ದರೆ ದಯವಿಟ್ಟು ಈ ಕೂಡಲೆ ಆಯ್ಕೆ ಸಮಿತಿಗೆ ಸಂಪರ್ಕಿಸಿ. ಹೇಗೂ ಆಯ್ಕೆ ಸಮಿತಿಯಲ್ಲಿಯೇ ಯಾರಿಗಾದರು ರಾಷ್ಟ್ರಕವಿ ಪಟ್ಟ, ಮುಂದಿನ ಸಾರಿಗಾದರು ಸಿಕ್ಕೀತು ಎಂಬ ಒಪ್ಪಂದ ಇದ್ದರೂ, ಅಲ್ಲಿಯವರೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅವಾರ್ಡ್ ಬೇಡವೆ? ಆಮೂರ, ರಾಮಚಂದ್ರನ್, ಗಿರಡ್ಡಿ ಆಮೇಲೆ ಬರಬಹುದಾದ ನರಹಳ್ಳಿಯೊ, ನಾಗಭೂಷಣಸ್ವಾಮಿಯೊ, ವೆಂಕಟೇಶ ಮೂರ್ತಿಯೊ, ಕುಂ. ವೀರಭದ್ರ ಇತ್ಯಾದಿಯೊ ಎಂದು ಹಿಡಿಯುತ್ತ ಕೂತುಕೊಳ್ಳುವುದಕ್ಕಿಂತ, ಮೂಲ ವಿಗ್ರಹಕ್ಕೇ ಕೈಹಾಕಿದರೆ ಎರಡೊಂದಾದೀತಲ್ಲವೆ!

ನೀವು ಜಟ್ಟಿ ಇತ್ಯಾದಿ ತೆಗೆದರೆ, ದೇವೇಗೌಡರನ್ನು ಮೀರಿಸುವ ಒಳಮೀಸಲಾತಿಗೆ ಮುಕಡಪ್ಪ ಅವರನ್ನೇ ಮುಂದೆ ಬಿಟ್ಟು ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶರು ಮುಂದೆ ನುಗ್ಗಿ ಇಲ್ಲ ರಾಷ್ಟ್ರಕವಿ ಪಟ್ಟ, ಇಲ್ಲ ಕುಲಪತಿ ಕುರ್ಚಿ ಇಲ್ಲ ಇಲ್ಲ ಎಂದರೆ, ಕುಮಾರಸ್ವಾಮಿಯವರನ್ನು ಕಾಪಾಡುವವರು ಯಾರು? ಮುನ್ನುಡಿ ಬರೆಸಿಕೊಂಡು ಪುನೀತರಾದ ಗೃಹಮಂತ್ರಿಗಳ ಗತಿ ಏನು?

ಅಯ್ಯ ತಲಸ್ಪರ್ಶಿ, ಸಾಕು ನಿನ್ನ ಈ ಅಕ್ಷರ ಮಾಧ್ಯಮದ ವ್ಯಭಿಚಾರದ ಕತೆ. ನಿಲ್ಲಿಸು. ಇಲ್ಲವೆ ಎಸ್. ದಿವಾಕರರಂತೆ ನಿವೃತ್ತನಾಗಿ ಒಬ್ಬ ಮಹಿಳೆ ಅಥವಾ 'ಮಹಿಳಾ ಲೇಖಕಿ'ಯನ್ನು ಹೆಸರಿಸದ ನಿನ್ನಯ ಪೌರುಷತ್ವದ ಗುಟ್ಟೇನು? ಎಂದರೆ, ಬಹುಶಃ ನೀವು ವೈದೇಹಿ, ನಿರುಪಮ, ಶಾಂತಾದೇವಿ ಕಣವಿ, ಹೋಗಲಿ ಅಂಬಾರಿ ಸವಾರಿ ಮಾಡಿದ ಮಹಾಕವಿ ಲತಾರಾಜ ಶೇಖರ್ ಎಂದಾಗಲಿ, ಅದರಲ್ಲೂ ಉತ್ತರಕರ್ನಾಟಕದ ಅಭಿವೃದ್ಧಿ ಯೋಜನೆಯ ಡಾ॥ ನಂಜುಂಡಪ್ಪ ವರದಿ ಆಧಾರದ ಮೇಲೆ ಗೀತಾ ನಾಗಭೂಷಣ, ಬಿ.ಟಿ. ಲಲಿತಾ ನಾಯಕ್, ಹೇಮಾ ಪಟ್ಟಣಶೆಟ್ಟಿ, ಸುಕನ್ಯಾ ಮಾರುತಿ, ಮುಕ್ತಾಯಕ್ಕ ಅವರಲ್ಲಿ ಒಬ್ಬರನ್ನು ಆರಿಸಿ, ಸಾಂಸ್ಕೃತಿಕ ನ್ಯಾಯ ನೀಡುವುದು ಸಾಧ್ಯ ಎನ್ನುವುದಾದರೆ, ಅಲ್ಲಿಯೂ ಆಯ್ಕೆ ಸಮಿತಿ ಘನಘೋರ ಅನ್ಯಾಯ ಮಾಡಿದೆ. ಮಹಿಳಾ ಲೇಖಕಿಯರ ಪ್ರಾತಿನಿಧಿಕ, ಸರ್ವಪ್ರಕಾರಗಳಲ್ಲಿ ದುಡಿದ ಅತ್ತ ಕೆಳವರ್ಗಕ್ಕೆ ಇತ್ತ ಮೇಲುವರ್ಗಕ್ಕೂ ಏಕಕಾಲಕ್ಕೆ ಸಲ್ಲುವ ವ್ಯಕ್ತಿಯನ್ನೇ ಸಮಿತಿಯ ಕೇವಲ ಸದಸ್ಯರನ್ನಾಗಿ ಮಾಡಿ, ನಿಜವಾಗಿಯೂ ಈ ಬಾರಿ ಆ ಅವಕಾಶ ಕಳೆದು ಹೋಗುವಂತೆ ಮಾಡಿದ್ದಾರೆ.

ಹೋಗಲಿ ಬಿಡಿ. ಮುಗುಂ ಆಗಿ, ರಾತ್ರೋರಾತ್ರಿ ಆಯ್ಕೆ ಮಾಡಲು ರಚಿಸಿದ್ದಲ್ಲ ಸಮಿತಿ. ಒಬ್ಬೊಬ್ಬರೂ ಬಾಯಿಬಿಟ್ಟರೆ, ದಿನಪತ್ರಿಕೆಯ ಪೂರ್ತಾಪುಟ ತುಂಬುವ ಶಕ್ತರು ಅಲ್ಲಿದ್ದಾರೆ. ಹೀಗಾಗಿ ಏನೋ ಒಂದು ಪವಾಡ ನಡೆಯಲಿದೆ. ಏನು ನಡೆದರೂ ಪವಾಡ ಸದೃಶವ್ಯಕ್ತಿ ದೇವನೂರ ಮಹದೇವ ಈ ರಾಜಕೀಯ ಆಟದಲ್ಲಿ ದಾಳವಾಗಲಾರರೇನೊ! ಸರ್ವೋದಯಾಗ್ನಿ ಸುಮ್ಮನೆ ಬಿಟ್ಟೀತೆ!

ಅಂತಹ ಪವಾಡಕ್ಕೆ ಮುನ್ನ, ಗಡಿವಿವಾದ ಎಲ್ಲಿಗೆ ಮುಟ್ಟುತ್ತದೋ? ಕಾಸರಗೋಡು, ಬೆಳಗಾಂ ಇರಲಿ, ರಾಷ್ಟ್ರಕವಿ ಪಟ್ಟ ಕೂಡ ಹಳೆಯ ಮೈಸೂರಿಗೆ, ಮೇಲುವರ್ಗದವರಿಗೆ ಸಂದಾಯವಾಯಿತೇ ಹೇ ರಾಮಾ ಎಂದು ಕೊರಗಿ ಕೊರಗಿ ಕುಯ್‌ಗುಟ್ಟಿದರೆ, ಉತ್ತರ ಹೇಳಬೇಕಾಗುತ್ತದೆ : ಜವರೇಗೌಡರೆ, ನಿಸ್ಸಾರರೆ, ಕಮಲಮ್ಮನವರೆ, ಬರಗೂರರೆ, ವಿವೇಕರೆ, ಪಟ್ಟಣಶೆಟ್ಟರೆ? ನಿರಂಜನರೇನೊ ಅಲಕ್ ಅಂದಾರು, ವಿಠಲಮೂರ್ತಿಯವರೆ ಅಮೇರಿಕಾ ಪ್ರವಾಸ ಕೈಗೊಂಡು ಉಗಿಸಿಕೊಂಡಿದ್ದೀರಿ; ಈಗ ನಿಮ್ಮ ಹಣೇಬರಹ ತೀರ್ಮಾನವಾದೀತು ಜೋಕೆ! ಇದರಿಂದ ಸುವರ್ಣ ಕರ್ನಾಟಕದಲ್ಲಿ ಒಂದು ಮಸಿಪ್ರಕರಣ ಆಗದಿರಲಿ!